ಮಾತನಾಡಲಿಕ್ಕೆ ಒಂದು ಅವಕಾಶ ಇದೆಯೋ ಇಲ್ಲವೋ ?

(ಗೊಂದಲ)

ಅಧ್ಯಕ್ಷರು :- ನೋಡಿ, ಅವಕಾಶ ಕೊಡುವ ಸಮಯದಲ್ಲಿ ಅವಕಾಶ ಕೊಡುತ್ತೇನೆ. ಸದಾ ಕಾಲ ಅವಕಾಶ ಬೇಡಿದರೆ ಆಗುವುದಿಲ್ಲ; ಕುಳಿತುಕೊಳ್ಳಿ. ನಾನು ಮಧ್ಯಾಹ್ನ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಕಾವೇರಿ ನಿಲುವಳಿ ಸೂಚನೆಯ ಬಗ್ಗೆ ತಾವು ಪ್ರಸ್ತಾಪ ಮಾಡಬೇಕು.

ಶ್ರೀ ಎ.ಎಸ್. ನಾಡಗೌಡ :- ನಿನ್ನೆ ಈ ಬಗ್ಗೆ ಆಗಲೇ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಮತ್ತೆ ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು ಗೊಂದಲ ಸನ್ನಿವೇಶ ಉಂಟು ಮಾಡುವಂತಹ ಪರಿಸ್ಥಿತಿಗೆ ಈ ಸದನ ಇಳಿಯಬಾರದು, ಅದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ ಒಂದು ಪಕ್ಷದ ಆಂತರಿಕವಾದ ವಿಚಾರಗಳನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಾದರೆ ಹೇಗೆ ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ :- ಇದರಿಂದ ಇಡೀ ಸದನಕ್ಕೆ.......

ಶ್ರೀ ವಾಟಾಳ್ ನಾಗರಾಜ್ :- ಇದು ಆಂತರಿಕ ವಿಚಾರ ಅಲ್ಲ; ಮುಖ್ಯ ಮಂತ್ರಿಗಳ ಮೇಲೆ ಆದ ಹಲ್ಲೆ ಪ್ರಕರಣ.

(ಗೊಂದಲ)

ಅಧ್ಯಕ್ಷರು :- ಆಯಿತು; ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ರಮೇಶ್‌ರವರೇ, ತಾವೂ ಸಹ ಕುಳಿತುಕೊಳ್ಳಬೇಕು.

ಶ್ರೀ ಎಸ್. ರಮೇಶ್ :- ಸರ್ಕಾರವನ್ನೆಲ್ಲಾ ಅವರೇ ನಡೆಸುತ್ತಿದ್ದಾರೆ. ಪಾರ್ಟಿನಲ್ಲೂ ಅವರನ್ನೇ ಕೇಳಿ ನಡೆಸಬೇಕೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ನಿಮಗೆ ನಾಚಿಕೆ ಇದೆಯೇ ? ನನಗೆ ನೋವಾಗುತ್ತಿದೆ; ನಗುತ್ತಾ ಇದ್ದೀರಿ, ಪೀಠದ ಮುಂದೆ ಕುಳಿತುಕೊಂಡು ನಗುತ್ತಾ ಇದ್ದೀರಲ್ಲಾ! ಅವಿವೇಕದ ಪರಮಾವಧಿ ಇದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ನಗುವುದು ಏನು ಇದೆ ಎಂದು ನಗುತ್ತಾ ಇದ್ದೀರಿ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಏನು ದೊಂಬರಾಟ ಆಡುತ್ತಿದ್ದೀರಾ ?

(ಗೊಂದಲ)

ನಿಯಮ 68ರ ಮೇರೆಗೆ ಚರ್ಚೆ

ವಿಷಯ :- ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ ) :-ಮಾನ್ಯ ಅಧ್ಯಕ್ಷರೇ, ಈಗ ನಾನು ತಮ್ಮ ಪೀಠವನ್ನು ನೋಡಿ ಮಾತನಾಡಬೇಕು ಎಂದು ತಾವು ತೀರ್ಪನ್ನು ಕೊಡುತ್ತಾ ಇದ್ದೀರಿ. ಅದು ಬಹಳ ಕಷ್ಟವಾಗುತ್ತದೆ. ಏಕೆಂದರೆ ಬರೀ ನಿಮ್ಮನ್ನು ನೋಡುತ್ತಾ ಇದ್ದರೆ ಇವರ ಪರಿಸ್ಥಿತಿಯನ್ನು ಸಹ ನೋಡಲೇಬೇಕಾಗುತ್ತದೆ.

ಆದ್ದರಿಂದ ದಯವಿಟ್ಟು ತಮ್ಮ ತೀರ್ಪನ್ನು ಪುನರ್ ಪರಿಶೀಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಮಾನ್ಯ ಅಧ್ಯಕರೇ, ಕಾವೇರಿ ಪ್ರಶ್ನೆಯ ಬಗ್ಗೆ ಚರ್ಚಿಸಲು ತುರ್ತಾಗಿ ಶಾಸನ ಸಭೆಯನ್ನು ಕರೆಯಬೇಕು ಎಂದು ಹೇಳಿ ರಾಜ್ಯಪಾಲರನ್ನು ಎಲ್ಲಾ ವಿರೋಧ ಪಕ್ಷದ ಮುಖಂಡರುಗಳು ಭೇಟಿ ಮಾಡಿ ಕಾವೇರಿ ವಿಚಾರದಲ್ಲಿ ಮುಖ್ಯ ಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯದ ಹಿತವನ್ನು ಕಾಪಾಡುವಲ್ಲಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡಿದ್ದಾರೆಂದು ಹೇಳಿದ್ದೇವೆ.

ರಾಜ್ಯದ ಹಿತವನ್ನು ಕಾಪಾಡುವಲ್ಲಿ ತಮ್ಮ ಜವಾಬ್ದಾರಿಯನ್ನು ಇವರು ಕಳೆದುಕೊಂಡಿದ್ದಾರೆಂದು ನಾವು ನಿರಂತರವಾಗಿ, ರಾಜ್ಯದ ಎಲ್ಲಾ ಕಡೆ ಹೇಳಿ, ಅಂತಿಮವಾಗಿ ರಾಜ್ಯಪಾಲರನ್ನು ಭೇಟಿ ಮಾಡಿ ತುರ್ತು ಶಾಸನ ಸಭೆಯನ್ನು ಕರೆಯಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೆವು. ಇದರ ಜೊತೆಗೆ ಬಹಳ ಅತಿ ಎತ್ತರದಲ್ಲಿ ನಡೆದಂಥ ಘಟನೆಗಳ ಕೆಲವು ವಿಶ್ಲೇಷಣೆಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಾವೇರಿ ನ್ಯಾಯಮಂಡಲಿಯ ಮಧ್ಯಂತರ ಆದೇಶವನ್ನು ಕೇಂದ್ರ ಸರ್ಕಾರದವರು ಒಪ್ಪಿ, ಆದೇಶವನ್ನು ಜಾರಿ ಮಾಡಲು ಕೇಂದ್ರ ಸರ್ಕಾರದವರು ಮುಂದೆ ಬರಬೇಕೆಂದು ಹೇಳಿ ತಮಿಳುನಾಡಿನ ಮುಖ್ಯಮಂತ್ರಿಯಾದ ಕುಮಾರಿ ಜಯಲಲಿತರವರು ಸತ್ಯಾಗ್ರಹಮಾಡಲು ಆರಂಭಿಸಿದರು. ಅವರ ಸತ್ಯಾಗ್ರಹವನ್ನು ಅಂತ್ಯ ಮಾಡುವ ಒಂದು ತರಾತುರಿಯಲ್ಲಿ ಪ್ರಧಾನ ಮಂತ್ರಿಯವರು ಮತ್ತು ಕೇಂದ್ರದ ಜಲಸಂಪನ್ಮೂಲ ಸಚಿವರು ಎಷ್ಟು ಕಾತುರತೆಯನ್ನು ತೆಗೆದುಕೊಂಡರು ಎಂದರೆ ಆ ಒಂದು ವಿದ್ಯಮಾನಗಳನ್ನು ವಿಶ್ಲೇಷಣೆ ಮಾಡಿದರೆ, ಅವರಿಗೆ ಕರ್ನಾಟಕದ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲ, ಕರ್ನಾಟಕದ ಬಗ್ಗೆ ಸ್ವಲ್ಪವೂ ಚಿಂತನೆ ಇಲ್ಲ, ಕರ್ನಾಟಕ ರಾಜ್ಯದ ಜನತೆಯ ಬಗ್ಗೆ ಅವರಿಗೆ ಸ್ವಲ್ಪವೂ ಕರುಣೆ ಇಲ್ಲವೆನ್ನತಕ್ಕಂಥ ಒಂದು ಚಿತ್ರ ನಮಗೆ ಗೋಚರವಾಯಿತು. ಕುಮಾರಿ, ಜಯಲಲಿತಾರವರ ಸತ್ಯಾಗ್ರಹವನ್ನು ಅಂತ್ಯ ಮಾಡುವುದಕ್ಕೆ ರಾತ್ರೋರಾತ್ರಿ ವಿಶೇಷ ವಿಮಾನದಲ್ಲಿ ಕೇಂದ್ರದ ಮಂತ್ರಿಗಳಾದ ವಿ.ಸಿ.ಶುಕ್ಲಾರವರು ದಯಮಾಡಿಸಿದರು. ಅವರನ್ನು ಒಂದು ಗಂಟೆ ರಾತ್ರಿಯಲ್ಲಿ ನಮ್ಮ ಮುಖ್ಯಮಂತ್ರಿಗಳೂ ಸೇರಿದಂತೆ ಸಚಿವ ಸಂಪುಟದ ಅನೇಕ ಮಂತ್ರಿಗಳು ವಿಮಾನ ನಿಲ್ದಾಣದಿಂದ ರಾತ್ರೋರಾತ್ರಿ ಕರೆದು ಕೊಂಡು ಬಂದು ಎರಡು ಗಂಟೆ ರಾತ್ರಿಯಲ್ಲಿ ಔತಣ ವ್ಯವಸ್ಥೆ ಎಲ್ಲವನ್ನೂ ಮಾಡಿದರು. ಆ ರಾತ್ರಿ 12 ಗಂಟೆಯಿಂದ 2 ಗಂಟೆಯೊಳಗೆ ನಡೆದ ಪಿತೂರಿಯಾವುದು ಎಂಬುದು ಬಹಳ ಮುಖ್ಯ. ರಾತ್ರಿ 12 ಗಂಟೆಯಿಂದ 2 ಗಂಟೆಯವರೆಗೆ ಕರ್ನಾಟಕ ರಾಜ್ಯದಲ್ಲಿ ನಡೆದ ಪಿತೂರಿ ಏನು? ಪ್ರಧಾನ ಮಂತ್ರಿಯವರ ಆದೇಶದ ಮೇಲೆ ಇಲ್ಲಿಗೆ ಯಾವ ವಿ.ಸಿ. ಶುಕ್ಲಾರವರು ಬಂದಿದ್ದರು. ಆ ವಿ.ಸಿ.ಶುಕ್ಲಾರವರಿಗೂ, ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೂ ನಡೆದಂಥ ಮಾತುಗಳೇನು, ಕರಾರುಗಳೇನು, ಗೋಪ್ಯ ಕರಾರುಗಳೇನು, ಇದರ ಬಗ್ಗೆ ತಿಳಿಸಬೇಕೆಂದು ಮಾನ್ಯಮುಖ್ಯಮಂತ್ರಿಗಳನ್ನು ಈ ಒಂದು ಸಭೆಯ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ, ಆ ಒಂದು ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಬೇಕು. ಅದು ಅತಿಮುಖ್ಯ. ಇವರಿಗೂ ಮಾನ್ಯ ಶುಕ್ಲಾರವರಿಗೂ ನಡೆದಿರತಕ್ಕಂಥ ಪತ್ರ ವ್ಯವಹಾರ ಮತ್ತು ಇವರಿಗೂ ಶುಕ್ಲಾರವರಿಗೂ ನಡೆದಿರತಕ್ಕಂಥ ಮಾತಿನ ವ್ಯವಹಾರ, ಇವರು ಅವರು ಬಹಳ ಗೋಪ್ಯವಾಗಿ ಮಾತನಾಡಿರತಕ್ಕಂಥದ್ದು ಏನು ಇದೆ, ಅದು ಬಹಳ ಅತಿಮುಖ್ಯ. ಈ ಅತಿಮುಖ್ಯವಾದಂಥ ಕಾಗದ ಪತ್ರಗಳು ಈ ಸದನಕ್ಕೆ ಬಹಳ ಅಮೂಲ್ಯವಾದದ್ದು. ಈ ಸದನದ ವಸ್ತುವಾಗಿ ಅದು ಬರಬೇಕು. ಈ

ಸದನದ ಮುಂದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಬೇಕು. ಜೊತೆಗೆ ಪ್ರಧಾನ ಮಂತ್ರಿಗಳಿಗೆ ಇವರು ಬರೆದಿರತಕ್ಕಂಥ ಪತ್ರಗಳೇನು, ಇವರು ಅವರು ಗೋಪ್ಯವಾಗಿ ಮಾಡಿರತಕ್ಕಂಥ ವಿಚಾರಗಳೇನು, ಇವೆಲ್ಲವೂ ಈ ಸದನದ ಮುಂದೆ ಬರಬೇಕು. ಇಲ್ಲಿಂದ ತಮಿಳುನಾಡಿಗೆ ಹೋದಂಥ ವಿ.ಸಿ. ಶುಕ್ಲಾರವರು ಅವರ ಬೇಡಿಕೆಯನ್ನು ನಾವು ಈಡೇರಿಸಿದ್ದೇವೆ, ಈ ಬೇಡಿಕೆಗೆ ಕರ್ನಾಟಕದ ಮುಖ್ಯಮಂತ್ರಿಯವರಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ಒಪ್ಪಿದ್ದಾರೆಂದು ಹೇಳಿ ಅವರನ್ನು ಸತ್ಯಾಗ್ರಹದಿಂದ ಏಳಿಸಿದರು. ಇವರು ಒಪ್ಪಂದ ಮಾಡಿಕೊಂಡಿರುವ ವಿಚಾರಗಳು ಏನು? ಯಾವ ಒಪ್ಪಂದವಾಯಿತು? ಏತಕ್ಕೆಂದರೆ ಅವರು ಅಷ್ಟು ಸುಲಭವಾಗಿ ಸತ್ಯಾಗ್ರಹವನ್ನು ಬಿಡತಕ್ಕಂಥವರಲ್ಲ. ಆದರೂ ಸತ್ಯಾಗ್ರಹವನ್ನು ಬಿಡಬೇಕಾದರೆ ಒಂದು ಒಪ್ಪಂದ ಆಗಿರಲೇಬೇಕು. ಅದು ಏನು ಒಪ್ಪಂದ ? ನಿಮಗೂ ಅವರಿಗೂ ನಡೆದಿರತಕ್ಕಂಥ ಕರಾರು ಏನು? ಅದರ ವಿಚಾರವೇನು ಎನ್ನುವುದನ್ನು ಬಹಿರಂಗಪಡಿಸಬೇಕು ಎನ್ನತಕ್ಕಂಥದ್ದು ಒಂದು ಪ್ರಮುಖವಾದಂಥ ವಿಚಾರ.

ಇದರ ಜೊತೆಗೆ ನಮ್ಮ ಹಿಂದೆ ಎಷ್ಟು ಪಿತೂರಿ ನಡೆದಿದೆ ಎಂಬುದಕ್ಕೆ ಕೆಲವು ನಿದರ್ಶನಗಳನ್ನು ಹೇಳುತ್ತಿದ್ದೇನೆ. ಕು.ಜಯಲಲಿತಾ ಅವರು ಸತ್ಯಾಗ್ರಹ ಮಾಡುವಾಗ ಆ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಲು ಯಾರು ಯಾರು ಹೋಗಿದ್ದರು ? ಮಹಾರಾಷ್ಟ್ರದ ಮಾಜಿ ರಾಜ್ಯಪಾಲ ಶ್ರೀ ಸಿ.ಸುಬ್ರಹ್ಮಣ್ಯಂ ಅವರು ಹೋಗಿದ್ದರು. ಅಲ್ಲಿನ ಇಡೀ ಸಿನಿಮಾ ರಂಗವೇ ಅಲ್ಲಿ ಕುಳಿತಿತ್ತು. ಜೊತೆಗೆ ಅತಿ ಮುಖ್ಯವಾಗಿ ಈ ದೇಶದ ಮಾಜಿ ರಾಷ್ಟ್ರಪತಿಗಳಾದ ಶ್ರೀಮಾನ್ ವೆಂಕಟರಾಮನ್ ಅವರು ಹೋಗಿದ್ದರು. ಇದು ಬಹಳ ಮುಖ್ಯ. ತಮಗೆ ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ, ಅವರು ಈ ದೇಶದ ರಾಷ್ಟ್ರಪತಿಗಳಾಗಿದ್ದರೇ ಹೊರತು ತಮಿಳ್ನಾಡಿನ ರಾಷ್ಟ್ರಪತಿಯಾಗಿರಲಿಲ್ಲ. ಅವರು ರಾಷ್ಟ್ರಪತಿಯಾಗಿ ಕಾವೇರಿ ಸಂಬಂಧದಲ್ಲಿ ಅವರು ನಡೆದುಕೊಂಡಿರತಕ್ಕ ವಿಚಾರಗಳ ಬಗ್ಗೆ ನಮಗೆ ಅನುಮಾನಗಳು ಗಾಢವಾಗಿವೆ. ಅವರು ನಿಜವಾಗಿಯೂ ರಾಷ್ಟ್ರಪತಿಗಳಾಗಿ ಒಂದು ರಾಜ್ಯದ ಪಕ್ಷಪಾತಿಗಳಾಗಿ ನಡೆದುಕೊಂಡಿದ್ದಾರೆ. ಅವರ ಪ್ರೇರಣೆಯಿಂದ, ಪ್ರಭಾವದಿಂದ, ಒತ್ತಾಯದಿಂದ ನ್ಯಾಯ ಮಂಡಲಿ ರಚನೆಯಾಗಿ ನಮಗೆ ಆಗಿರತಕ್ಕ ಅನ್ಯಾಯ ಎಷ್ಟು ಎಂಬುದಕ್ಕೆ ಪುಷ್ಟೀಕರಣ ಕೊಡುತ್ತಿದ್ದೇನೆ. ಈ ರೀತಿ ಪುಷ್ಟೀಕರಣ ಕೊಡುವುದಕ್ಕೆ ಆಧಾರಗಳು ಏನು ಎಂದು ಕೇಳುವುದಾದರೆ, ಅದಕ್ಕೆ ಆಧಾರ ಪ್ರತಿ ಹೆಜ್ಜೆಗೂ ತಮಿಳ್ನಾಡಿನ ಎಲ್ಲರನ್ನೂ ಅವರು ಸಂತೈಸಿದರು. ತಮಿಳ್ನಾಡಿನ ಎಲ್ಲಾ ಪಕ್ಷದ ಮುಖಂಡರುಗಳನ್ನು ಭೇಟಿಯಾದರು. ತಮಿಳ್ನಾಡಿನ ಎಲ್ಲಾ ಪಕ್ಷದ ಮುಖಂಡರನ್ನು ರಾಷ್ಟ್ರಪತಿ ಭವನಕ್ಕೆ ಕರೆಸಿದರು. ಕಾವೇರಿ ಸಂಬಂಧದಲ್ಲಿ ಅದು ಕಾವೇರಿಯ ವಿರುದ್ಧದ ಪಿತೂರಿಯ ಕೂಪವಾಗಿತ್ತು ಎಂದು ನಾನು ಹೇಳುತ್ತೇನೆ. ಅದು ಶ್ರೀ ವೆಂಕಟರಾಮನ್ ಅವರ ಕಾಲದಲ್ಲಿ ನಡೆದದ್ದು. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಈ ಸಂಬಂಧದಲ್ಲಿ ಒಂದು ಸಮಗ್ರ ತನಿಖೆಯನ್ನು ಕಾವೇರಿ ಸಂಬಂಧದಲ್ಲಿ ನಡೆದ ವ್ಯವಹಾರಗಳ ಬಗ್ಗೆ ನಡೆಸುವುದಕ್ಕೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ನೇಮಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಮಾಡುತ್ತಿದ್ದೇನೆ. ಇಂಥ ಪ್ರಸಂಗದಲ್ಲಿ ಇವತ್ತು ನಾವು ಸುಮ್ಮನೆ ಬರೀ ಅಂಕಿ ಅಂಶಗಳನ್ನು ಹೇಳಿಕೊಂಡು ಕುಳಿತಿರತಕ್ಕ ವಿಧಾನ ಸರಿಯಲ್ಲ. ಒಂದು ರಾಜಕೀಯವಾದ ನಿರ್ಧಾರಕ್ಕೆ ನಾವು ಇವತ್ತು ಬರಬೇಕೆಂದು ನಾನು ಈ ಸರ್ಕಾರವನ್ನು ನೇರವಾಗಿ ಕೇಳುತ್ತಿದ್ದೇನೆ. ಹಿಂದೆ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಮೊದಲಿನಿಂದ ಏನು ಹೇಳಿದರು ಅದನ್ನು ಇಡೀ ರಾಜ್ಯದ ಉದ್ದಗಲಕ್ಕೂ ಹೇಳಿಕೊಂಡು ಬಂದರು.

ನಮಗೆ ನ್ಯಾಯ ಮಂಡಲಿಯ ನೇಮಕ ಬೇಡ, ನಾವು ಮಾತುಕತೆಯಿಂದ ಇದನ್ನು ಬಗೆಹರಿಸುತ್ತೇವೆ ಎಂದರು. ಹೀಗೆ ನ್ಯಾಯ ಮಂಡಲಿಯ ನೇಮಕ ಬೇಡ ಎಂದು ಇಡೀ ರಾಜ್ಯದ ಉದ್ದಗಲಕ್ಕೂ ಹೇಳಿ, ಕೊನೆಗೆ ಈ ಶಾಸನ ಸಭೆಯಲ್ಲಿ ಮಾತನಾಡಿ ಅಂತಿಮವಾಗಿ ನ್ಯಾಯ ಮಂಡಲಿಯನ್ನು ಈ ಸದನದಲ್ಲಿ ಅವರು ಒಪ್ಪಿದರು. ನೀವು ಯಾರೇ ಒಪ್ಪಿದರೂ ನಾನು ಒಪ್ಪುವುದಿಲ್ಲವೆಂದು ನೇರವಾಗಿ ಹೇಳಿದೆ. ಆಗ ಶ್ರೀ ವೀರೇಂದ್ರ ಪಾಟೀಲರು ಹೇಳಿದರು, ಇಡೀ ಸದನವನ್ನು ಒಪ್ಪಿಸಬಹುದು, ಆದರೆ ನಿಮ್ಮ ಒಬ್ಬರನ್ನು ಒಪ್ಪಿಸುವುದಕ್ಕಾಗುವುದಿಲ್ಲವೆಂದು ನನ್ನ ಮೇಲೆ ಮಾತನಾಡಿದರು. ಇವತ್ತು ನಮಗೆ ಆಗಿರತಕ್ಕ ಪರಿಸ್ಥಿತಿ ಏನು ? ನ್ಯಾಯ ಮಂಡಲಿಯಿಂದ ಮರಣ ಶಾಸನವನ್ನು ಬರೆದಿದ್ದಾರೆ. ನ್ಯಾಯ ಮಂಡಲಿಯ ಮಧ್ಯಂತರ ಆದೇಶದಿಂದ ಆಗಿರುವುದು ಕನ್ನಡಿಗರ ಮರಣ ಶಾಸನವೇ ಹೊರತು ವರವಲ್ಲ. ಕನ್ನಡಿಗರಿಗೆ ಶಾಪವಾಗಿದೆ. ವೀರೇಂದ್ರ ಪಾಟೀಲರ ಕಾಲದಲ್ಲಿ ಅದು ಸರಿಯಲ್ಲ ಎಂದೆವು. ಆಮೇಲೆ ಬಂಗಾರಪ್ಪನವರು ಬಂದರು. ಕೊನೇ 3 ತಿಂಗಳಲ್ಲಿ ಇಡೀ ವಿರೋಧ ಪಕ್ಷದವರು ಬಂಗಾರಪ್ಪನವರು ಕಾವೇರಿ ನ್ಯಾಯ ಮಂಡಲಿ ವಿಚಾರದಲ್ಲಿ ಕರೆದಂಥ ಸಭೆಗೆ ಬಹಿಷ್ಕಾರ ಹಾಕಿದೆವು. ನ್ಯಾಯ ಮಂಡಲಿಗೆ ಸರ್ಕಾರ ಬಹಿಷ್ಕಾರ ಹಾಕುತ್ತದೆಯೇ ಅಂದರೆ ಅದು ಬಹಿಷ್ಕಾರ ಹಾಕಲಿಲ್ಲ. ಬಹಿಷ್ಕಾರ ಹಾಕುವುದಾದರೆ ನಾವು ಬರುತ್ತೇವೆ ಅಂದೆವು. ಅವರು ಮಾತ್ರ ಬಹಿಷ್ಕಾರ ಹಾಕಲಿಲ್ಲ. ನಾನು ನೇರವಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳುತ್ತಿದ್ದೇನೆ. ನಿಮ್ಮ ಸರ್ಕಾರದ ನಿಲುವು ಏನು ? ಕಾವೇರಿ ನ್ಯಾಯ ಮಂಡಲಿಯ ಬಗ್ಗೆ ನಿಮ್ಮ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿ. ಆ ನಿಲುವನ್ನು ಸ್ಪಷ್ಟಪಡಿಸದಿದ್ದರೆ ಇಡೀ ರಾಜ್ಯವನ್ನು ಕತ್ತಲೆಯಲ್ಲಿ ಇಡುತ್ತಿದ್ದೀರಿ, ಇಡೀ ರಾಜ್ಯವನ್ನು ಒಂದು ರೀತಿಯಲ್ಲಿ ದಾರಿ ತಪ್ಪಿಸುತ್ತೀದ್ದೀರಿ ಎಂದು ಹೇಳಬೇಕಾಗುತ್ತದೆ. ಇದು ಸರಿಯಲ್ಲ. ನಿಮ್ಮ ಸರ್ಕಾರದ ನಿಲುವು ಏನಿದೆ? ಈಗ ನಮ್ಮ ಮುಂದೆ ನ್ಯಾಯ ಮಂಡಲಿ ಮುಂದುವರಿಯಬೇಕೇ ಅಥವಾ ಕೈ ಬಿಡಬೇಕೇ ಎಂಬ ಎರಡೇ ಪ್ರಶ್ನೆಗಳು ಉಳಿದಿರತಕ್ಕದ್ದು.

ಸುಮ್ಮನೆ ನಾವು ಸುತ್ತಿ ಬಳಸಿ ಅಂಕಿಅಂಶದಿಂದ ಹೋಗತಕ್ಕ ಪ್ರಶ್ನೆ ಬೇಕಾಗಿಲ್ಲ. ನ್ಯಾಯ ಮಂಡಲಿಯನ್ನು ಬಹಿಷ್ಕಾರ ಮಾಡುತ್ತೇವೆನ್ನುವುದಾದರೆ ನಾವು ನಿಮ್ಮ ಜೊತೆ ಇರಬೇಕು. ನ್ಯಾಯ ಮಂಡಲಿಯನ್ನು ಬಹಿಷ್ಕಾರ ಮಾಡುವುದಿಲ್ಲ ಎನ್ನುವುದಾದರೆ ನಾವು ಇರಬೇಕೇ ಬೇಡವೇ ಎಂದು ವಿರೋಧಪಕ್ಷದವರಾದ ನಾವು ಕೂತು ತೀರ್ಮಾನ ಮಾಡುತ್ತೇವೆ. ದಯಮಾಡಿ ನ್ಯಾಯಮಂಡಲಿಯನ್ನು ಬಹಿಷ್ಕಾರ ಮಾಡುವ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಸ್ಪಷ್ಟ ಪಡಿಸಬೇಕಾದುದು ತಮ್ಮ ಕರ್ತವ್ಯ. ಅಧ್ಯಕ್ಷರೇ, ನನಗನ್ನಿಸುತ್ತದೆ, ಇದು ಒಂದು ರಾಜಕೀಯದ ನಿರ್ಧಾರ ಆಗಬೇಕು. ಇವತ್ತು ನಮ್ಮಲ್ಲಿ ಮನೆಗೆ ಬೆಂಕಿ ಬಿದ್ದಾಗ ನಾವು ನೀರಿಗಾಗಿ ಓಡಾಡುತ್ತೇವೆ. ಅಲ್ಲಿಯವರೆಗೆ ನಾವು ರಾಜಕೀಯವಾಗಿ ಏನು ಮಾಡುತ್ತಿದ್ದೇವೆ? ಕೇಂದ್ರವನ್ನು ಹೆದರಿಸತಕ್ಕ, ಕೇಂದ್ರದ ಮೇಲೆ ಪ್ರಭಾವ ತರತಕ್ಕ ಯಾವ ಕಾರ್ಯಕ್ರಮವನ್ನು ಇವತ್ತು ನಾವು ಕೈಗೊಂಡಿದ್ದೇವೆ? ತಮಿಳುನಾಡಿನವರು ಇವತ್ತು ಎಲ್ಲಾ ಕ್ರಮಗಳನ್ನು ಕೈಗೊಂಡು ಮುಖ್ಯಮಂತ್ರಿಗಳಾದ ಕುಮಾರಿ ಜಯಲಲಿತಾ ಅವರು ತಾವೇ ಹೋಗಿ ಕುಳಿತು ಸತ್ಯಾಗ್ರಹ ಮಾಡಿ ಕೇಂದ್ರದ ಮೇಲೆ ಒತ್ತಡ ತರತಕ್ಕ ಪ್ರಯೋಗ ಮಾಡಿರುವಾಗ ನಾವು ಇಲ್ಲಿಯವರೆಗೆ ಮಾಡಿದ್ದು ಏನು? ನಮ್ಮ ಪರಿಸ್ಥಿತಿ ಏನು? ನಮ್ಮದು ಬಹಳ, ಅತ್ಯಂತ ಚಿಂತಾಜನಕವಾಗಿದೆ. ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಮ್ಮ ನಿಲುವು ಏನು? ರಾಜಕೀಯದ ನಿಲುವು ಏನು ಎಂದು ಇದರಲ್ಲಿ ನಿರ್ಧಾರವಾಗಬೇಕು. ಈ ತೀರ್ಮಾನ

ಆಗಬೇಕಾದರೆ ಇದು ಕೇವಲ ನ್ಯಾಯಮಂಡಲಿಯಿಂದಲ್ಲ. ನ್ಯಾಯಮಂಡಲಿಯ ಆದೇಶದಿಂದ ಆಗುವುದಿಲ್ಲ. ಇದು ರಾಜಕೀಯದ ನಿರ್ಧಾರವೇ ಆಗಬೇಕು. ಕೇಂದ್ರಸರ್ಕಾರದ ಮೇಲೆ ಒತ್ತಡ ತರಬೇಕು. ಒತ್ತಡ ತರುವುದರಲ್ಲಿ ನಮ್ಮ ಲೋಕಸಭಾ ಸದಸ್ಯರು ಪ್ರಮುಖವಾದ ಒಂದು ನಿಲುವನ್ನು ತೆಗೆದುಕೊಳ್ಳಬೇಕು. ಈ ರಾಜ್ಯದ ಮುಖ್ಯಮಂತ್ರಿಗಳು ಕೂಡ ಒಂದು ಪ್ರಾಮುಖ್ಯವಾದ ನಿಲುವು ತೆಗೆದುಕೊಳ್ಳಬೇಕು. ಅದನ್ನು ತೆಗೆದುಕೊಂಡಿಲ್ಲ ಎಂದರೆ ನಮಗನ್ನಿಸುತ್ತದೆ, ತೀವ್ರವಾಗಿ ಕಾವೇರಿ ವಿಚಾರದಲ್ಲಿ ನಾವು ಅತ್ಯಂತ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ ಎಂದು. ಅತ್ಯಂತ ಘೋರ ಅಪರಾಧವನ್ನು ನಾವೇ ನಮ್ಮ ರಾಜ್ಯದ ಜನರಿಗೆ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ತಮಗೆ ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಲೋಕಸಭಾ ಸದಸ್ಯರು ಎಲ್ಲಿಯವರೆಗೆ ತಯಾರಿರಬೇಕು ? ಅವರು ಹಾಗೂ ನಾವು ನಮ್ಮ ನಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡತಕ್ಕ ಮಟ್ಟಕ್ಕೆ ಹೋಗಿ ಈ ನಾಡಿನ ಉಳಿವಿಗೆ, ಕಾವೇರಿ ಹಿತಕ್ಕಾಗಿ, ಕನ್ನಡಿಗರ ಹಿತಕ್ಕಾಗಿ ಕೇಂದ್ರ ಸರ್ಕಾರವನ್ನು ಹೆದರಿಸತಕ್ಕ ನಿಲುವಿನಲ್ಲಿ ನಾವು ನಿಲ್ಲಬೇಕಾಗುತ್ತದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ನಾನು ರಾಜೀನಾಮೆ ಕೊಡುವುದಕ್ಕೆ ತಯಾರಾಗಿದ್ದೇನೆ. ಯಾವಾಗ ? ಈಗ ಅವರು ಯಾವ ಒಂದು ಮಧ್ಯಂತರ ಆದೇಶ ಹೊರಡಿಸಿದ್ದಾರೆ. ಆ ಆದೇಶವನ್ನು ಜಾರಿ ಮಾಡಿ, ಉಸ್ತುವಾರಿ ಸಮಿತಿಯನ್ನು ರಚನೆ ಮಾಡಿದ್ದೇ ಆದರೆ, ರಚನೆ ಮಾಡತಕ್ಕ ಚಿಂತನೆ ಮಾಡಿ ರಚನೆಗೆ ಕೈ ಹಾಕಿದ್ದೇ ಆದರೆ ತಾವು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇವೆ ಎನ್ನುವ ಧೈರ್ಯವನ್ನು ಮಾಡಬೇಕು. ನಾನಂತೂ ಸಿದ್ಧ ಇದ್ದೇನೆ. ಆ ಉಸ್ತುವಾರಿ ಸಮಿತಿ ಏನಾದರೂ ನೇಮಕವಾದರೆ ನೇಮಕ ಆದ ಬೆಳಿಗ್ಗೆ ತಮ್ಮ ಮುಂದೆ ನಾನು ರಾಜೀನಾಮೆ ಕೊಡುತ್ತೇನೆ. ಪ್ರಮಾಣ ಮಾಡಿ ನಾನು ಇವತ್ತು ಹೇಳುತ್ತಿದ್ದೇನೆ. ಈ ನಿರ್ಧಾರಕ್ಕೆ ಇವತ್ತು ಎಲ್ಲಾ ಸದಸ್ಯರೂ ಬರಬೇಕು. ಮುಖ್ಯಮಂತ್ರಿಗಳೂ ಬರಬೇಕು. ಲೋಕಸಭೆ ಸದಸ್ಯರೂ ಬರಬೇಕು. ಒಂದು ನಿಲ್ಲಬೇಕು ಇವತ್ತು. ನಮ್ಮ ಶಕ್ತಿ ತೋರಿಸಬೇಕು. ಶಕ್ತಿಯನ್ನು ತೋರಿಸಿ ನಮ್ಮ ರಾಜ್ಯದಲ್ಲಿ ಕನ್ನಡಿಗರ ಶಕ್ತಿ ಕೇಂದ್ರದ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ನಿರಂತರವಾಗಿ, ಹಂತ ಹಂತವಾಗಿ ಯಾವ ಯಾವ ರೀತಿಯಲ್ಲಿ ಚಳುವಳಿ ನಡೆಸಬೇಕೋ ಆದನ್ನು ನಡೆಸಬೇಕಾಗುತ್ತದೆ. ಒತ್ತಡವನ್ನು ತರಬೇಕಾಗುತ್ತದೆ. ಇಲ್ಲದಿದ್ದರೆ ನಮಗೆ ಕಾವೇರಿಯಲ್ಲಿ ನ್ಯಾಯ ದೊರಕುವುದಿಲ್ಲ ಎಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಕೃಷ್ಣಾ ಬಗ್ಗೆ ಏನು ನಿರ್ಧಾರ ಆಗಿದೆ? ಇವತ್ತು ನಮ್ಮ ನೀರಾವರಿ ಇಲಾಖೆಯನ್ನು ಹೊಂದಿರತಕ್ಕ ಉಪಮುಖ್ಯಮಂತ್ರಿಗಳು ಹೋದ ಶಾಸನಸಭೆಯಲ್ಲಿ ಮಾತನಾಡುವಾಗ ಕೃಷ್ಣ ಬಗ್ಗೆ ಒಂದು ಉನ್ನತವಾದ ಸಮಿತಿಯನ್ನು ರಚನೆ ಮಾಡುತ್ತೇನೆಂದು ಹೇಳಿದರು. ತಮ್ಮಲ್ಲಿ ಹೇಳುತ್ತಿದ್ದೇನೆ. ಇವತ್ತಿನವರೆಗೂ ಆ ಉನ್ನತ ಸಮಿತಿ ರಚನೆ ಆಗಲೇ ಇಲ್ಲ ಮತ್ತು 2000ನೇ ಇಸವಿ ಒಳಗಾಗಿ ಬಚಾವತ್ ತೀರ್ಪಿನ ಪ್ರಕಾರ ಕೃಷ್ಣ ನದಿಗೆ ಸಂಬಂಧ ಪಟ್ಟ ಕಾಮಗಾರಿಯನ್ನು ಪೂರ್ಣವಾಗಿ ಮುಗಿಸಬೇಕೆಂದು ತೀರ್ಪು ಇರುವಾಗ ನಮ್ಮ ಸರ್ಕಾರದ ನಿಲುವು ಏನು ?

ಸುಮ್ಮನೆ ನಮಗೆ ಉಪಮುಖ್ಯಮಂತ್ರಿಗಳು ಒಂದು ದಿನ ಅಂಕಿಅಂಶಗಳನ್ನು ಹೇಳಿದರು. ಈ ವರ್ಷ ಎಷ್ಟು ಖರ್ಚು ಮಾಡಬೇಕು, ಮುಂದಿನ ವರ್ಷ ಎಷ್ಟು ಖರ್ಚುಮಾಡಬೇಕು ಮತ್ತೆ ಇನ್ನೆಷ್ಟು ಖರ್ಚುಮಾಡಬೇಕೆಂದು ಹೇಳಿದರೇ ಹೊರತು ಖರ್ಚು ಮಾಡುವುದಕ್ಕೆ ನಮ್ಮ ಸಂಪನ್ಮೂಲವೇನು

ಎಂಬುದರ ಬಗ್ಗೆ ಸರಿಯಾದ ರೀತಿಯಲ್ಲಿ ನಮಗೆ ನೇರವಾಗಿ ಹೇಳುತ್ತಿಲ್ಲ. ಈಗ ನೀವು ಖರ್ಚು ಮಾಡಿರುವುದು ಎಷ್ಟು? ಅಲ್ಪಪ್ರಮಾಣದಲ್ಲಿ ಖರ್ಚು ಮಾಡಿದ್ದೀರಿ. ನೀವು 2 ಸಾವಿರದ ಇಸವಿಯೊಳಗೆ ಖರ್ಚು ಮಾಡುವುದು ಎಷ್ಟು ? ಈ ವರ್ಷದಲ್ಲಿ ಬಹಳ ಕಡಿಮೆ ಖರ್ಚುಮಾಡಿರುವುದರಿಂದ 2 ಸಾವಿರದ ಇಸವಿಯೊಳಗೆ ನೀವು ಖರ್ಚು ಮಾಡುವುದಕ್ಕೆ ನಿಮ್ಮಲ್ಲಿ ಸಂಪನ್ಮೂಲ ಎಲ್ಲಿದೆ ? ಪೂರ ಹಣ ಖರ್ಚು ಮಾಡತಕ್ಕ ವ್ಯವಸ್ಥೆ ಎಲ್ಲಿದೆ ? ಆ ದೃಷ್ಟಿಯನ್ನಿಟ್ಟುಕೊಂಡು ಕರ್ನಾಟಕ, ಮಹಾರಾಷ್ಟ್ರ, ಆಂಧ್ರದ ಮುಖ್ಯಮಂತ್ರಿಗಳು ಒಂದು ಶೃಂಗಸಭೆಯನ್ನು ನಡೆಸಿ ಮಾತುಕತೆ ನಡೆಸಬೇಕು ಎನ್ನತಕ್ಕ ನಿರ್ಧಾರವಾಗಿತ್ತು. ಆ ಮಾತುಕತೆಯ ಪ್ರಕಾರ ಮಹಾಬಲೇಶ್ವರದಲ್ಲಿ ಇತ್ತೀಚಿಗೆ ಸಭೆ ನಡೆಯಿತು. ತಮಗೆ ಗೊತ್ತಿದೆ, ಮಾನ್ಯ ಮುಖ್ಯಮಂತ್ರಿಗಳು ಮಹಾಬಲೇಶ್ವರಕ್ಕೆ ಹೋಗುವುದಕ್ಕೆ ಮುಂಚೆ ಈ ರಾಜ್ಯಕ್ಕೆ ಹೇಳಿದರು ನಾವು ಮಹಾಬಲೇಶ್ವರಕ್ಕೆ ಹೋಗುತ್ತಿದ್ದೇವೆ, ನಮಗೆ ಅಲ್ಲಿ ಸಂಪೂರ್ಣವಾದ ನಂಬಿಕೆ ಇದೆ, ಅಲ್ಲಿ ನಮಗೆ ಜಯ ದೊರಕುತ್ತದೆಂದು ಹೇಳಿದರು. ಆದರೆ ಸಂಪೂರ್ಣವಾಗಿ ಮಹಾಬಲೇಶ್ವರದ ಸಭೆ ವಿಫಲವಾಯಿತು. 2 ಸಾವಿರದ ಇಸವಿಯೊಳಗೆ ನಾವು ಮುಗಿಸೊಲ್ಲ; ಮುಂದೇನು ? ಈಗ ನೀವು ನೇರವಾಗಿ ಹೇಳಿ. ಬಚಾವತ್ ತೀರ್ಪನ್ನು ನಾವು ತಳ್ಳಿಹಾಕಿದ್ದೇವೆ; ಬಚಾವತ್ ತೀರ್ಪನ್ನು ನಾವು ಒಪ್ಪುವುದಿಲ್ಲವೆಂದು ಈಗಲಾದರೂ ಹೇಳಬೇಕು. ಇದು ಒಂದೇ ನಿಮಗೆ ಉಳಿದಿರತಕ್ಕ ಮಾರ್ಗ. ಬಚಾವತ್ ತೀರ್ಪನ್ನು ನಾವು ಒಪ್ಪುವುದಿಲ್ಲ; ಕಾವೇರಿ ನ್ಯಾಯಮಂಡಳಿಯನ್ನು ಬಹಿಷ್ಕರಿಸುತ್ತೇವೆ; ನಮಗೆ ಅದು ಬೇಕಾಗಿಲ್ಲ. ಬಚಾವತ್ ತೀರ್ಪಿನಿಂದ ನಮಗೆ ಅನ್ಯಾಯವಾಗುತ್ತಿದೆಯೆಂಬ ಮಾತನ್ನು ಇವತ್ತು ಘಂಟಾಘೋಷವಾಗಿ ಹೇಳಬೇಕು. ನಮಗೆ ಹೆಜ್ಜೆ ಹೆಜ್ಜೆಗೂ ದುರಂತ ನಡೆದಿದೆ. ಕೃಷ್ಣಾದಲ್ಲಿ ನಮಗೆ ಅನ್ಯಾಯವಾಗಿದೆ. ಕಾವೇರಿಯಲ್ಲಿ ಅನ್ಯಾಯವಾಗಿದೆ. ತಮಿಳುನಾಡಿಗೆ ಕುಡಿಯುವ ನೀರೆಂದು ಹೇಳಿ ಆವೊಂದು ನೆಪದಲ್ಲಿ ತೆಲುಗುಗಂಗಾ ಯೋಜನೆ ಪ್ರಾರಂಭವಾಯಿತು. ತೆಲುಗುಗಂಗಾ ಕುಡಿಯುವ ನೀರಿಗಲ್ಲ; ಅಲ್ಲಿ ವ್ಯವಸ್ಥಾಯಕ್ಕೆ ಬಳಸತಕ್ಕ ದೊಡ್ಡ ಕಾಲುವೆಯನ್ನು ತೆಗೆಯುವ ಪರಿಸ್ಥಿತಿಯಲ್ಲಿರುವಾಗ ನೀವು ತೀವ್ರವಾದ ಎಚ್ಚರವನ್ನು ವಹಿಸಿಲ್ಲವೆಂದರೆ ನಮಗೆ ಅತ್ಯಂತ ಘೋರವಾದ ಅನ್ಯಾಯವಾಗುತ್ತದೆ. ಈಗ ಮುಖ್ಯಮಂತ್ರಿಗಳು ಈ ಬಗ್ಗೆ ಸ್ಪಷ್ಟವಾದ ಒಂದು ನಿಲುವು ತಾಳಲೇಬೇಕು. ಸರ್ಕಾರದ ನಿರ್ಧಾರವನ್ನು ಸ್ಪಷ್ಟವಾಗಿ ಹೇಳಲೇಬೇಕು. ಈ ಮಾತನ್ನು ನಾನು ಅವರಿಗೆ ಅತ್ಯಂತ ಪ್ರಾಮಾಣಿಕವಾಗಿ ಒತ್ತಾಯಮಾಡಿ ಹೇಳುತ್ತೇನೆ. ಇವತ್ತಿನ ದಿವಸ ಈ ವಿಚಾರದಲ್ಲಿ ಇಡೀ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ನಿಂತು ನಮ್ಮ ನಾಡಿನ ಉಳಿವಿಗಾಗಿ ಹೋರಾಟ ಮಾಡಬೇಕೆಂದು ಹೇಳಿ, ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಒಂದು ಪುಸ್ತಕವನ್ನು ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ತಾನೇ ಕನ್ನಡ ಜಾಗೃತಿ ದಿನಾಚರಣೆ ಮಾಡಿದ್ದಾರೆ. ಮೊನ್ನೆ ಅಂದರೆ ಒಂದು ತಿಂಗಳ ಹಿಂದೆ ಉದ್ದುದ್ದ ಭಾಷಣ ಮಾಡಿ ಇಂಗ್ಲೀಷ್‌ನಲ್ಲಿ ಬರತಕ್ಕ ಎಲ್ಲಾ ಕಡತಗಳನ್ನು ನಾಳೆಯಿಂದಲೇ ಬೀದಿಗೆ ಹಾಕುತ್ತೇವೆ; ನಮ್ಮಲ್ಲಿ ಇಂಗ್ಲೀಷ್ ಕಡತಗಳಿಗೆ ಅವಕಾಶವಿಲ್ಲವೆಂದು ಹೇಳಿ ನೀವು ಹೊರಗಡೆ ಎಲ್ಲಾ ಬುರುಡೆಬಿಟ್ಟು ಹೇಳಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :- ಮಾನ್ಯ ನಾಗರಾಜ್‌ರವರೇ, ತಾವು ಸ್ವಲ್ಪ ಸಾವಧಾನದಿಂದ ಕೇಳಿ. ತಮಗೆ ಗೊತ್ತಿದೆ, ತಾವು ಭಾಷಣ ನಿಲ್ಲಿಸುವುದಕ್ಕೆ ಮೊದಲು ಒಂದು ವಿಚಾರ ಹೇಳುತ್ತೇನೆ. ಕಾವೇರಿ ಸಮಸ್ಯೆ ಜ್ವಲಂತ ಸಮಸ್ಯೆ. ಶತಶತಮಾನಗಳಿಂದ ತೀರದ ಬವಣೆ. ನಾವು ಕನ್ನಡದಲ್ಲಿ ಅಚ್ಚು ಹಾಕಿಸಿದ್ದೇವೆ. ಇದು ಏನಾಗಿದೆ ಅಂದರೆ ನಾವು ನಿಯೋಗ ದೆಹಲಿಗೆ ಹೋದಾಗ,

ಆದರಲ್ಲಿ ತಾವುಗಳೆಲ್ಲಾ ಬಂದಿದ್ದೀರಿ. ಅಲ್ಲಿ ಸಂಸತ್ ಸದಸ್ಯರುಗಳಿಗೆ ಕೊಡಲಿಕ್ಕೆ ಈ ರೀತಿ ಮಾಡಿಸಿದ್ದೇವೆ. ಕನ್ನಡದಲ್ಲಿಯೂ ಅಚ್ಚು ಹಾಕಿಸಿದ್ದೇವೆ. ಮಾನ್ಯ ಸದಸ್ಯರುಗಳಿಗೆ ಹಿಂದೆ ಕನ್ನಡದಲ್ಲಿ ಕೊಟ್ಟಿದ್ದೇವೆ. ಕನ್ನಡ ಪುಸ್ತಕಗಳು ಸಹ ಇವೆ. ಮಾನ್ಯ ಸದಸ್ಯರಿಗೆ ಆಂಗ್ಲ ಭಾಷೆಯ ಪುಸ್ತಕ ಕೊಡಬಾರದಾಗಿತ್ತು. ಕನ್ನಡದಲ್ಲಿರುವುದನ್ನು ಕಳುಹಿಸಬೇಕಾಗಿತ್ತು. ಅದು ಒಂದು ತಪ್ಪಾಗಿದೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಒಪ್ಪುತ್ತೇನೆ. ನಮಗೆ ಕೊಟ್ಟಂಥ ಪುಸ್ತಕ ಓಬೀರಾಯನ ಕಾಲದಲ್ಲಿ ಒದಗಿಸಿರುವುದು; ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಇಡೀ ಸದಸ್ಯರಿಗೆಲ್ಲಾ ಇಂಗ್ಲೀಷ್ ಕಾಪಿಗಳನ್ನು ಒದಗಿಸಿದ್ದೀರಿ. ನಿಮ್ಮ ಹೃದಯ ಬಿಚ್ಚಿ ಹೇಳಿ. ನೀವು ಮಾಡಿರುವುದು ಸರಿಯೇ? ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಸಚಿವರು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಅವರು ಯಾವ ಊರಿಗೆ ಹೋಗಿದ್ದಾರೋ ಗೊತ್ತಿಲ್ಲ. ಕನ್ನಡದ ಬಗ್ಗೆ ನಿಜವಾಗಿ ಒಂದು ಪ್ರಾಮಾಣಿಕ ಚಿಂತನೆಯಾಗಬೇಕು. ನನ್ನ ಹತ್ತಿರ ನೀವು ಕೊಟ್ಟ ಎಲ್ಲಾ ಪುಸ್ತಕಗಳು ಇವೆ. ಯಾವುದು ಇಂಗ್ಲೀಷ್ ಪುಸ್ತಕಗಳನ್ನು ಕಳುಹಿಸಿದ್ದೀರಿ ಅವುಗಳನ್ನೆಲ್ಲಾ ಇಟ್ಟಿದ್ದೇನೆ. ನಾನು ಇವತ್ತು ಅವುಗಳನ್ನು ತರಲಿಲ್ಲ. ಏಕೆ ತರಲಿಲ್ಲವೆಂದರೆ ಇವತ್ತಿನ ಚರ್ಚೆಗೆ ಅವು ಸಂಬಂಧವಿಲ್ಲ. ನಾನು ಎಲ್ಲವನ್ನೂ ಜೋಡಿಸಿ ಇಟ್ಟಿದ್ದೇನೆ. ಒಂದು ದಿವಸ ತಂದು ಎಲ್ಲವನ್ನೂ ಇಲ್ಲಿ ಪ್ರದರ್ಶನ ಮಾಡುತ್ತೇನೆ.

10.20 ಎ.ಎಂ

ತಮ್ಮ ಜಿಲ್ಲಾ ಪರಿಷತ್ತುಗಳಿಂದ ಬಂದಿರತಕ್ಕಂಥ ವರದಿಗಳು, ನೀವು ಕಳಿಸಿರತಕ್ಕಂಥ ಟಿಪ್ಪಣಿಗಳು, ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟಿರತಕ್ಕಂಥಾದ್ದು ಹೀಗೆ ಎಲ್ಲವೂ ಇವೆ. ಇಂಗ್ಲೀಷಿನದ್ದು ಕೊಡಬೇಡಿ; ನಮಗೆ ಕನ್ನಡ ಪ್ರತಿಗಳು ಬೇಕು. ಅದು ಇಲ್ಲವೇ ಇಲ್ಲ. ಆದ್ದರಿಂದ ಈ ತರಹ ನೀವು ಬುರುಡೆ ಬಿಟ್ಟುಕೊಂಡು ಹೋದರೆ ಕನ್ನಡದ ಉದ್ಧಾರವಾಗುವುದಿಲ್ಲ. ತಾವು ತತಕ್ಷಣ ಒಂದನ್ನು ಹುಡುಕಿದಿರಿ. ಅಲ್ಲಿ ಅದನ್ನು ಕೊಡುವುದಕ್ಕೆ ಅವರು ಪಕ್ಕದಲ್ಲೇ ಕುಳಿತಿದ್ದಾರೆ. ಯಾವ ಕಾಲದ್ದೋ ಪುಸ್ತಕ ಅದು. ಆದ್ದರಿಂದ ಪ್ರಾಮಾಣಿಕ ಚಿಂತನೆ ನಿಮ್ಮಲ್ಲಿ ನಡೆಯುವುದಾದರೆ ನಾನು ಸಂತೋಷಪಡುತ್ತೇನೆ. ಅದು ಬಿಟ್ಟು ಈ ರೀತಿಯಿಂದ ಕನ್ನಡದ ಉದ್ಧಾರವಾಗುವುದಿಲ್ಲ. ಕನ್ನಡ ಪ್ರಾಧಿಕಾರ ಅಂತ ಇದೆ. ಕೆಳಗಡೆ ದೊಡ್ಡ ಸಭೆಯನ್ನು ನಡೆಸಿದರು. ಮೂರು–ನಾಲ್ಕು ಸಾವಿರ ಜನರನ್ನು ಸೇರಿಸಿ ಸಭೆ ನಡೆಸಿದಾಗ ನಾವು ಹೊರಗಡೆ ಬಂದು ಇದೆಲ್ಲಾ ಸರಿ ಇಲ್ಲ, ಇದು ಅನ್ಯಾಯ ಎಂದು ನಾವು ಹೇಳಿದೆವು. ಏಪ್ರಿಲ್ ಒಂದರಿಂದ ಕನ್ನಡದಲ್ಲಿ ಆಡಳಿತ ಎಂದು ಹೇಳಿದರು. ಏಪ್ರಿಲ್ ಒಂದಾಗಿ ಈ ತಿಂಗಳು ಬಂದರೂ ಏನೂ ನಡೆಯಲಿಲ್ಲ. ಇದೆಲ್ಲಾ ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಎಲ್ಲಾ ಕಡೆ ನೋಡಿದ್ದೇನೆ. ಕರ್ನಾಟಕದ ಉದ್ದಗಲಕ್ಕೂ ಹೋಗಿ ನೋಡಿದಾಗ ಇವರು ಹೇಳಿದ್ದಕ್ಕೂ, ನಡೆಗೂ, ನುಡಿಗೂ ಸಂಬಂಧ ಇಲ್ಲವೆಂದು ಹೇಳುತ್ತಾ ಅತ್ಯಂತ ನೋವಿನಿಂದ ಈ ಇಂಗ್ಲೀಷ್ ಪ್ರತಿಯನ್ನು ಹರಿದು ಸರ್ಕಾರದ ಕನ್ನಡ ವಿರೋಧಿ ನೀತಿಯನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಮಾನ್ಯ ಸದಸ್ಯರು ಇಂಗ್ಲೀಷ್ ಪ್ರತಿಯನ್ನು ಹರಿದುಹಾಕಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಸನ್ಮಾನ್ಯ ಅಧ್ಯಕ್ಷರೇ, ಈವತ್ತು ಕಾವೇರಿ ಜಲವಿವಾದವನ್ನು ಚರ್ಚೆ ಮಾಡಬೇಕು ಮತ್ತು ಸರ್ಕಾರದ ನೀತಿಯನ್ನು ನಾವು ಚರ್ಚೆ ಮಾಡಬೇಕು ಹಾಗೂ ಈವತ್ತಿನ ಸಂದರ್ಭದಲ್ಲಿ ರಾಜ್ಯಸರ್ಕಾರ ಏನು ಮಾಡಬೇಕು ಎಂದು ಹೇಳುವುದರ ಬಗ್ಗೆ

ಚಿಂತನೆ ಮಾಡುವ ಸಲುವಾಗಿ ವಿಶೇಷವಾದ ಅಧಿವೇಶವನ್ನು ಕರೆಯಬೇಕೆಂದು ನಾವೆಲ್ಲರೂ ಒತ್ತಾಯ ಮಾಡಿದ್ದೆವು. ಅದೇ ಪ್ರಕಾರ ಮುಖ್ಯಮಂತ್ರಿಯವರೇನೋ ಅಧಿವೇಶನವನ್ನು ಕರೆದಿದ್ದಾರೆ. ಆದರೆ ಈ ಕಾಂಗ್ರೆಸ್ ಪಕ್ಷದ ಒಳಜಗಳಗಳಿಂದ ಇವತ್ತು ಸರ್ಕಾರದ ಮೇಲೆ ಆಡಳಿತ ನಡೆಸುತ್ತಾ ಇರತಕ್ಕಂಥ ಜನರಿಗೆ ಸಂಪೂರ್ಣವಾಗಿ ಹತೋಟಿ ತಪ್ಪಿರುವುದರಿಂದಾಗಿ, ಈ ವಿಚಾರದ ಬಗ್ಗೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಮಹತ್ವ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳತಕ್ಕದ್ದು ದುರ್ದೈವದ ವಿಚಾರವೆಂದು ಹೇಳಬೇಕಾಗುತ್ತದೆ. ಮತ್ತೊಂದು, ತಮಗೊಂದು ಪತ್ರ ಬಂದಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ನಮ್ಮ ಉಪಮುಖ್ಯಮಂತ್ರಿಗಳು ನೀರಾವರಿ ಮಂತ್ರಿಗಳಾಗಿದ್ದಾರೆ. ಕಾವೇರಿ ಜಲವಿವಾದದ ಬಗ್ಗೆ ಚರ್ಚೆ ಆಗತಕ್ಕಂಥ ಕಾಲದಲ್ಲಿ ಅವರು ಈ ಸದನದಲ್ಲಿ ಇದ್ದು ಮಾತನಾಡತಕ್ಕಂಥ ಎಲ್ಲರ ಅಭಿಪ್ರಾಯಗಳನ್ನು ಪಡೆಯುತ್ತಾರೆ ಎಂದು ನಾನು ಭಾವಿಸಿದ್ದೆ. ಅವರೇನೋ ಇತ್ತೀಚಿಗೆ ಅನಾರೋಗ್ಯವೆಂದು ಹೇಳುತ್ತಿದ್ದಾರೆ. ಅನಾರೋಗ್ಯದಿಂದ ಅವರು ಬಂದಿಲ್ಲವೆಂದು ತಿಳಿದುಕೊಂಡು . . . .

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :– ವಿಧಾನ ಪರಿಷತ್ತಿನಲ್ಲಿ ಅವರ ಪ್ರಶ್ನೋತ್ತರ ವೇಳೆ ಇದೆ. ನಂತರ ಬರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :– ಒಂದು ಸಾರಿ ವಿಧಾನಪರಿಷತ್ತಿನಲ್ಲಿ ಇರುತ್ತಾರೆ, ಒಂದು ಸಾರಿ ಅವರಿಗೆ ಹುಷಾರು ಇರುವುದಿಲ್ಲ. ಆ ರೀತಿ ಭಾವಿಸಿಕೊಂಡು ನಾನು ನನ್ನ ಮಾತನ್ನು ಮುಂದುವರಿಸುತ್ತೇನೆ. ಒಂದು ನನಗೆ ಅರ್ಥವಾಗದೇ ಇರುವಂಥಾದ್ದು ಏನೆಂದರೆ, ಈ ಕಾಂಗ್ರೆಸ್ ಸರ್ಕಾರ ಬಂದಮೇಲೆ ಕಳೆದ ಮೂರುವರೆ – ನಾಲ್ಕು ವರ್ಷಗಳಿಂದ, ಈ ಕಡೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿರತಕ್ಕಂಥ ನಾವುಗಳು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತಿದ್ದೆವು. ಇವತ್ತು ಮುಖ್ಯವಾಗಿ ನಮ್ಮ ಕಾವೇರಿ ನೀರನ್ನು ಬಳಸಿಕೊಳ್ಳತಕ್ಕಂಥ ವಿಚಾರ ಇರಬಹುದು ಅಥವಾ ಕೃಷ್ಣಾ ನದಿನೀರನ್ನು ಬಳಸಿಕೊಳ್ಳತಕ್ಕಂಥ ವಿಚಾರ ಇರಬಹುದು. ಸರ್ಕಾರಕ್ಕೆ ಅಡಚಣೆ ಇರತಕ್ಕಂಥಾದ್ದು ಹಣದ್ದು. ಇವತ್ತು ನೀರನ್ನು ಜನರಿಗೆ ಕೊಡಬೇಕು ಎಂದು ಮನಸ್ಸು ಇದ್ದರೆ ನಿಮಗೆ ಮುಖ್ಯವಾಗಿ ತೊಂದರೆ ಇರತಕ್ಕಂಥಾದ್ದು ಹಣದ್ದು. ನಾವು ಆಡಳಿತ ಪಕ್ಷದಲ್ಲಿ ಕುಳಿತುಕೊಂಡು ಜವಾಬ್ದಾರಿಯಿಂದ ಈ ಸರ್ಕಾರವನ್ನು ನಡೆಸಿದ್ದೇವೆ. ಈ ನೀರನ್ನು ಏಕೆ ಕೊಡುವುದಕ್ಕೆ ಆಗುತ್ತಿಲ್ಲ, ಇದರ ಉಪಯೋಗವನ್ನು ಸಂಪೂರ್ಣವಾಗಿ ಏಕೆ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ ಅಥವಾ ಕೃಷ್ಣಾ ನೀರನ್ನು ಎರಡು ಸಾವಿರ ಇಸವಿ ಒಳಗಡೆ ಉಪಯೋಗಿಸಿಕೊಳ್ಳುವುದಕ್ಕೆ ಏಕೆ ಆಗುವುದಿಲ್ಲವೆಂದರೆ, ಅದಕ್ಕೆ ಮುಖ್ಯವಾಗಿ ಇರತಕ್ಕ ತೊಂದರೆ ಯಾವುದೆಂದರೆ ಹಣಕಾಸಿನದ್ದು. ಅದನ್ನು ಯಾವ ರೀತಿಯಿಂದ ನಾವು ತರಬೇಕು, ಯಾವರೀತಿ ಸಂಪನ್ಮೂಲಗಳನ್ನು ನಾವು ರೂಢಿಸಿಕೊಳ್ಳಬೇಕೆಂಬುದು ನಮ್ಮ ಮುಂದಿರತಕ್ಕಂಥ ಪ್ರಶ್ನೆ. ಆದ್ದರಿಂದ ಒಂದು ಸಲಹೆಯನ್ನು ನಾವು ವಿರೋಧಪಕ್ಷದಲ್ಲಿದ್ದುಕೊಂಡು ಮಾನ್ಯ ವೀರೇಂದ್ರ ಪಾಟೀಲರಿಗೆ ಕೊಟ್ಟೆವು, ಮಾನ್ಯ ಬಂಗಾರಪ್ಪನವರಿಗೆ ಕೊಟ್ಟೆವು ಮತ್ತು ಮಾನ್ಯ ಮೊಯಿಲಿಯವರಿಗೂ ಸಹಿತ ಈ ಮಾತನ್ನು ಪದೆಪದೇ ಹೇಳಿದ್ದೇವೆ. ನೋಡಿ, ನಮ್ಮ ಸಲಹೆಗಳನ್ನು ಅವರಿಗೆ ಕೊಟ್ಟು - ಕೊಟ್ಟು ನಮಗೆ ಸಾಕಾಗಿದೆ. ಅವರು ಏನು ಹೇಳುತ್ತಾರೆ ಎಂದರೆ ಕೆಲವು ಯೋಜನೆಗಳನ್ನು ನೀರಾವರಿಗೋಸ್ಕರ ಅಂತ ಹೇಳಿ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾದರೆ, ಕೆಲವು ಯೋಜನೆಗಳನ್ನು ನಾವು ಕೈಬಿಡಬೇಕಾಗುತ್ತದೆ. ಸಾಮಾಜಿಕ ದೃಷ್ಟಿಯಿಂದ ಏನೊಂದು

ಸೋಷಿಯಲ್ ಆಬ್ಲಿಗೇಷನ್ ಅಂತ ಹೇಳಿ ಸೋಷಿಯಲ್ ವೆಲ್‌ಫೇರ್ ಮೆಷರ್ಸ್ ಅಂತ ಏನು ತೆಗೆದುಕೊಂಡಿದ್ದೇವೆ, ಅದಕ್ಕೆ ಖರ್ಚಾಗತಕ್ಕಂಥ ಹಣವನ್ನು ನಿಲ್ಲಿಸಿ ನೀರಾವರಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ನಾವು ಅನೇಕ ಸಾರಿ ಹೇಳಿದ್ದೇವೆ.

ಆದರೆ ದುರ್ದೈವದಿಂದ, ಅದು ಈ ಮೂರು ಮುಖ್ಯಮಂತ್ರಿಗಳ ಕಿವಿಗೂ ಸಹಿತ ಬಿದ್ದಿಲ್ಲ. ಈಗ ವೃದ್ಧಾಪ್ಯವೇತನ ಕೊಡತಕ್ಕ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ತಮಗೆ ಗೊತ್ತಿರುವಹಾಗೆ, ಇದು ನಾವೆಲ್ಲರೂ ಸೇರಿ ಮಾಡಿರತಕ್ಕಂತಾದ್ದು. ನಿರ್ವಿಕಾರವಾಗಿ, ನಿಷ್ಪಕ್ಷಪಾತವಾಗಿ, ಈ ವಿಚಾರದಲ್ಲಿ ಮಾತನಾಡಬೇಕೆಂದರೆ, ವೋಟಿಗೋಸ್ಕರವಾಗಿ, ನಾವು ಚುನಾವಣೆಯ ಸಂದರ್ಭ ಎಂದಲ್ಲ, ಎಲ್ಲಾ ಸಂದರ್ಭಗಳಲ್ಲಿಯೂ ಸಹಿತ, ಹಳ್ಳಿಗಳಿಗೆ ಹೋಗುತ್ತೇವೆ. ಅಲ್ಲಿ ಹಳ್ಳಿಯವರು, ನೋಡಿ ನನ್ನ ಗಂಡ ಸತ್ತುಹೋಗಿದ್ದಾನೆ, ನನಗೆ ಪೆನ್‌ಷನ್ ಬರಬೇಕೆಂದು ಹೇಳುತ್ತಾರೆ. ಮತ್ತೊಬ್ಬರು ಹೇಳುತ್ತಾರೆ, ನನಗೆ ವಯಸ್ಸಾಗಿದೆ, 60 ವರ್ಷವಾಗಿದೆ. ದುಡಿಯುವುದಕ್ಕಾಗುವುದಿಲ್ಲ, ನನಗೆ ದುಡ್ಡು ಕೊಡಿ ಎಂದು ಹೇಳುತ್ತಾರೆ. ನನಗೆ ಗೊತ್ತಿರುವಹಾಗೆ, ಒಂದೊಂದು ತಾಲ್ಲೂಕಿನಲ್ಲೂ ಪ್ರತಿ ತಿಂಗಳೂ ಸಹಿತ 15-20 ಲಕ್ಷ ರೂಪಾಯಿಗಳನ್ನು ವೃದ್ಧಾಪ್ಯವೇತನಕ್ಕೋಸ್ಕರ ಖರ್ಚುಮಾಡುತ್ತಿದ್ದೇವೆ. ಕೆಲವು ಹಳ್ಳಿಗಳಲ್ಲಿ, ಪ್ರತಿ ಮನೆ, ಮನೆಗೂ ವೃದ್ಧಾಪ್ಯ ವೇತನ ಕೊಡತಕ್ಕ ಪರಿಸ್ಥಿತಿ ಇವತ್ತು ಬಂದಿದೆ. ಇದನ್ನು ನಿಲ್ಲಿಸಬೇಕೆಂದು ನಾನು ಹೇಳುವುದಿಲ್ಲ,ಆ ಕಾರ್ಯಕ್ರಮ ಮುಂದುವರಿಯಲಿ. ಆದರೆ ಪ್ರಶ್ನೆ ಬಂದಿರತಕ್ಕಂತಾದ್ದು, ಇದರ ದುರುಪಯೋಗ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಇವತ್ತು ಇಂತಹ ಅನೇಕ ಕಾರ್ಯಕ್ರಮಗಳಿವೆ. ಈ ಹಿಂದೆ ಬಂಗಾರಪ್ಪನವರ ಸರ್ಕಾರ ಬಂತು. ಇದು ಬಂದಂಥ ಸಂದಂರ್ಭದಲ್ಲಿ ಶಾಲೆಗೆ ಹೋಗತಕ್ಕ ಎಲ್ಲಾ ಮಕ್ಕಳಿಗೆ ಒಂದೊಂದು ರೂಪಾಯಿ ಕೊಡುತ್ತೇವೆ, ಅವರ ಅಕೌಂಟಿಗೆ ಹಾಕುತ್ತೇವೆ ಎನ್ನುವ ಕಾರ್ಯಕ್ರಮವನ್ನು ಸಹಿತ ಪ್ರಾರಂಭ ಮಾಡಿದರು. ನಮ್ಮ ಶಾಲೆಗಳಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದು ತಮ್ಮ ಗಮನಕ್ಕೆ ಬಂದಿರಲಿಕ್ಕೂ ಸಾಕು. ನನ್ನ ಕ್ಷೇತ್ರದ ಉದಾಹರಣೆಯನ್ನು ಕೊಡಬೇಕೆಂದರೆ, ನಾಲ್ಕುನೂರು ಪ್ರಾಥಮಿಕ ಶಾಲೆಗಳಿವೆ, ನಾಲ್ಕುನೂರು ಉಪಾಧ್ಯಾಯರ ವೇಕೆನ್ಸಿ ಇವೆ. ಈ ರೀತಿಯಾದಾಗ, ಯಾವರೀತಿ ಶಾಲೆಗಳನ್ನು ನಡೆಸಬೇಕು. ಉಪಾಧ್ಯಾಯರನ್ನೇ ಕೊಡುವುದಕ್ಕಾಗದಿದ್ದವರು, ಮಕ್ಕಳಿಗೆ ಒಂಧು ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಈ ರೀತಿಯ ಹಲವಾರು ಯೋಜನೆಗಳಿವೆ. ಮುಖ್ಯಮಂತ್ರಿಗಳಿಗೆ ನಾವೇನು ಸಲಹೆ ಕೊಡಬಹುದು ಎಂಬುದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡೋಣ. ವಿರೋಧ ಪಕ್ಷದವರು, ಆಡಳಿತ ಪಕ್ಷದವರು ಕುಳಿತುಕೊಂಡು ಚರ್ಚೆ ಮಾಡಿ, ನೀರಾವರಿ ದೃಷ್ಟಿಯಿಂದ ನಾವು ಯಾವ ಕಾರ್ಯಕ್ರಮಗಳನ್ನು ಕೈಬಿಡಬೇಕೆನ್ನತಕ್ಕಂತಾದ್ದನ್ನು ಯೋಚನೆ ಮಾಡೋಣ ಎನ್ನುವ ಮಾತನ್ನು ಹೇಳಿದೆವು. ಆದರೆ,ಇದರ ಬಗ್ಗೆ ಟ್ರಿಬ್ಯುನಲ್ ತೀರ್ಮಾನ ಕೊಟ್ಟಾಗ, ಕಾವೇರಿ ಬಗ್ಗೆ ಇಂಟೀರಿಯಂ ರಿಪೋರ್ಟ್ ಕೊಟ್ಟಾಗ ಒಂದು ಸಾರಿ ಸಭೆ ಕರೆದರು. ಆತ್ತೂ ಕರೆದು ನಾವು ಆ ಸಭೆಯನ್ನು ಕರೆಸಿಕೊಂಡೆವು. ಇದಾದ ನಂತರ, ಮೊನ್ನೆ ಒಂದು ಸಾರಿ ಕರೆದಿದ್ದಾರೆ. ಇದನ್ನು ಬಿಟ್ಟರೆ, ಇದಕ್ಕೋಸ್ಕರವಾಗಿ, 2-3 ದಿನ ಕುಳಿತು ಚರ್ಚೆ ಮಾಡಿದ ನಿದರ್ಶನಗಳಿಲ್ಲ. ನನ್ನ ಸರ್ಕಾರ ಓಪನ್ ಸರ್ಕಾರ, ಇದರ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದರೇ ಹೊರತು ಒಂದು ಸಭೆಯನ್ನೂ ಸಹಿತ ಕರೆದಿಲ್ಲ. ಈ ಸಂದರ್ಭದಲ್ಲಿ ನಾನಾದರೂ ಹೇಳುವುದು, ಕೃಷ್ಣಾ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ

ಒಂದು ಸಮಿತಿ ಮಾಡುತ್ತೇವೆಂದು ಹೇಳಿದ್ದೀರಿ; ಏಕೆ ಸಮಿತಿಯನ್ನು ಮಾಡುತ್ತೀರಿ? ಈ ಸಮಿತಿಗಳಿಗೆ ಏನಾದರೂ ಅರ್ಥ ಇದೆಯೇ? ನಾವು ಕುಳಿತುಕೊಂಡು ವಿಚಾರ ಮಾಡುವುದಕ್ಕೆ ಆಗುವುದಿಲ್ಲ, ಎಷ್ಟು ಹಣ ಬೇಕು, ಎಲ್ಲಿಂದ ಹಣ ತರಬೇಕೆಂಬುದನ್ನು ಚರ್ಚಿಸುವುದಿಲ್ಲ. ಇರಿಗೇಷನ್ ಬಾಂಡ್‌ಅನ್ನು ಜಾರಿ ಮಾಡಬೇಕೆಂದು ಹೇಳಿದೆವು. ಇದರ ಕತೆ ಏನಾಯಿತೆಂದು ಗೊತ್ತಿಲ್ಲ. ವಿಶ್ವಬ್ಯಾಂಕಿನ ಯೋಜನೆಯಿಂದ ಕೊಡತಕ್ಕ ಹಣ ನಿಂತುಹೋಯಿತು ಎನ್ನತಕ್ಕ ಮಾತನ್ನು ಕೇಳಿದೆವು. ಮತ್ತೆ ಭಾಗಶಃ ಡ್ಯಾಮ್ ಪೋರ್ಷನ್‌ಗೆ ಕೊಟ್ಟಿದ್ದಾರೆ, ಕಾಲುವೆ ಪೋರ್ಷನ್‌ಗೆ ಕೊಟ್ಟಿಲ್ಲ ಎಂಬ ಮಾತನ್ನೂ ಸಹಿತ ಹೇಳಿದರು. ಆದರೆ, ಇದು ಏನಾಗುತ್ತಿದೆ? ಇದೊಂದು ರೀತಿಯಲ್ಲಿ ನಮ್ಮನ್ನು ಕತ್ತಲಲ್ಲಿ ಇಟ್ಟಿರತಕ್ಕ ಸಂದರ್ಭ ಎನ್ನುವುದನ್ನು ಈ ಸಂದರ್ಭದಲ್ಲಿ ಬಹಳ ದುಃಖದಿಂದ ಹೇಳಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ, ನಮಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ನೀರಾವರಿ. ಇವತ್ತು ಆಂಧ್ರಪ್ರದೇಶ ಸರ್ಕಾರದವರು ನಾಗಾರ್ಜುನಸಾಗರ ಅಣೆಕಟ್ಟನ್ನು ಕಟ್ಟಬೇಕಾದರೆ ಎಲ್ಲಾ ಕೆಲಸಗಳನ್ನೂ ನಿಲ್ಲಿಸಿ ನೀರಾವರಿಗೆ ಹೆಚ್ಚಿನ ಹಣವನ್ನು ಕೊಡತಕ್ಕ ಕೆಲಸವನ್ನು ಮಾಡಿದರು. ಹಾಗಾದರೆ, ನಾವೇಕೆ ಅದನ್ನು ಮಾಡುವುದಕ್ಕಾಗುವುದಿಲ್ಲ? ಇವತ್ತು ನಾವು ಪಕ್ಷ ಭೇದ ಮರೆತು, ಕೃಷ್ಣಾ ಮತ್ತು ಕಾವೇರಿ ನೀರಿನ ಸದುಪಯೋಗ ಮಾಡಿಕೊಳ್ಳಬೇಕು. ನಾನು ಸಂಕುಚಿತ ಮನೋಭಾವದಿಂದ ಈ ಮಾತನ್ನು ಹೇಳುತ್ತಿಲ್ಲ. ಇವತ್ತು ಸಮುದ್ರಕ್ಕೆ ಅನ್ಯಾಯವಾಗಿ ಹರಿದುಹೋಗತಕ್ಕ ನೀರನ್ನು ನಿಲ್ಲಿಸುವುದಕ್ಕೆ ನಾವು ಮಾಡಬೇಕಾಗಿರತಕ್ಕ ಕೆಲಸ. ಇವತ್ತು ತಮಿಳುನಾಡಿನ ರೈತರ ವಿರುದ್ಧ ನಾವು ಯಾರೂ ಸಹಿತ ಇಲ್ಲ, ನೀವು ಇದ್ದೀರಿ ಎಂದೂ ನಾನು ಭಾವಿಸಿಕೊಂಡಿಲ್ಲ. ಒಟ್ಟಿನಲ್ಲಿ ನೀರಿನ ಸದುಪಯೋಗವಾಗತಕ್ಕಂತಾದ್ದು ಬಹಳ ಮುಖ್ಯ. ಆ ಕೆಲಸವನ್ನು ನಾವು ಮಾಡುತ್ತಾ ಇಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಈಗ ತಮಿಳುನಾಡಿನ ಮುಖ್ಯಮಂತ್ರಿಗಳು ಹಠಾತ್ತಾಗಿ ಉಪವಾಸ ಮುಷ್ಕರವನ್ನು ಪ್ರಾರಂಭ ಮಾಡಿದರು. ಮಾಡಿದ ತಕ್ಷಣವೇ, ಇದು ಅವರ ಪಕ್ಷದವರಿಗೇ ಗೊತ್ತಿಲ್ಲ. ಅವರ ಸಹಪಾಠಿಗಳಿಗೇ ಗೊತ್ತಿಲ್ಲ ಮತ್ತು ಅವರ ಸರ್ಕಾರದ ಸಚಿವ ಸಂಪುಟದ ಸದಸ್ಯರಿಗೂ ಸಹಿತ ಗೊತ್ತಿಲ್ಲ. ಅದು ಅವರ ನಿರ್ಧಾರ. ಅದು ಅವರಿಗೆ ಸಂಬಂಧಪಟ್ಟಿದ್ದು. ಆದರೆ, ಈ ಸಂದರ್ಭದಲ್ಲಿ ಕೇಂದ್ರಸರ್ಕಾರ ಮಾಡಿದ್ದೇನು? ಕೇಂದ್ರ ಸರ್ಕಾರ, ನಮ್ಮ ರಾಜ್ಯದ ಕಾವೇರಿ ನದಿಯ ಬಗ್ಗೆ ಟ್ರಿಬ್ಯುನಲ್‌ನಿಂದ ಇಂಟ್ರೀಮ್ ಆರ್ಡರ್ ಆದಂಥ ಸಂದರ್ಭದಲ್ಲಿ, ಜನಗಳು ಪ್ರತಿಭಟನೆ ಮಾಡಿದಂಥ ಸಂದರ್ಭದಲ್ಲಿ, 100 ಕೋಟಿ ರೂಪಾಯಿಗಿಂಥ ಹೆಚ್ಚು ಆಸ್ತಿ ನಷ್ಟವಾದಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ತಮ್ಮ ಒಬ್ಬ ಮಂತ್ರಿಮಂಡಲದ ಒಬ್ಬ ಸದಸ್ಯರನ್ನಾಗಲೀ ಮತ್ತೊಬ್ಬರನ್ನಾಗಲೀ ಕಳುಹಿಸತಕ್ಕಂಥ ಕೆಲಸವನ್ನು ಮಾಡಲಿಲ್ಲ. ಇಲ್ಲಿ ಆಗಿದ್ದಂಥ ಡ್ಯಾಮೇಜಸನ್ನು ತುಂಬಿಕೊಡತಕ್ಕಂಥ ಕೆಲಸವನ್ನೂ ಅವರು ಮಾಡಲಿಲ್ಲ. ಅದರ ಬದಲಾಗಿ ಅಲ್ಲಿ ಜಯಲಲಿತಾ ಅವರು ಧರಣಿ ಕುಳಿತುಕೊಂಡಿದ್ದಾರೆ ಅಂದ ತಕ್ಷಣವೇ ವಿ.ಸಿ. ಶುಕ್ಲಾ ಅವರನ್ನು ಕಳುಹಿಸಿಕೊಟ್ಟರು. ಈ ವಿ.ಸಿ. ಶುಕ್ಲಾ ಅವರ ಬಗ್ಗೆ ನನಗಂತೂ ವೈಯಕ್ತಿಕವಾಗಿ ಮೂರು ಕಾಸಿನ ಗೌರವ ಸಹಿತ ಇಲ್ಲ. ಇವರು ಸರ್ವ ಪಕ್ಷಗಳ ಸರ್ವಕಾಲೀನ ನಾಯಕರು. ಎಮರ್ಜನ್ಸಿ ಪೀರಿಯಡ್‌ನಲ್ಲೂ ಮಂತ್ರಿಯಾಗಿದ್ದರು, ಕಾಂಗ್ರೆಸ್ ಪಾರ್ಟಿ ಬಿಟ್ಟು ನಮ್ಮ ಪಕ್ಷದ ಸರ್ಕಾರ ಇದ್ದಾಗ ಅಲ್ಲೂ ಮಂತ್ರಿಯಾಗಿದ್ದರು. ಈಗ ಯಾವಾಗ ನಿಮ್ಮ ಪಕ್ಷ ಬಿಡುತ್ತಾರೋ ಗೊತ್ತಿಲ್ಲ. ಇಸ್ಪೀಟ್ ಆಟದಲ್ಲಿ ಜೋಕರ್ ಇದ್ದ ಹಾಗೆ ವಿ.ಸಿ. ಶುಕ್ಲಾ ಅವರು. ಇವರಿಗೆ ಎಷ್ಟು ಧೈರ್ಯ ಎಂದು ನಾನು ಕೇಳುತ್ತೇನೆ.

ಇವರು ಇಲ್ಲಿಗೆ ಬಂದು ಏನು ಮಾತುಕತೆ ಮಾಡಿದರು? ರಾತ್ರೋರಾತ್ರಿ ವಿ.ಸಿ. ಶುಕ್ಲಾ ಅವರು ಬಂದಂಥ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿದ್ದು ಏನು? ಇದು ಕರ್ನಾಟಕ ರಾಜ್ಯದ ಸಾರ್ವಜನಿಕರಿಗೆ ಗೊತ್ತಾಗಬೇಕಾಗುತ್ತದೆ. ಅವರು ಕ್ಷಮೆಯನ್ನು ಕೇಳಬೇಕಾಗುತ್ತದೆ. ಹಿರಿಯ ಸದಸ್ಯರಾಗಿರುವಂಥ ಮತ್ತು ಮಾಜಿ ಮುಖ್ಯ ಮಂತ್ರಿಗಳಾಗಿರತಕ್ಕಂಥ ವೀರೇಂದ್ರ ಪಾಟೀಲರೂ ಈ ಮಾತನ್ನು ಹೇಳಿದ್ದಾರೆ, ಕೇಂದ್ರ ಸರ್ಕಾರ ಯಾವ ರೀತಿ ನಡೆದುಕೊಂಡಿದೆ, ಅದನ್ನು ಅತ್ಯಂತ ಉಗ್ರವಾಗಿ ಟೀಕಿಸಬೇಕಾಗುತ್ತದೆ. ಪಕ್ಷದ ದೃಷ್ಟಿಯಿಂದ, ಮಾನ್ಯ ಅಧ್ಯಕ್ಷರೇ, ಈ ಮಾತನ್ನು ನಾನು ಹೇಳುತ್ತಿಲ್ಲ. ಕೇಂದ್ರ ಸರ್ಕಾರದವರು ಸತತವಾಗಿ ನಮಗೆ ಅನ್ಯಾಯವನ್ನು ಮಾಡಿಕೊಂಡು ಬಂದಿದ್ದಾರೆ. ಇವತ್ತು ಅಂತರ ರಾಜ್ಯ ನದಿ ನೀರನ್ನು ಯಾವ ರೀತಿ ಹಂಚಿಕೊಳ್ಳಬೇಕು ಎಂಬ ಬಗ್ಗೆ ಸರಿಯಾದ ಗೈಡ್‌ಲೈನೇ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ, ಕಾನೂನನ್ನೇ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ನಮ್ಮ ಎರಡೂ ರಾಜ್ಯಗಳಿಗೂ ಇವತ್ತು ಘರ್ಷಣೆಯನ್ನು ತಂದೊಡ್ಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಪ್ರಧಾನಿಗಳು ಮತ್ತು ಕೇಂದ್ರ ಸರ್ಕಾರದ ತಟಸ್ಥ ನೀತಿಯಿಂದಾಗಿ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳ ತುಟಿಗಳಿಗೆ ತುಪ್ಪವನ್ನು ಹಚ್ಚಲಿಕ್ಕೆ ಮಾಡುತ್ತಿರತಕ್ಕಂಥ ಪ್ರಯತ್ನದಿಂದಾಗಿ ಇವತ್ತು ಎ ಐ ಡಿ ಎಂ ಕೆ ಮುಖ್ಯ ಮಂತ್ರಿಗಳು ದೇಶವನ್ನು ವಿಭಜನೆ ಮಾಡತಕ್ಕಂಥ ಮಾತನಾಡುತ್ತಿದ್ದಾರೆ. ಇದನ್ನು ನಾವು ಅತ್ಯಂತ ಉಗ್ರವಾಗಿ ಖಂಡಿಸಬೇಕಾಗುತ್ತದೆ. ಆದರೆ ನೀವು ಮಾಡಿರತಕ್ಕಂಥಾದ್ದು ಏನು? ಇವತ್ತು ಲೋಕಸಭೆಯಲ್ಲಿ ನಿಮ್ಮ ಪಕ್ಷದ 28 ಜನ ಸದಸ್ಯರುಗಳಿದ್ದಾರೆ. 1971ನೇ ಇಸವಿಯಿಂದ ನಿಮ್ಮ ಪಕ್ಷಕ್ಕೆ ನಮ್ಮ ರಾಜ್ಯದ ಜನ ನಂಬಿ 28ಕ್ಕೆ 28 ಜನರನ್ನೂ ಲೋಕಸಭೆಗೆ ಆರಿಸಿ ಕಳುಹಿಸಿದ್ದಾರೆ. ಮೊನ್ನೆ ರಾಮನ ಹೆಸರಲ್ಲಿ 4 ಜನ ಗೆದ್ದು ಹೋಗಿದ್ದಾರೆ ಅಷ್ಟೆ; ಸತತವಾಗಿ ಕಾಂಗ್ರೆಸ್‌ನವರನ್ನೇ ಗೆಲ್ಲಿಸಿ ಕಳುಹಿಸಲಾಗಿದೆ. ಒಂದು ಸಾರಿ ನಾವು 4 ಜನ ಗೆದ್ದು ಹೋಗಿದ್ದೆವು. ಆದರೆ ಈ ಲೋಕಸಭಾ ಸದಸ್ಯರು ಮಾಡಿರತಕ್ಕಂಥಾದ್ದು ಏನು? ಮಾನ್ಯ ಅಧ್ಯಕ್ಷರೇ, ಇದು ತಮ್ಮ ಗಮನಕ್ಕೂ ಸಹಿತ ಬಂದಿರಬೇಕು. ನಾವು ದೆಹಲಿ ಮತ್ತು ಬೇರೆ ರಾಜ್ಯಗಳಿಗೆ ಹೋದಂಥ ಸಂದರ್ಭದಲ್ಲಿ ಕಾವೇರಿ ನೀರಿನಲ್ಲಿ ನೀವು ಏನೋ ಮೋಸಮಾಡಿದ್ದೀರಿ ತಮಿಳುನಾಡಿನವರಿಗೆ, ಟ್ರಿಬ್ಯೂನಲ್ ರಚನೆಯಾದರೆ ಏಕೆ ಭಯ ನಿಮಗೆ? ಟ್ರಿಬ್ಯೂನಲ್ ಸದಸ್ಯರು ನಿಮ್ಮ ವಿರುದ್ಧ ಹೋಗುತ್ತಾರೆ ಎನ್ನುವ ಭಯ ಏಕೆ ಎಂದು ಕೇಳುತ್ತಿದ್ದಾರೆ. ಇಡೀ ದೆಹಲಿ ಮತ್ತು ಉತ್ತರ ಭಾರತದಲ್ಲಿನ ಜನರಿಗೆ ಕರ್ನಾಟಕ ರಾಜ್ಯದವರು ನೀರಿನ ವಿಚಾರದಲ್ಲಿ ಅನ್ಯಾಯ ಮಾಡುತ್ತಿದ್ದಾರೆ ಎನ್ನುವ ಭಾವನೆ ಇದೆ. ನಮ್ಮ ಲೋಕಸಭಾ ಸದಸ್ಯರು ಏನು ಮಾಡುತ್ತಿದ್ದಾರೆ? ನಿದ್ದೆ ಮಾಡುತ್ತಿದ್ದಾರಾ? ಒಬ್ಬರೋ ಇಬ್ಬರನ್ನು ಬಿಟ್ಟರೆ ಉಳಿದವರು ಇದರ ಬಗ್ಗೆಧ್ವನಿ ಎತ್ತುವುದೇ ಇಲ್ಲ. ಇದನ್ನು ಈ ಸದನದ ಮೂಲಕ ಖಂಡಿಸಲಿಕ್ಕೆ ಬಯಸುತ್ತೇನೆ. ನಮ್ಮ ಲೋಕಸಭಾ ಸದಸ್ಯರು ಸರಿಯಾದ ರೀತಿಯಲ್ಲಿ ಇದನ್ನು ಪ್ರತಿಪಾದನೆ ಮಾಡಿ ಎಲ್ಲಾ ಪಕ್ಷದ ಮುಖಂಡರನ್ನು ನೋಡಿ, ಎಲ್ಲಾ ಲೋಕಸಭಾ ಸದಸ್ಯರಿಗೆ ಇದನ್ನು ತಿಳಿಸಿ ಲೋಕಸಭೆಯಲ್ಲಿ ಇದರ ಬಗ್ಗೆ ಧ್ವನಿ ಎತ್ತಿದ್ದರೆ ನಮ್ಮ ಪರಿಸ್ಥಿತಿ ಇಲ್ಲಿಗೆ ಬರುತ್ತಿರಲಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ನಾನು ಹೇಳುತ್ತಿದ್ದೇನೆ, ಶುಕ್ಲಾರವರನ್ನು ಪ್ರಧಾನಿಗಳು ಕರ್ನಾಟಕ ರಾಜ್ಯದ ಹಿತ ದೃಷ್ಟಿಯಿಂದ ಅಲ್ಲ, ಅಥವಾ ಕಾವೇರಿ ನದಿ ನೀರಿನ ಹಂಚಿಕೆ ಹಿತ ದೃಷ್ಟಿಯಿಂದಲ್ಲ: ಅವರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರದಿಂದ ಅವರನ್ನು ಕೈ ಬಿಡಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಇದನ್ನು ಯಾವ ಲೋಕಸಭೆ ಸದಸ್ಯರಾದರೂ ಹೇಳಿದ್ದಾರೆಯೇ? ಯಾರಾದರೂ ಇದರ

ಬಗ್ಗೆ ಪ್ರತಿಭಟನೆ ಮಾಡಿದ್ದಾರಾ? ಇದನ್ನು ಅತ್ಯಂತ ಉಗ್ರವಾಗಿ ಈ ಸಂದರ್ಭದಲ್ಲಿ ಟೀಕೆ ಮಾಡಲಿಕ್ಕೆ ಬಯಸುತ್ತೇನೆ. ಮತ್ತೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ವಿ.ಸಿ.ಶುಕ್ಲಾರವರು ಇಲ್ಲಿಗೆ ಬಂದಿದ್ದರು. ಸಚಿವ ಸಂಪುಟ ಸಭೆ ಸೇರಿತ್ತು, ನೀವು ಏನೋ ಒಂದು ತೀರ್ಮಾನ ಮಾಡಿದ್ದೀರಿ. ಅದಾದ ನಂತರ ಈ ಛೇರ್ಮನ್ ಆಫ್ ಸೆಂಟ್ರಲ್ ವಾಟರ್‌ಕಮಿಷನ್ ಬಂದಿದ್ದರು ಎನ್ನತಕ್ಕಂಥ ಮಾತೂ ಸಹಿತ ಬಂದಿದೆ. ಪ್ರಧಾನಿಗಳು ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿದ್ದಾರೆ. ಸೆಂಟ್ರಲ್ ವಾಟರ್ ಕಮಿಷನ್ ಛೇರ್ಮನ್ ಬೆಂಗಳೂರಿಗೆ ಹೋಗುತ್ತಾರೆ, ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಭೇಟಿ ಮಾಡುತ್ತಾರೆ, ಭೇಟಿ ಮಾಡಿದ ನಂತರ ಮದ್ರಾಸ್‌ಗೆ ಹೋಗುತ್ತಾರೆ, ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಭೇಟಿ ಮಾಡುತ್ತಾರೆ ಮತ್ತು ಟ್ರಿಬ್ಯೂನಲ್ ಪರವಾಗಿ, ಟ್ರಿಬ್ಯೂನಲ್ ಆರ್ಡ್‌ರ್‌ನ್ನು ಇಂಪ್ಲಿಮೆಂಟ್ ಮಾಡಿದ್ದಾರೋ ಇಲ್ಲವೋ ಎಂದು ಇನ್‌ಫರ್ಮೇಷನ್ ತರಿಸಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಮುಖ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ, ಸೆಂಟ್ರಲ್ ವಾಟರ್ ಕಮಿಷನ್ ಛೇರ್ಮನ್ ಬಂದಿದ್ದರೇ? ಅವರನ್ನು ನಮ್ಮ ಸರ್ಕಾರದ ಅಧಿಕಾರಿಗಳು ಭೇಟಿ ಮಾಡಿದರೇ? ಮಾತು ಕತೆ ಏನು ನಡೆದಿದೆ ಎಂಬುದನ್ನು ರಾಜ್ಯದ ಹಿತ ದೃಷ್ಟಿಯಿಂದ ಈ ಸದನದ ಮುಂದೆ ಇಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಏನೇನು ಇನ್‌ಫರ್ಮೇಷನ್ ಅವರಿಗೆ ಕೊಟ್ಟಿದ್ದೀರಿ? ತಮಗೆ ಗೊತ್ತಿದೆ, ನಮ್ಮ ಕ್ಷೇತ್ರ ಕನಕಪುರ ತಾಲ್ಲೂಕು ಮುಖಾಂತರವೇ ಕಾವೇರಿ ನದಿ ನೀರು ತಮಿಳು ನಾಡಿಗೆ ಹೋಗತಕ್ಕಂಥಾದ್ದು. ನೀವು ಏನು ಹೇಳಿದ್ದೀರಿ ಅಂದರೆ ಕಬಿನಿ ಜಲಾಶಯ ತುಂಬಿಹೋಗಿತ್ತು, ಆದರಿಂದ ಎಕ್ಸಸ್ ವಾಟರ್ ಹೋಗಿತ್ತು ಎಂದು. ಬಿಳಿಗುಂಬದಲ್ಲಿ ಜುಲೈನಲ್ಲಿ 6 ಅಡಿ ನೀರು ಹರಿದಿದೆ. ಹರಿದಿರತಕ್ಕಂಥ ನೀರು 4.5 ಟಿ ಎಂ ಸಿ ಎಫ್ ಟಿ ಅಷ್ಟು ಮಾತ್ರ ಎಂದು ಹೇಳಿ ನಾವು ನೀರನ್ನು ಬಿಟ್ಟಿಲ್ಲ ಅನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ಆದರೆ ನಾನು ಹೇಳುತ್ತಿದ್ದೇನೆ, ನೀವು ಸತ್ಯವನ್ನು ಮರೆಮಾಚಿ ಈ ಸದನವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಈ ಸದನಕ್ಕೆ ಸತ್ಯವನ್ನು ನೀವು ಹೇಳುತ್ತಿಲ್ಲ. ನೀವು ನೀರು ಬಿಟ್ಟಿದ್ದೀರೆಂಬ ಆಪಾದನೆಯನ್ನು ನಾನು ಮಾಡುತ್ತಿದ್ದೇನೆ. ಏಕೆಂದರೆ, ಸುಮಾರು 6 ದಿನಗಳ ಕಾಲ ಸತತವಾಗಿ ಸಂಗಮದ ಮೂಲಕವಾಗಿ 12 ಅಡಿ ನೀರು ಹರಿದಿದೆ. ಇದನ್ನು ನಾನು ಹೇಳತಕ್ಕಂಥ ಮಾತಲ್ಲ ಅಧ್ಯಕ್ಷರೇ 12 ಅಡಿ ನೀರು ಹರಿದಿರುವುದನ್ನು ಸಾವಿರಾರು ಜನ ನೋಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ವಿ.ಸಿ. ಶುಕ್ಲಾರವರು, ಪಾರ್ಲಿಮೆಂಟ್‌ನಲ್ಲಿ ಮತ್ತು ಬೇರೆ ಕಡೆಗಳಲ್ಲಿ ಕರ್ನಾಟಕ ಸರ್ಕಾರ ಟ್ರಿಬ್ಯೂನಲ್ ಮಧ್ಯಂತರ ಆದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿದೆ ಎಂದು ಹತ್ತು ಭಾರಿ ಹೇಳಿದ್ದಾರೆ. ಅದಕ್ಕೆ ನಮ್ಮ ಸರ್ಕಾರದವರು ಉತ್ತರವನ್ನು ಕೊಟ್ಟೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ವಿ.ಸಿ. ಶುಕ್ಲಾ ಅವರ ಹೇಳಿಕೆಯಲ್ಲಿ ಇದುವರೆಗೂ ಒಂದೂ ಬದಲಾವಣೆಯಾಗಿಲ್ಲ. ಆದರೆ ಇವರು ಹೇಳುತ್ತಿದ್ದಾರೆ. ನಾವು ಪತ್ರ ಕೊಟ್ಟಿಲ್ಲ ಎಂದು; ಅವರು ಹೇಳುತ್ತಾರೆ ಪತ್ರ ನನ್ನ ಹತ್ತಿರ ಇದೆ ಎಂದು, ಪತ್ರ ಇಲ್ಲದೆ ಜಯಲಲಿತಾ ಅವರು ಮುಷ್ಕರವನ್ನು ಹೇಗೆ ವಾಪಸ್ ತೆಗೆದುಕೊಂಡರು? ನನ್ನ ತಿಳುವಳಿಕೆ ಪ್ರಕಾರ ಪತ್ರ ಬಂದಿದೆ ಎಂದು ಸಾಬೀತುಪಡಿಸಿಕೊಳ್ಳಲು ಅವರ ಪ್ರತಿನಿಧಿಗಳು ದೆಹಲಿಯಲ್ಲಿ ಆ ಪತ್ರವನ್ನು ನೋಡಿದ್ದೇವೆ ಎನ್ನುವ ಮಾತನ್ನು ಸಹಿತ ಅವರು ಹೇಳುತ್ತಿದ್ದಾರೆ. ಹಾಗಾದರೆ ಇದರ ಗುಟ್ಟು ಏನು ಎಂಬುದನ್ನು ಈ ಸದನಕ್ಕೆ

ದಿನಗಳ ಕಾಲ ಹೇಗೆ ಹರಿಯಿತು ನೀರು? ಬಿಳುಗುಂಬಾದಲ್ಲಿ ಏನು ಸೆಂಟ್ರಲ್ ವಾಟರ್ ಕಮಿಷನ್‌ರವರು ಇಟ್ಟಿರುವ ಮೆಷರಿಂಗ್ ರಾಡ್ ಇದೆ, ಆ ಮೆಷರಿಂಗ್ ರಾಡ್ ಪ್ರಕಾರವಾಗಿ ಎಷ್ಟು ನೀರು ಹರಿದಿದೆ; ಅದರ ಮ್ಯಾನುಪ್ಲೇಷನ್ ಕೂಡಾ ಆಗಿದೆ ಎಂದು ಈ ಸಂದರ್ಭದಲ್ಲಿ ಆಪಾದನೆ ಮಾಡುತ್ತಿದ್ದೇನೆ. ಬೇಕು ಎಂದು ಮ್ಯಾನುಪ್ಲೇಟ್ ಮಾಡಿದ್ದಾರೆ. ನಮಗೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತೆ ಕೇಂದ್ರ ಸರ್ಕಾರದವರಿಗೆ ನಾವು ಜಗಳ ಆಡಿಕೊಂಡೇ ಇರಬೇಕೆಂಬುದೇ ಬಹಳ ಮುಖ್ಯವಾಗಿದೆ. ಪ್ರೊಫೆಸರ್ ನಂಜುಂಡಸ್ವಾಮಿಯವರು ಒಂದು ಹೇಳಿಕೆಯನ್ನು ಸದನದ ಹೊರಗಡೆ ಕೊಟ್ಟಿದ್ದಾರೆ. ಏನೆಂದರೆ, ರೈತರಿಗೇ ಈ ವಿಚಾರವನ್ನು ಬಿಟ್ಟುಬಿಡಿ. ನಾವು ಬಗೆಹರಿಸಿಕೊಳ್ಳುತ್ತೇವೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ರಾಜಕಾರಣಿಗಳು ಇದಕ್ಕೆ ಕೈಹಾಕಬೇಡಿ ಎನ್ನತಕ್ಕಂಥ ಮಾತು ಅದು. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ, ಕಾವೇರಿ ಜಲಾನಯನ ಪ್ರದೇಶದ ಒಬ್ಬ ಚುನಾಯಿತ ಪ್ರತಿನಿಧಿಯಾಗಿ, ನಿಜವಾಗಿಯೂ ಇದನ್ನು ರೈತರು ಬಗೆಹರಿಸಿಕೊಳ್ಳುವುದಾದಲ್ಲಿ ಖಂಡಿತವಾಗಿ ಇದನ್ನು ಒಪ್ಪೋಣ. ಇದಕ್ಕೆ ಇಡೀ ಸದನವೇ ಒಂದು ತೀರ್ಮಾನ ಮಾಡಿ ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ ಬೇಕಾದರೆ ಆಥರೈಸ್ ಮಾಡೋಣ. ಆದರೆ ನಾನು ಅಂದುಕೊಂಡಿದ್ದೇನೆ, ಅದು ಅಷ್ಟು ಸುಲಭಸಾಧ್ಯವಾಗಿರತಕ್ಕಂಥ ವಿಚಾರವಲ್ಲ.

ಈವತ್ತು ತಂಜಾವೂರಿನಲ್ಲಿರತಕ್ಕಂಥ ರೈತ ಪ್ರತಿನಿಧಿಗಳೇ ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್ ಹೋಗಿದ್ದು. ಇಲ್ಲದೆ ಹೋಗಿದ್ದರೆ ಈ ವಿಷಯ ಈ ಮಟ್ಟಕ್ಕೆ ಹೋಗುತ್ತಾ ಇರಲಿಲ್ಲ. ಆದ್ದರಿಂದ ಇದು ಹೇಗೆ ಮತ್ತು ಯಾವರೀತಿಯಲ್ಲಿ ಸಾಧ್ಯ ಎಂಬುದರ ಬಗ್ಗೆ ಮಾನ್ಯ ನಂಜುಂಡ ಸ್ವಾಮಿಯವರು ನಮಗೆ ಬೆಳಕನ್ನು ಚೆಲ್ಲಬೇಕೆಂದು ಅವರಲ್ಲಿ ವಿನಂತಿಯನ್ನು ಮಾಡುತ್ತೇನೆ, ಈ ಸರಕಾರದವರು ತೆಗೆದುಕೊಂಡಿರತಕ್ಕಂಥ ಒಂದೇ ಒಂದು ತೀರ್ಮಾನವನ್ನು ನಾನು ಸ್ವಾಗತ ಮಾಡುತ್ತೇನೆ. ಅದೇನೆಂದರೆ, ಈ ಮಾನಿಟರಿಂಗ್ ಸೆಲ್ ಮಾಡಲಿಕ್ಕೆ ಎಂದು ಹೇಳಿ ಸಂಬಂಧಪಟ್ಟ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ಸಭೆಯನ್ನು ಕರೆಯ ಬೇಕೆಂದಿದ್ದಾರೆ; ಹಾಗೆ ಏನಾದರೂ ಅವರು ಕರೆದರೆ ನಮ್ಮ ಮುಖ್ಯ ಕಾರ್ಯದರ್ಶಿಗಳನ್ನು ನಾವು ಕಳುಹಿಸಿಕೊಡುವುದಿಲ್ಲ ಎಂಬ ಮಾತನ್ನು ನೀವು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ನೀವು ಕಳುಹಿಸಲೇ ಬೇಡಿ. ಇವೊತ್ತು ಇಡೀ ಕರ್ನಾಟಕ ರಾಜ್ಯದ ನಾಲ್ಕೂವರೆ ಕೋಟಿ ಜನರು ನಿಮ್ಮ ಒಟ್ಟಿಗೆ ಇದ್ದಾರೆ ಈ ವಿಚಾರದಲ್ಲಿ. ಆದ್ದರಿಂದ ಈ ವಿಚಾರದಲ್ಲಿ ನಾವು ಹೋಗತಕ್ಕಂಥ ಅವಶ್ಯಕತೆ ಇಲ್ಲ ಮತ್ತು ಮಾತು ಕತೆಯಲ್ಲಿ ಭಾಗವಹಿಸತಕ್ಕಂಥ ಅವಶ್ಯಕತೆಯೂ ಇಲ್ಲ. ನಾನು ಈ ಮಾತನ್ನು ಹೇಳುವಾಗ ರಾಷ್ಟ್ರದ ಸಮಗ್ರತೆಯನ್ನು ಮತ್ತು ಐಕ್ಯತೆಯನ್ನು ಕಾಪಾಡುವ ದೃಷ್ಟಿಯಿಂದಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇದು ಡೆಲ್ಲಿಯಲ್ಲಿರತಕ್ಕಂಥ ನಮ್ಮ ದೊರೆಗಳಿಗೆ ಗೊತ್ತಾಗ ಬೇಕು. ಈ ಸಮಸ್ಯೆಯನ್ನು ಮಾತುಕತೆಯ ಮೂಲಕ ಮಾತ್ರ ಬಗೆಹರಿಸುವುದಕ್ಕೆ ಸಾಧ್ಯವೇ ವಿನಹ ಟ್ರಿಬ್ಯೂನಲ್ ಮೂಲಕವಾಗಲೀ, ಸುಪ್ರೀಮ್ ಕೋರ್ಟಿನ ಮೂಲಕವಾಗಲೀ ಇದನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಎಂದು ನನ್ನ ಮಿತ್ರರಾದ ವೈ.ಕೆ.ರಾಮಯ್ಯನವರು ಒಂದು ವಾದವನ್ನು ಇಟ್ಟರು. ಸುಪ್ರೀಂಕೋರ್ಟಿನವರು ನಮ್ಮ ನಂಜೇಗೌಡರ ಮತ್ತು ಮಾದೇಗೌಡರು ಹಾಕಿರತಕ್ಕಂಥ ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್‌ನ್ನು ಡಿಸ್‌ಮಿಸ್ ಮಾಡತಕ್ಕಂಥ ಸಂದರ್ಭದಲ್ಲಿ ನಮಗೆ ಜ್ಯುರಿಡಿಕ್ಷನ್ ಇಲ್ಲ ಎಂದು ಹೇಳಿದರು, ಟ್ರಿಬ್ಯೂನಲ್ ಮಾಡತಕ್ಕಂಥ ವಿಚಾರದಲ್ಲಿ ಜ್ಯೂರಿಡಿಕ್ಷನ್ ಬಗ್ಗೆ ಏಕೆ ಹೇಳಿದರು? ಇದು ನಮ್ಮ ಮುಂದೆ ಬರತಕ್ಕಂಥ

ಪ್ರಶ್ನೆ. ಇವೊತ್ತು ಸುಪ್ರಿಂಕೋರ್ಟಿಗೂ ಕೂಡ ಯಾವ ರೀತಿಯಲ್ಲಿ ನೀರು ಹಂಚಬೇಕು ಎನ್ನುವುದರ ಬಗ್ಗೆ ನಾವು ಸರಿಯಾಗಿ ಕಾನೂನು ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಇವರು ಹೇಗೆ ಹೇಳುವುದಕ್ಕೆ ಆಗುತ್ತದೆ? ಇದು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ. ಎಲ್ಲಕ್ಕೂ ಮುಖ್ಯವಾಗಿ ಈ ಸರಕಾರದ ಬಗ್ಗೆ ಯಾರಿಗೆ ಈ ಮಾತನ್ನು ಹೇಳಬೇಕೆಂಬುದು ಗೊತ್ತಾಗುತ್ತಾ ಇಲ್ಲ. ನೀರಾವರಿ ಮುಂತ್ರಿಗಳು ವಿಧಾನಪರಿಷತ್‌ನಲ್ಲಿದ್ದಾರೆ, ಮುಖ್ಯಮಂತ್ರಿಯವರು ಅವರ ರಕ್ಷಣೆಗಾಹೋಗಿದ್ದಾರೆ. ಕಾನೂನು ಮಂತ್ರಿಗಳು ಮಾತು ಕತೆ ಮಾಡುತ್ತಿದ್ದಾರೆ. ನಾನು ಕೇಳುವುದಿಷ್ಟೇ; ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶಗಳಿಗೆ ಹಣ ಇದೆ ಎಂದು ನೀವು ಹೇಳುತ್ತಾ ಇದ್ದೀರಲ್ಲಾ, ಹಾಗಾದರೆ ಎಷ್ಟು ಹಣವನ್ನು ಈ ವರ್ಷ ಮತ್ತು ಕಳೆದ ವರ್ಷ ಅಲಾಟ್ ಮಾಡಿದ್ದೀರಿ; ಅದರಲ್ಲಿ ಎಷ್ಟು ಖರ್ಚಾಗಿದೆ? ನನಗೆ ಗೊತ್ತಿರುವ ಹಾಗೆ ಸುಮಾರು 100 ಕೋಟಿ ರೂಪಾಯಿಗಳಷ್ಟು ಕಂಟ್ರಾಕ್ಟರ್‌ಗಳು ಮಾಡಿರತಕ್ಕಂಥ ಕೆಲಸಗಳ ಪೆಂಡಿಂಗ್‌ಬಿಲ್ಸ್ ಇದೆ. ಹೀಗಾದರೆ ನೀವು ಯಾರಿಗೆ ಕಂಟ್ರಾಕ್ಟ್‌ನ್ನು, ಹೇಗೆ ಕೊಡುತ್ತೀರಿ ಎಂಬುದು ನನಗೆ ಸಂಬಂಧ ಪಡದ ವಿಚಾರ. ಆದರೆ ಎಷ್ಟು ದುಡ್ಡು ಪೆಂಡಿಂಗ್ ಇದೆ, ನಿಮ್ಮ ಟ್ರೆಜರಿ ಖಾಲಿ ಆಗಿ ಎಷ್ಟು ಹಣ ಹೀಗೆ ಬಾಕಿ ಕೊಡುವುದಿದೆ ಎಂಬುದು ನಮಗೆ ಗೊತ್ತಾಗ ಬೇಕಾಗುತ್ತದೆ. ಕಳೆದ ಮೂರು ತಿಂಗಳುಗಳಲ್ಲಿ ಎಷ್ಟು ಎಲ್‌ಒಸಿ ರಿಲೀಸ್ ಮಾಡಿದ್ದೀರಿ; ಮಾರ್ಚ್ ನಂತರ ಏಪ್ರಿಲ್ ಜೂನ್‌ನಲ್ಲಿ ಎಂಬ ಮಾಹಿತಿಯನ್ನು ಈ ಸದನಕ್ಕೆ ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡಿ ನಮ್ಮ ನಾಯಕರಾಗಿರತಕ್ಕಂಥ ಚಂದ್ರೇಗೌಡರು ಇದರ ಬಗ್ಗೆ ಮಾತನಾಡುವವರಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದಿಷ್ಟೇ; ನೀರಾವರಿ ವಿಚಾರದಲ್ಲಿ ಕೃಷ್ಣ ಕಾವೇರಿ ವಿಚಾರದಲ್ಲಿ ನಾವು ರಾಜಕೀಯವನ್ನು ಮಾಡಿ ಸಾಧನೆ ಮಾಡಬೇಕಾದ್ದು ಏನೂ ಇಲ್ಲ. ಸರಕಾರದ ಜೊತೆಯಲ್ಲಿ ಈ ವಿಚಾರದಲ್ಲಿ ನಾವಿದ್ದೇವೆಂದು ಪದೇ ಪದೇ ಹೇಳಿದ್ದೇವೆ. ಆದರೆ ತಾವುಗಳು ಎಷ್ಟೊಂದು ಪ್ರಾಮಾಣಿಕತೆಯಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು, ಅಷ್ಟನ್ನು ಮಾಡಲು ನಿಮ್ಮ ಕೈಯಿಂದ ಆಗುತ್ತಾ ಇಲ್ಲ. ಅದಕ್ಕೆ ಕಾರಣಗಳೇನೇ ಇರಬಹುದು. ನಿಮ್ಮ ಅಂತರಿಕ ಜಗಳ ಇರಬಹುದು, ಅಥವಾ ನೀವು ಸರಕಾರವನ್ನು ನಡೆಸಿಕೊಂಡು ಹೋಗುತ್ತಿರುವ ಧಾಟಿಯೂ ಇರಬಹುದು. ಆದರಿಂದಾಗಿ ನಿಮ್ಮ ಖಜಾನೆಯಲ್ಲಿ ಹಣ ಇಲ್ಲದಿರ ಬಹುದು. ಈ ಎಲ್ಲಾ ಕಾರಣಗಳಿಗಾಗಿ ನೈತಿಕವಾಗಿ ನೀವು ಅಧಿಕಾರದಲ್ಲಿರುವುದಕ್ಕೆ ನಿಮಗಂತೂ ಹಕ್ಕಿಲ್ಲ ಎಂದು ಹೇಳಿ, ಇನ್ನು ಪತ್ರಿಕೆಗಳಲ್ಲಿ ಬಂದ ವಿಚಾರದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಸಿಂಧ್ಯಾರವರು, ಜೀವರಾಜ್ ಆಳ್ವರವರು ರಾಜಕೀಯವನ್ನು ಬೆರೆಸುವುದಕ್ಕೆ ಹೊರಟಿದ್ದಾರೆ, ಕೃಷ್ಣರವರ ರಾಜಿನಾಮೆಯನ್ನು ಮಾತ್ರ ಕೇಳುತ್ತಿದ್ದಾರೆ, ಅವರು ಭಿನ್ನಮತೀಯ ನಾಯಕರಾಗಿರುವ ಕಾರಣದಿಂದಾಗಿ; ಆದ್ದರಿಂದ ಮೊಯಿಲಿಯವರ ಪರವಾಗಿ ಇವರುಗಳು ಇದ್ದಾರೆ ಎಂಬ ಮಾತನ್ನು ಹೇಳುತ್ತಿದ್ದಾರೆ. ನಾನು ಪ್ರಾಮಾಣಿಕವಾಗಿ ಒಂದು ಮಾತನ್ನು ಹೇಳುತ್ತಿದ್ದೇನೆ. ಏನೆಂದರೆ, ನಮಗೆ ಮೊಯಿಲಿಯವರೇ ಮುಖ್ಯಮಂತ್ರಿಗಳಾಗಿರಲಿ; ಅಥವಾ ಕೃಷ್ಣರವರು ಮುಖ್ಯಮಂತ್ರಿಗಳಾಗಿರಲಿ, ಇದು ನಮಗೆ ಮುಖ್ಯ ಅಲ್ಲ. ಇವೊತ್ತು ಈ ಸರಕಾರ ಕಳೆದ ನಾಲ್ಕು ವರ್ಷಗಳ ಹಿಂದೆ ಕರ್ನಾಟಕ ರಾಜ್ಯದ ಜನತೆಗೆ ಏನು ಮಾತನ್ನು ಕೊಟ್ಟು, ಅಧಿಕಾರಕ್ಕೆ ಬಂದರೆ ಏನೇನು ಮಾಡುತ್ತೇವೆ ಎಂದು ಹೇಳಿದ್ದೀರಿ. ಅದರಲ್ಲಿ ಸಂಪೂರ್ಣವಾಗಿ ತಾವುಗಳು ವಿಫಲರಾಗಿದ್ದೀರಿ. ವಿಶ್ವಾಸ ದ್ರೋಹದ ಕೆಲಸವನ್ನು

ಕೊಡತಕ್ಕಂಥ ಪ್ರಶ್ನೆ ಅಲ್ಲ. ನಿನ್ನೆಯ ದಿವಸ ಆಗಿರತಕ್ಕಂಥ ಘಟನೆಗಳನ್ನು ನೆನಸಿಕೊಂಡರೆ ನನಗನ್ನಿಸುತ್ತದೆ, ನಾವು ಶಾಸಕರು ಎಂದು ಹೇಳಿಕೊಳ್ಳುವುದಕ್ಕೂ ನಾಚಿಕೆಯಾಗತಕ್ಕಂಥ ಒಂದು ಸಂದರ್ಭವನ್ನು ಇವೊತ್ತು ನೀವು ತೆಗೆದುಕೊಂಡು ಬಂದಿದ್ದೀರಿ. ಆದ್ದರಿಂದ ತತ್‌ಕ್ಷಣ ನೀವು ರಾಜಿನಾಮೆ ಕೊಡಲೇ ಬೇಕು ಎಂದು ಹೇಳಿ ನಾನು ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ತೀರ್ಥಹಳ್ಳಿ) :- ಸನ್ಮಾನ್ಯ ಅಧ್ಯಕ್ಷರೇ, ಕಳೆದ ತಿಂಗಳು 20ನೇ ತಾರೀಖು ಪ್ರತಿಪಕ್ಷಗಳ ಎಲ್ಲಾ ಮುಖಂಡರುಗಳು ರಾಜ್ಯದ ರಾಜ್ಯಪಾಲರನ್ನು ನೋಡಿ ತಕ್ಷಣವೇ ವಿಧಾನಸಭೆಯ ಅಧಿವೇಶನವನ್ನು ಕರೆಯಬೇಕು, ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆಯಲು ಈ ಕಾವೇರಿಯಂಥಹ ಜ್ವಲಂತ ಸಮಸ್ಯೆಯ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆಮಾಡಿಕೊಂಡೆವು. ಒಂದು ತಿಂಗಳ ತರುವಾಯ ಈ ಸರ್ಕಾರ ಶಾಸನಸಭೆಯನ್ನು ಕರೆಯಲು ತೀರ್ಮಾನ ಮಾಡಿತು. ತಾವೂ ಕೂಡ ಈ ಚರ್ಚೆಯ ಪ್ರಾಮುಖ್ಯತೆಯನ್ನು ಗಮನಿಸಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ನಿನ್ನೆಯಿಂದ ಈ ಚರ್ಚೆ ನಡೆದಿದೆ. ಇದು ಒಂದು ರೀತಿಯ ಕಂಠ ಶೋಷಣೆ ಆಗುತ್ತಿದೆಯೇನೋ ಅಂತ ನನಗನ್ನಿಸುತ್ತಿದೆ. ಮಾನ್ಯ ಅಧ್ಯಕ್ಷರೇ, ಕನ್ನಡದಲ್ಲಿ ಒಂದು ಗಾಧೆ ಇದೆ, "ಹನುಮಂತರಾಯನೇ ಹಗ್ಗ ತಿಂತಾ ಇದ್ದರೆ; ಪೂಜಾರಿ ಶಾವಿಗೆ ಬೇಡಿದನಂತೆ". ಆ ರೀತಿ ಈ ಸರ್ಕಾರಕ್ಕೆ ಏನಾದರೂ ನಿರೀಕ್ಷಿತ ಫಲ ಕೊಡಲಿಕ್ಕೆ ಸಾಧ್ಯವೇ? ಆದರೆ ಎಲ್ಲಾದರೂ ಕಂಠಶೋಷಣೆ ಆಗುತ್ತಿದೆಯೇನೋ; ನಾವೇಕೆ ಶಾವಿಗೆ ಬೇಡೋಕೆ ಹೊರಟಿದ್ದೇವೆ ಅಂತ ನನಗೆ ಅರ್ಥವಾಗುತ್ತಿಲ್ಲ. ಆದರೂ ಒಂದು ಸರ್ಕಾರ ಇದೆಯೆಂದು ಭಾವನೆ ಮಾಡಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಕಾವೇರಿ ನ್ಯಾಯಾಧೀಕರಣ 3-4-92 ರಲ್ಲಿ ಮರುಪರಿಶೀಲನಾ ಅರ್ಜಿ ಮೇಲೆ ತನ್ನ ಅಭಿಪ್ರಾಯ ಅಭಿವ್ಯಕ್ತಿ ಮಾಡುತ್ತಾ ಒಂದು ಮಾತು ಹೇಳಿತು. I quote ಪುಟ 29 ಇಂತಹ ಪ್ರಸಂಗ ಬಂದರೆ ಏನು ಮಾಡಬೇಕು, ಯಾವರೀತಿ ರಾಜ್ಯಗಳು ನಡೆದುಕೊಳ್ಳಬೇಕು ಎಂಬ ಮಾರ್ಗಸೂಚಿಯನ್ನು ಆದರಲ್ಲಿ ಕೊಟ್ಟರು. ಏನೆಂದರೆ,

"If in future a situation of distress is caused by diminish in supply of water for meeting the releases order, a similar method of prorata sharing of the distress can always be adopted. For the foregoing reasons, no intereference is called for at this stage with our order dated 25th June, 1991 i.e., interim order. We may, however, make it clear that in case hereinafter there is any change of circumstances or undue hardship is caused in particular year to any party, it will be open to such party to approach the tribunal for appropriate orders."

The direction of the court is, you approach the tribunal for redressal. On the contrary, ತಮಿಳುನಾಡಿನ ಮುಖ್ಯಮಂತ್ರಿಗಳು ತಮ್ಮ ಒತ್ತಡದ ತಂತ್ರವನ್ನು ಕೇಂದ್ರ ಸರ್ಕಾರದ ಮೇಲೆ ಹಾಕುತ್ತ ಟ್ರಿಬ್ಯೂನಲ್‌ಗೆ ಹೋಗುವುದಿಲ್ಲ. They defy the directions of the tribunal. ನಮ್ಮ ರಾಜ್ಯ ಸರ್ಕಾರ ಇದನ್ನು ಟ್ರಿಬ್ಯೂನಲ್ ಗಮನಕ್ಕೆ

ತರುವುದಿಲ್ಲ. ಮುಖ್ಯಮಂತ್ರಿಗಳು ಉಪವಾಸ ಕೂತರು ಅಂತ ಹೇಳಿಮೆಚ್ಚುಗೆ ವ್ಯಕ್ತಪಡಿಸುತ್ತಾರೆ, ಯಾರು ತಮಿಳುನಾಡಿನ ಜನ ಅಲ್ಲ, ಕೇಂದ್ರದ ಗೃಹಸಚಿವರು; ಯಾರಾದರೂ ಈ ಆಜ್ಞೆಗಳನ್ನು ಓದಿದ್ದಾರೆಯೇ? ರಾಜ್ಯಸಭೆಯಲ್ಲಿ ಎಸ್.ಬಿ.ಚವಾಣರು ಒಂದು ಮಾತನ್ನು ಅಪ್ಪಣೆ ಕೊಡಿಸಿದ್ದಾರೆ. ಏನೆಂದರೆ ಕಾವೇರಿ ವಿವಾದ ಕುರಿತು ಜಯಲಲಿತ ಅವರ ದೃಢ ನಿಲುವನ್ನು ಮೆಚ್ಚಬಲ್ಲೆ ಎಂ; Compliments by no less than the Home Minister of India.

ರಾಜ್ಯಾಂಗ ವಿರುದ್ಧವಾದಂಥ ಕ್ರಿಯೆ ಏನಾದರೂ ನಡೆದರೆ ಯಾರು ರಾಜ್ಯಾಂಗದ ರಕ್ಷಣೆಯ ಹೊರೆಯನ್ನು ಹೊತ್ತಿದ್ದಾರೋ ಅಂತಹ ಗೃಹ ಸಚಿವರು ಕಾವೇರಿ ವಿವಾದ ಕುರಿತು ಜಯಲಲಿತಾ ಅವರ ಧೃಡ ನಿಲುವನ್ನು ಮೆಚ್ಚಬಲ್ಲರು. ಆದರೆ ಅವರು ಇಂತಹ ಬೆದರಿಕೆ ಹಾಕುವುದನ್ನು ಸಹಿಸಲಾಗದು ಎಂಬ ಮಾತನ್ನು ಹೇಳಿದ್ದಾರೆ; ಅಂದರೆ ಶ್ರೀಮತಿ ಜಯಲಲಿತಾ ಅವರ ಒತ್ತಡದ ತಂತ್ರ ಕೇಂದ್ರ ಸರ್ಕಾರದ ಮೆಚ್ಚುಗೆಯನ್ನು ಪಡೆದಿದೆ. ಈ ಮೆಚ್ಚುಗೆಯಿಂದ ಉತ್ತೇಜಿತರಾದ ಮುಖ್ಯಮಂತ್ರಿ ಎಷ್ಟು ದೂರಕ್ಕೆ ಹೋಗುತ್ತಾರೆ ಅಂದರೆ ಆಗಸ್ಟ್ 15ನೇ ತಾರೀಖು ರಾಷ್ಟ್ರ ಧ್ವಜವನ್ನು ಅನಾವರಣ ಮಾಡುತ್ತಾ, ತಮಿಳುನಾಡಿನ ಮುಖ್ಯಮಂತ್ರಿಗಳಾಡಿದ ಮಾತು ಬೇರೆ ಯಾವುದೇ ಜನತಂತ್ರದ ಸರ್ಕಾರ ಕೇಂದ್ರದಲ್ಲಿ ಇದ್ದಿದ್ದರೆ ಒಂದು ನಿಮಿಷ ಕೂಡ ಆ ಸರ್ಕಾರ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಿರಲಿಲ್ಲ. ರಾಜ್ಯಾಂಗದ 356ನೇ ವಿಧಿಯನ್ನು ಏನಾದರೂ ಬಳಕೆ ಮಾಡುವುದಕ್ಕೆ ಅವಕಾಶ ಇದೆ ಅಂದರೆ ಇದಕ್ಕಿಂತ ಉತ್ತಮವಾದಂತಹ ಉದಾಹರಣೆ ಮತ್ತೊಂದು ನಿಮಗೆ ಸಿಗುವುದಿಲ್ಲ. ಅವರು ಏನು ಹೇಳುತ್ತಾರೆ ಅಂದರೆ "ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ಆಜ್ಞೆಯನ್ನು ಕರ್ನಾಟಕ ಸರ್ಕಾರ ಅನುಷ್ಠಾನ ಮಾಡುವುದಕ್ಕೆ ಸಂಬಂಧಿಸಿದಂತೆ ಪುನರ್ ಪರಿಶೀಲನಾ ಹಾಗೂ ಉಸ್ತುವಾರಿ ಸಮಿತಿಯನ್ನು ರಚಿಸುವ ಮೂಲಕ ವಿವಾದವನ್ನು ತಮಿಳುನಾಡಿನ ಪರವಾಗಿ ಇತ್ಯರ್ಥ ಮಾಡದಿದ್ದರೆ ತಮಿಳುನಾಡು ಭಾರತದ ಒಕ್ಕೂಟದಿಂದ ಪ್ರತ್ಯೇಕವಾಗಬೇಕಾದಿತು;" ಎನ್ನತಕ್ಕಂಥ ಮಾತನ್ನು ತಮಿಳುನಾಡು ಮುಖ್ಯಮಂತ್ರಿಯವರು ಹೇಳಿದ್ದಾರೆ. ಅವರು ಈ ರಾಷ್ಟ್ರದ ಸಮಗ್ರತೆಯನ್ನು ಪ್ರಶ್ನೆ ಮಾಡುತ್ತಾರೆ. ಈ ರಾಷ್ಟ್ರದ ಏಕತೆಯನ್ನು ಪ್ರಶ್ನೆ ಮಾಡುತ್ತಾರೆ. ಈ ದೇಶದ ರಾಜ್ಯಾಂಗವನ್ನು ಪ್ರಶ್ನೆ ಮಾಡುತ್ತಾರೆ. ಈ ರಾಷ್ಟ್ರದ ಒಕ್ಕೂಟದ ವ್ಯವಸ್ಥೆಯನ್ನು ಪ್ರಶ್ನೆ ಮಾಡುತ್ತಾರೆ. ಆಗ ಕೇಂದ್ರ ಸರ್ಕಾರ ಬಾಯಿ ಬಿಡುವುದಿಲ್ಲ. ಅದೇ ಭಾಷಣದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಅವರು ಹೇಳುತ್ತಾರೆ. ತಮಿಳರ ಹಿತಸಕ್ತಿಗಾಗಿ ಹಾಗೂ ರಾಜ್ಯದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ತಾವು ಯಾವುದೇ ಕಷ್ಟಗಳನ್ನು ಎದುರಿಸಲು ಸಿದ್ಧ " ಎಂದು; ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದನಂತರ ಎರಡೂ ರಾಜ್ಯಗಳ ಜನರನ್ನು ಎತ್ತಿಕಟ್ಟತಕ್ಕಂಥ ಈ ಪ್ರವೃತ್ತಿಯನ್ನು ಸಹಿಸಿಕೊಳ್ಳತಕ್ಕಂಥ ಒಂದು ಕೇಂದ್ರ ಸರ್ಕಾರ ನಮ್ಮಲ್ಲಿದೆ. ನಿನ್ನೆ ಬಹಳ ಸ್ಪಷ್ಟವಾಗಿ ಹಿರಿಯ ಸದಸ್ಯರಾದಂತಹ ಮಾನ್ಯ ವೀರೇಂದ್ರ ಪಾಟೀಲರು ಒಂದು ಮಾತನ್ನು ಹೇಳಿದರು. ಕೇಂದ್ರ ಸರ್ಕಾರದವರು ಕೂಡ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ರಾಜಕೀಯ ನಾಟಕವನ್ನಾಡುತ್ತಿದ್ದಾರೆ ಎನ್ನತಕ್ಕ ಶಬ್ದವನ್ನು ಬಳಸಿದರು. ಅದು ಅನುಭವದಿಂದ ಬಂದಂತಹ ಮಾತು. ಜಯಲಲಿತಾರವರು ಅಮರಣಾಂತರ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡುತ್ತಾರೆ. ಕೇಂದ್ರ ಸರ್ಕಾರದ ವಿರುದ್ಧ ಎಲ್ಲಾ ವಿರೋಧ ಪಕ್ಷಗಳು ಒಟ್ಟಾಗಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಬೇಕೆನ್ನತಕ್ಕ ತೀರ್ಮಾನವನ್ನು ತೆಗೆದುಕೊಂಡಂಥ

ಅಲ್ಪಮತದ ಸರ್ಕಾರ. ಆ ಸರ್ಕಾರಕ್ಕೆ ತನ್ನ ಇರುವಿಕೆಗೆ ತನ್ನ ಶಕ್ತಿ ಸಾಲದು ಎನ್ನುವುದು ಗೊತ್ತು. ಅದಕ್ಕಾಗಿ ಬೇರೆಯವರ ಸ್ನೇಹ ಬೆಂಬಲ ಅನಿವಾರ್ಯವಾಗಿರತಕ್ಕಂಥದ್ದು. ಇಂತಹ ಸಮಯದಲ್ಲಿ ಆ ಪರಿಸ್ಥಿತಿಯ ದುರ್ಲಾಭವನ್ನು ಪಡೆಯುವುದಕ್ಕಾಗಿ ಜಯಲಲಿತಾ ಅವರು ಉಪವಾಸ ಸತ್ಯಾಗ್ರಹ ಎನ್ನುವಂತಹ ಬ್ರಹ್ಮಾಸ್ತ್ರವನ್ನು ಬಳಕೆಮಾಡಿದರು. ಬ್ರಹ್ಮಾಸ್ತ್ರ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಲ್ಲ. ಅವರೇ ಹೇಳಿದ್ದು. ಇಷ್ಟೇ ಅಲ್ಲ, ಕೇಂದ್ರ ಸರ್ಕಾರದಿಂದ ವಿ.ಸಿ.ಶುಕ್ಲಾ ಅವರು ರಾತ್ರೋರಾತ್ರಿ ಬಂದರು." ಆ ಮಧ್ಯರಾತ್ರಿಯಲ್ಲಿ ಏನು ನಡೆಯಿತು? ಪ್ರತಿ ಪಕ್ಷದ ಮುಖಂಡರುಗಳನ್ನಾಗಲಿ ಸಂಬಂಧಪಟ್ಟ ಆಸಕ್ತಿ ಇರತಕ್ಕಂಥ ಸದಸ್ಯರುಗಳನ್ನಾಗಲಿ, ರಾಜಕೀಯ ಮುಖಂಡರನ್ನಾಗಲಿ ಯಾರನ್ನೂ ಕೇಳದೆ ರಾತ್ರೋ ರಾತ್ರಿ ಮಿಡ್‌ನೈಟ್ ಕಾನ್‌ಫೆರೆನ್ಸ್ ಆಯಿತು. ಅಲ್ಲೇ ನಮಗೆ ಸಂಶಯ ಬಂದಿದ್ದು. ಆ ವಿಚಾರಕ್ಕೆ ನಾನು ಸ್ವಲ್ಪ ನಿಧಾನವಾಗಿ ಬರುತ್ತೇನೆ. ಇಲ್ಲಿ ಕೇಂದ್ರ ಸರ್ಕಾರ ಇಷ್ಟೆಲ್ಲಾ ಸಹಾಯ ಮಾಡಿದ್ದರೂ, ತನ್ನ ರಾಜ್ಯದ ಹಕ್ಕನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ತಮಿಳುನಾಡಿನ ಮುಖ್ಯಮಂತ್ರಿಯವರು ಶ್ರೀಮಾನ್ ನರಸಿಂಹರಾಯರ ಸರ್ಕಾರದ ವಿರುದ್ಧ ಮತವನ್ನು ಹಾಕುತ್ತಾರೆ. ವಿರೋಧ ಪಕ್ಷಗಳು ಕೊಟ್ಟಂಥ ಅವಿಶ್ವಾಸ ನಿರ್ಣಯಕ್ಕೆ ಬೆಂಬಲಿಸಿ ತಮ್ಮ ರಾಜ್ಯದ ಹಕ್ಕನ್ನು ಪ್ರತಿಷ್ಠಾಪನೆ ಮಾಡುವುದಕ್ಕಾಗಿ ಯಾವ ಹಂತಕ್ಕೂ ಅವರು ತಲುಪುತ್ತಾರೆ. ಮಾನ್ಯ ಅಧ್ಯಕ್ಷರೇ, 1991ರ ಉತ್ತರಾರ್ಧದಲ್ಲಿ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ನ್ಯಾಯ ಮಂಡಲಿಯ ಮಧ್ಯಂತರ ತೀರ್ಪನ್ನು ಕೇಂದ್ರ ಸರ್ಕಾರ ಗೆಜೆಟ್ಟಿನಲ್ಲಿ ಪ್ರಕಟಿಸ ಬಾರದು ಎಂದು ಹೇಳಿ ಹೋರಾಟವನ್ನು ಮಾಡಿ ಕರ್ನಾಟಕ ಕೇಂದ್ರಕ್ಕೆ ಮನವಿಯನ್ನು ಕಳುಹಿಸಿದರೆ ಅದನ್ನು ತಿರಸ್ಕಾರ ಮಾಡಿದಂಥ ಸಂದರ್ಭದಲ್ಲಿ ಕರ್ನಾಟಕದ ನೀರಿನ ತಂಟೆಗೆ ಬೇರೆ ಯಾರೂ ಬರಬೇಡಿ; ನಮ್ಮ ಜವಾಬ್ದಾರಿಯನ್ನು ನಾವೇ ಮಾಡಿಕೊಳ್ಳುವುದಕ್ಕೆ ಸಮರ್ಥರು ಇದ್ದೇವೆ ಎನ್ನತಕ್ಕಂಥ ಒಂದು ಶಾಸನವನ್ನು ಈ ಶಾಸನಸಭೆಯಲ್ಲಿ ಮಾಡಿದ್ದೇವೆ. ಇದೂ ಸಹ ಅನ್-ಕಾನ್‌ಸ್ಟಿಟ್ಯೂಟಷನಲ್ ಆಯಿತು. ಇಲ್ಲಿ ನಾವು ಮಾಡಿದ ಶಾಸನ ಕರ್ನಾಟಕದ ಜನರಿಗೆ, ಕರ್ನಾಟಕದ ಮುಖ್ಯಮಂತ್ರಿಗೆ ಒಕ್ಕೂಟದ ಅರಿವೇ ಇಲ್ಲ, ಪ್ರಜ್ಞೆ ಇಲ್ಲ ಎನ್ನತಕ್ಕಂಥ ಮಾತನ್ನು ಸರ್ವೋಚ್ಚ ನ್ಯಾಯಾಲಯ ಹೇಳುತ್ತದೆ. ನೇರವಾಗಿ ರಾಜ್ಯಾಂಗವನ್ನೇ ಉಚ್ಚಾಟನೆ ಮಾಡತಕ್ಕಂಥ ರಾಜ್ಯಾಂಗವನ್ನೇ ತಿರಸ್ಕರಿಸತಕ್ಕಂಥ, ರಾಜ್ಯಾಂಗಕ್ಕೆ ವಿರುದ್ಧವಾಗಿ ಏನು ತಾವು ಮುಖ್ಯಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕರಿಸಿದರೋ ಅದನ್ನು ಬಹಿರಂಗವಾಗಿ ಬಹಿಷ್ಕಾರ ಮಾಡುತ್ತಾರೆ. ಇದರ ಬಗ್ಗೆ ನಮ್ಮ ಸರ್ಕಾರ ಸುಪ್ರೀಂ ಕೋರ್ಟಿಗೆ ಹೋಗುವುದಿಲ್ಲ, ಕೇಂದ್ರ ಸರ್ಕಾರ ಪ್ರಶ್ನೆ ಮಾಡುವುದಿಲ್ಲ, ಎಂಥ ದುರಂತ? ಅದರ ತದ್ವಿರುದ್ಧವಾಗಿ ಇವರು ಉಪವಾಸ ಕುಳಿತ ತಕ್ಷಣವೇ ಏನು ಒಂದು ನಿಮಿಷ ಕೂಡ ಹೆಚ್ಚು ಕಡಿಮೆ ಆಗಬಾರದೆಂದು ಅದೇ ದಿವಸ ಪ್ರಧಾನಮಂತ್ರಿಗಳು ಆದೇಶವನ್ನು ಕಳುಹಿಸಿತ್ತಾರೆ. ನಂತರ ವಾಟರ್ ರಿಸೋರ್‌ಸಸ್ ಕಮೀಷನ್ ಛೇರ್ಮೆನ್ ಮಿಸ್ಟರ್ ರೆಡ್ಡಿಯವರು ಒಂದು ನಿಮಿಷವನ್ನು ಕೂಡ ಲ್ಯಾಪ್ಸ್ ಮಾಡದೆ ಕರ್ನಾಟಕಕ್ಕೆ ಬರುತ್ತಾರೆ. ಅವರ ಜೊತೆಯಲ್ಲಿ ಏನು ಮಾತನಾಡಿದಿರಿ? ಕೇಂದ್ರ ಸರ್ಕಾರಕ್ಕೆ ಅವರು ಏನು ವರದಿಯನ್ನು ಕೊಟ್ಟರು? ಆ ವರದಿಯ ನಕಲನ್ನು ಏನಾದರೂ ನಿಮಗೆ ಅವರು ಕೊಟ್ಟಿದ್ದಾರೆಯೇ ಎಂಬುದು ನಮಗೆ ಗೊತ್ತಿಲ್ಲ. You cannot keep the House under dark. Place all the records. What transpired between the State of Karnataka and the Chairman of the Water Resources

Commission, what transpired between the State of Karnataka and Mr.V.C.Shukla, Water Resources Minister, and what transpired between Karnataka and Mr.P.V.Narasimha Rao, I don't know, ಆ ಹೇಳಿಕೆಯನ್ನು ಹೇಳಿಬಿಟ್ಟರೆ ಸಾಕು. ಅದನ್ನು ಬಿಟ್ಟು, ನನ್ನ ಜೀವ ಬೇಕಾದರೂ ಕೊಡುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಮುಖ್ಯಮಂತ್ರಿಗಳು ಜೀವ ಯಾರಿಗೆ ಬೇಕಾಗಿದೆ? ಅವರಿಗೆ ಬೇಕಾಗಿರುವುದು ಮುಖ್ಯಮಂತ್ರಿ ಕುರ್ಚಿ. ಜೀವಕ್ಕಾಗಿ ಅವರು ಹೊಡೆದಾಡುತ್ತಿಲ್ಲ. ಈ ದಿಶೆಯಲ್ಲಿ ಎಲ್ಲೆಲ್ಲಿ ನಾವು ವಿಫಲರಾಗಿದ್ದೇವೆ ಅಂದರೆ ಶ್ರೀಮಾನ್ ವೀರೇಂದ್ರ ಪಾಟೀಲರ ಕಾಲದಲ್ಲಿ ಬಲವಾದ ಒತ್ತಡವನ್ನು ನಾನು ತಂದೆ. ನ್ಯಾಯ ಮಂಡಲಿಯ ರಚನೆಯನ್ನು ವಿರೋಧ ಮಾಡೋಣ ಎಂದು ಹೇಳಿದೆ. ಇಲ್ಲಿ ಠರಾವನ್ನು ತರುವುದಕ್ಕೆ ಪ್ರಯತ್ನ ಮಾಡಿದೆವು. ಆಗ ವೀರೇಂದ್ರ ಪಾಟೀಲರು ನ್ಯಾಯಾಲಯಗಳ ಮೇಲೆ ನಿಮಗೆ ವಿಶ್ವಾಸ ಏತಕ್ಕೆ ಹೋಯಿತು, ಇನ್ನು ನಂಬಿಕೆಯನ್ನು ಇಡಿ, ನಮಗೆ ನ್ಯಾಯ ಸಿಗುತ್ತದೆ ಎನ್ನತಕ್ಕಂಥ ಮಾತನ್ನು ಅವರು ನಮಗೆ ಹೇಳಿ ನ್ಯಾಯ ಮಂಡಲಿಯ ರಚನೆಗೆ ಅಂಗೀಕಾರವನ್ನು ಕೊಟ್ಟರು. ಇದಾದ ಮೇಲೆ ಮಧ್ಯಂತರ ಆಜ್ಞೆ 25-6-91ಕ್ಕೆ ಬಂದಾಗ ಪುನಃ ಶಾಸನಸಭೆ ಸೇರಿತು. ಈ ಮಧ್ಯಂತರ ಆಜ್ಞೆಯನ್ನು ಏಕ ಪಕ್ಷೀಯವಾಗಿ ಒಟ್ಟಾರೆ ಈ ಸದನದ ಅಭಿಪ್ರಾಯದಂತೆ ತಿರಸ್ಕರಿಸಬೇಕು ಎನ್ನತಕ್ಕಂಥ ತೀರ್ಮಾನವನ್ನು ತೆಗೆದುಕೊಂಡೆವು. ಆ ತೀರ್ಮಾನಕ್ಕೆ ಏನು ಬೆಲೆ ಸಿಕ್ಕಿತು? ಆ ತೀರ್ಮಾನಕ್ಕೆ ಸಿಕ್ಕಿದ ಬೆಲೆ ಮಾನ್ಯ ಪುಟ್ಟಸ್ವಾಮಿ ಗೌಡರೇ, ತಾವು ಆಗ ಇರಿಗೇಷನ್ ಮಂತ್ರಿ ಆಗಿದ್ದಿರಿ. ಗೆಜೆಟ್‌ನಲ್ಲಿ ನೋಟಿಫೈ ಮಾಡಿದರು. ಗೆಜೆಟ್‌ನಲ್ಲಿ ನೋಟಿಫೈ ಮಾಡಿದ ಮೇಲೆ ನಾವು ಶಾಸನ ಮಾಡಿದೆವು ಇಲ್ಲಿ. ಈ ಶಾಸನವನ್ನು ಕೇಂದ್ರ ಸರ್ಕಾರ ಅಥವಾ ಪ್ರಧಾನ ಮಂತ್ರಿಗಳು ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಕ್ಕೆ ಕಳುಹಿಸಿಕೊಟ್ಟರು. ನಮ್ಮ ಪರವಾಗಿ ಎಷ್ಟು ಕೆಲಸ ಮಾಡಿದ್ದಾರೆ ನೋಡಿ. ಕೇಂದ್ರ ಸರ್ಕಾರ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಕ್ಕೆ ಕಳುಹಿಸಿಕೊಟ್ಟರು. ಅಭಿಪ್ರಾಯವನ್ನು ಅಭಿವ್ಯಕ್ತ ಮಾಡುತ್ತಾ ಸರ್ವೋಚ್ಚ ನ್ಯಾಯಾಲಯ ಒಕ್ಕೂದಲ್ಲಿ ನಿಮಗೆ ವಿಶ್ವಾಸ ಇಲ್ಲ; You should have remembered, ನಿಮ್ಮ ಈ ರಾಜ್ಯ ಈ ದೇಶದ ಹೊರಗೆ ಇಲ್ಲ. ಆ ಒಕ್ಕೂಟದ ವ್ಯವಸ್ಥೆಯಲ್ಲಿದೆ, ಅದರಲ್ಲಿ ನಿಮಗೇ ನಂಬಿಕೆ ಇಲ್ಲ ಅಂದರು. ಆದರೆ, ಇದಕ್ಕೆ ತದ್ವಿರುದ್ಧ ನೇರವಾಗಿ ರಾಜ್ಯಾಂಗಕ್ಕೆ ಹಲ್ಲೆ ಮಾಡಿದ ತಮಿಳುನಾಡಿನ ಮುಖ್ಯಮಂತ್ರಿಗಳಿಗೆ ಕೇಂದ್ರ ಸರ್ಕಾರದ ಎಲ್ಲರೂ ಬಂದು ಆಶೀರ್ವಾದ ಮಾಡಿದರು. ಇದು ನಮ್ಮ ದುರಂತ. ಆದಾದ ಮೇಲೆ ಗೆಜೆಟ್ ನೋಟಿಫಿಕೇಷನ್ ಆಯಿತು. ಇದನ್ನು ಪ್ರತಿಭಟಿಸಿ ಆಯಿತು. ಈ ನೋಟಿಫಿಕೇಷನ್ ಆದ ಮೇಲೆ ಮರು ಪರಿಶೀಲನಾ ಅರ್ಜಿ ಹೋಯಿತು. ಅದೂ ತಿರಸ್ಕೃತವಾಯಿತು. ನಾವು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಹಾಕಿದೆವು. ಈ ಮೇಲ್ಮನವಿ ಸಹ ವಜಾ ಆಯಿತು. ನ್ಯಾಯ ಮಂಡಳಿಯವರು ಒಂದು ಮೇಲ್ಮನವಿಯನ್ನು ವಜಾ ಮಾಡುತ್ತಾ ಬಹಳ ಮಾರ್ಮಿಕವಾದ ಒಂದು ಮಾತು ಹೇಳಿದರು. ಕರ್ನಾಟಕ ರಾಜ್ಯ ಸರ್ಕಾರ ಯಾವ ಮಾಹಿತಿಯನ್ನು ಈ ನ್ಯಾಯಾಧೀಕರಣಕ್ಕೆ ಒದಗಿಸಬೇಕಾಗಿತ್ತು. ಅದನ್ನು ಒದಗಿಸುವುದರಲ್ಲಿ ವಿಫಲ ಆಗಿದೆ ಎಂದು ಹೇಳಿದರು. ಇದಕ್ಕಿಂತ ಕೆನ್ನೆಗೆ ಹೊಡೆಯತಕ್ಕ ಕೆಲಸ ಮತ್ತೊಂದು ಇಲ್ಲ. ಆದರೂನಮ್ಮ ಸರ್ಕಾರಕ್ಕೆ ನಾಚಿಕೆ ಇಲ್ಲ. ಇದಕ್ಕಾಗಿ ಕನಿಷ್ಟ ಪಕ್ಷಯಾರನ್ನಾದರೂ ಕರೆಯಿರಿ. ತಜ್ಞರನ್ನು ಕೇಳಿ ಮಾತನಾಡಿ. ಏಕೆ ಮಾಹಿತಿಯನ್ನು ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ; ಯಾರೂ ಈ ಬಗ್ಗೆ ವಿವರಣೆ ಕೊಡುವುದಿಲ್ಲ, ಜವಾಬ್ದಾರಿ ಇಲ್ಲ. ಸರ್ವೋಚ್ಚ

ನ್ಯಾಯಾಲಯದಲ್ಲಿ ಸಾರ್ವಜನಿಕರು ಅರ್ಜಿ ಹಾಕಿದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿ ಮುಖ್ಯಮಂತ್ರಿಗಳು ಹೇಳಿಕೆ ಮಾಡಿದರೆ ನಾವು ಏಕೆ ಇಲ್ಲಿ ಕೆಲಸ ಮಾಡಬೇಕು? ಸುಮಾರು ಪ್ರತಿ ತಿಂಗಳು 150 ಕೋಟಿ ರೂಪಾಯಿಯನ್ನು ಈ ಆಡಳಿತಕ್ಕಾಗಿ ನಾವು ಖರ್ಚು ಮಾಡುತ್ತಿದ್ದೇವೆ. ನಾಚಿಕೆ ಬರಬೇಕು ನಮಗೆ. ಸರ್ಕಾರಕ್ಕೇ ಮಾಹಿತಿ ಇಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕರು ಹಾಕಿರತಕ್ಕ ಅರ್ಜಿಯಬಗ್ಗೆ ಕರ್ನಾಟಕ ಸರ್ಕಾರ ರೆಪ್ರೆಸೆಂಟ್ ಮಾಡಲಿಲ್ಲ. ಈ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದು ಹೇಳುತ್ತಾ ಇರತಕ್ಕ ಒಂದು ನಿರ್ಲಕ್ಷ್ಯ ಸರ್ಕಾರವನ್ನು ಜನ ಸಹಿಸಿಕೊಂಡು ಇರಬೇಕೇ? ಇದು ಆದ ಮೇಲೆ. . . . . . . .

ಶ್ರೀ ವೈ.ಕೆ.ರಾಮಯ್ಯ : ಅವರಿಗೆ ನೋಟೀಸ್ ಬಂದಿರಲಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ : ಉಸ್ತುವಾರಿ ಸಮಿತಿ ರಚನೆ. The Central Government should not take Karnataka for granted . . . . . . .

ಶ್ರೀ ವೈ.ಕೆ. ರಾಮಯ್ಯ : ಅಧ್ಯಕ್ಷರೇ, ಕಾನೂನು ಸಚಿವರು ಅಪ್ಪಣೆಕೊಟ್ಟಿದ್ದಾರೆ ನೋಟೀಸ್ ಬಂದಿಲ್ಲ ಎಂದು.

ಶ್ರೀ ಡಿ.ಬಿ. ಚಂದ್ರೇಗೌಡ : ರಾಜ್ಯದ ಹಿತ ಕಾಯುವಲ್ಲಿ ಎದೆ ತಟ್ಟಿಕೊಂಡು ಜೀವ ಕೊಡುತ್ತೇವೆ ಎಂದು ಹೇಳುವವರಿಗೆ ನೋಟೀಸ್ ಬೇಕು. ರಾಜ್ಯದ ಜನರ ಹಿತ ರಕ್ಷಣೆ ಮಾಡುವುದಕ್ಕೆ ನೋಟೀಸ್ ಬೇಕು. ಆದ್ದರಿಂದ ಈ ಶಾಸನಸಭೆಯನ್ನು ನೋಟೀಸ್‌ಕೊಟ್ಟು ಕರೆಸಿದ್ದೇವೆ. Let me make the position very clear. ಅನುಷ್ಠಾನದ ಸಮಿತಿಯ ರಚನೆ; ಉಸ್ತುವಾರಿಯ ಸಮಿತಿ ರಚನೆ. ನಾನು ಅದಕ್ಕಾಗಿ ಆರ್ಡರನ್ನು ಓದುತ್ತೇನೆ. ಮರು ಪರಿಶೀಲನಾ ಅರ್ಜಿಯ ಕೊನೆಯ ವಾಕ್ಯ ಓದುತ್ತೇನೆ. "It will be opened to such party to approach the tribunal for appropriate orders" ತೊಂದರೆ ಆಗಿದ್ದರೆ; ಅದು ಬಿಟ್ಟು ಉಸ್ತುವಾರಿ ಸಮಿತಿ ರಚನೆ ಮಾಡುತ್ತೇವೆಂದು ಕೇಂದ್ರ ಸರ್ಕಾರ ಹೇಳಿದ್ದರೆ 'You have no right or the authority to do that' ಎಂದು ಅವರು ಹೇಳಬೇಕು. ಆದರೆ ಹೇಳುವುದಿಲ್ಲ. ಇದಾದ ಮೇಲೆ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಅಂದರೆ ಮನವಿಯನ್ನು ಪ್ರಧಾನ ಮಂತ್ರಿಗೆ ಸಲ್ಲಿಸಿದರು. ಅದಕ್ಕೆ ಐದು ಜನ ಮಾಜಿ ಮುಖ್ಯಮಂತ್ರಿಗಳು ಸಹಿ ಹಾಕಿದರು. ಅತ್ಯಂತ ಶ್ರೇಷ್ಠ ರಾಜಕೀಯ ಮುತ್ಸದ್ದಿ ಹಿರಿಯ ಮಾನ್ಯ ನಿಜಲಿಂಗಪ್ಪನವರು, ಮಾನ್ಯ ರಾಮಕೃಷ್ಣ ಹೆಗಡೆ ಅವರು, ಮಾನ್ಯ ಬಿ.ಡಿ.ಜತ್ತಿಯವರು, ಮಾನ್ಯ ಎಸ್.ಆರ್.ಬೊಮ್ಮಾಯಿಯವರು, ಶ್ರೀಮಾನ್ ದಿವಂಗತ ಆರ್.ಗುಂಡೂರಾಯರು. ಇವರೆಲ್ಲರೂ ಸೇರಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಯಾವ ಮರ್ಯಾದೆಯೂ ನಮಗೆ ಸಿಗಲಿಲ್ಲ. ಕನಿಷ್ಟ ಪಕ್ಷ ಅಲ್ಲಿ ಲೆಕ್ಕದಲ್ಲಿ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಿ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆಗಲೂ ಇಂಟರ್‌ಫಿಯರ್ ಆಗಲಿಲ್ಲ. ಆದರೆ ಜಯಲಲಿತಾ ಉಪವಾಸ ಕುಳಿತರೆ ಒಂದು ಸೆಕೆಂಡ್ ಸಹ ವೇಸ್ಟ್ ಮಾಡುವುದಿಲ್ಲ. ಇವರೆಲ್ಲಾ ಯಾರು? ಈ ದೇಶದ ಕಾಂಗ್ರೆಸ್ ಪಕ್ಷದ ಹಿರಿಯ ಅಧ್ಯಕ್ಷರಾಗಿ ರಾಷ್ಟ್ರವನ್ನು ಮುನ್ನೆಡಿಸಿದಂಥ ಶ್ರೀಮಾನ್ ಎಸ್.ನಿಜಲಿಂಗಪ್ಪನವರ ಮಾತಿಗೆ ಮರ್ಯಾದೆ ಇಲ್ಲ; ಕುಮಾರಿ ಜಯಲಲಿತಾರವರು ಉಪವಾಸ ಸತ್ಯಾಗ್ರಹ ಕುಳಿತ ಕೂಡಲೇ ಅವರಿಗೆ ಮರ್ಯಾದೆ. This is how the Government of Karnataka is being treated by the Central Government.

ಶ್ರೀ ಸಿ. ಬೈರೇಗೌಡ : ಅಷ್ಟೇ ಅಲ್ಲ, ಈ ದೇಶದ ಮಾಜಿ ರಾಷ್ಟ್ರಪತಿಗಳಾಗಿರತಕ್ಕಂಥವರು ಕುಮಾರಿ ಜಯಲಲಿತಾರವರು ಉಪವಾಸ ಸತ್ಯಾಗ್ರಹ ಕುಳಿತರೆ ಅವರ ಹಾಸಿಗೆ ಪಕ್ಕದಲ್ಲಿ ಇವರು ಘಂಟೆಗಟ್ಟಲೆ ಕುಳಿತಿರುತ್ತಾರೆ. ಏಕೆಂದರೆ, ಅವರು ನಿವೃತ್ತರಾಗಿದ್ದಾರೆ, ಅವರಿಗೆ ಬೇರೇನೂ ಕೆಲಸವಿಲ್ಲ. ಅವರು ಹಿಂದೆ ರಾಷ್ಟ್ರಪತಿ ಸ್ಥಾನದಲ್ಲಿದ್ದು ಅವರೇ ಇದಕ್ಕೆಲ್ಲಾ ಮೂಲ ಕಾರಣ. ರಾಷ್ಟ್ರಪತಿ ಭವನದಲ್ಲಿ ನಡೆದಂಥ ಕಿತಾಪತಿಯಿಂದಾಗಿ ಇವೊತ್ತಿನ ದಿವಸ ನಮಗೆ ಈ ತೊಂದರೆಯಾಗಿದೆ. ಕಾಣದ ಕೈ ಅವರದೇ ಆಗಿದೆ. ತಮ್ಮದು ಕಾಣದ ಕೈ ಎಂದು ಅವರು ತಿಳಿದುಕೊಂಡಿದ್ದಾರೆ. ಆದರೆ ಅದು ದೇಶಕ್ಕೇ ಗೊತ್ತಿದೆ. ಇದೆಲ್ಲದರ ಹಿಂದೆ ಅವರದೇ ಕಾಣದ ಕೈ ಇದೆಯೆಂದು.

Dr Y. Nagappa : - You people have created the Tribunal

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ನಾಗಪ್ಪನವರೇ ಕುಳಿತುಕೊಳ್ಳಿ, ನಿಮ್ಮ ಸರ್ಕಾರ ಇತ್ತಲ್ಲಾ, ಆಗ ಏನು ಮಾಡುತ್ತಿದ್ದಿರಿ? ಕುರ್ಚಿಗೆ ಕಿತ್ತಾಡುತ್ತಿದ್ದೀರಾ? ನಿಮಗೆ ನಾಚಿಕೆಯಾಗಬೇಕು.

Sri D.B. Chandregowda : Please direct the Member not to interfere.

ಶ್ರೀ ಸಿ. ಬೈರೇಗೌಡ : ಇದು ಅರ್ಥವಿಲ್ಲದ್ದು. ಆವೊತ್ತು ಡಿ.ಎಂ.ಕೆ.ಪಕ್ಷದ ಯಾವ ಸದಸ್ಯರೂ ಕೂಡ ಲೋಕಸಭೆಯಲ್ಲಿರಲಿಲ್ಲ. ಅವರ ಸಹಾಯವಾಗಲಿ, ಸಹಕಾರವಾಗಲಿ ಅಲ್ಲಿದ್ದಂಥ ಪ್ರಧಾನಮಂತ್ರಿಗಳಿಗೆ ಬೇಕಾಗಿರಲಿಲ್ಲ. ಎಷ್ಟು ಜನ ಸದಸ್ಯರಿದ್ದರು? ಅವರ ಸಹಕಾರವಾದರೂ ಏಕೆ ಬೇಕಾಗಿತ್ತು? ಸಹಕಾರ ಬೇಕಾಗಿರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮೀನಿಗೆ ಈಜು ಕಲಿಸುವುದಕ್ಕೆ ಹೋಗಬೇಡಿ. ದಯವಿಟ್ಟು ವಿಷಯಗಳನ್ನು ಗಂಭೀರವಾಗಿ ಗಮನಿಸಿ. ಇದು ಮಲೇರಿಯಾ ಕಾಯಿಲೆಗೆ ಗುಳಿಗೆ ಕೊಟ್ಟಂತೆ ಅಲ್ಲ. ಸರ್ವೋಚ್ಚ ನ್ಯಾಯಾಲಯದ ತೀರ್ಮಾನ ಏನಿತ್ತು, ಅದರ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿಗಳು ಆಡಿದ ಮಾತಿಗೆ ಯಾವುದೇ ಬೆಲೆ ಬರಲಿಲ್ಲ. ದಿನಾಂಕ : 26-7-92 ರಂದು ಕಾವೇರಿ ಜಲಾನಯನ ಪ್ರದೇಶದ ರೈತರುಗಳೆಲ್ಲಾ ಸೇರಿಕೊಂಡು ಒಂದು ಸಭೆ ಮಾಡಿದರು. ಆ ಸಭೆಗೆ ನೀರಾವರಿ ಸಚಿವರಾಗಿರುವ ಸನ್ಮಾನ್ಯ ಕೃಷ್ಣರವರನ್ನು ಕರೆದು ಒಂದು ನಿರ್ಣಯ ಮಾಡಿದರು. ಆ ದಿವಸ ಮಾಡಿದಂಥ ನಿರ್ಣಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ನಾನು ವಿಸ್ತಾರವಾಗಿ ಹೇಳದೆ ಸಂಕ್ಷಿಪ್ತವಾಗಿ ಹೇಳುತ್ತೇನೆ; 'ಕಾವೇರಿ ನ್ಯಾಯ ಮಂಡಳಿಯು ದಿನಾಂಕ : 25-6-91 ರಂದು ಹೊರಡಿಸಿದ ಮಧ್ಯಂತರ ಆಜ್ಞೆ ಮತ್ತು ದಿನಾಂಕ : 3-4-92 ರಂದು ಸಲ್ಲಿಸಿದ ಮರುಪರಿಶೀಲನಾ ಅರ್ಜಿಯ ಮೇಲೆ ಬಂದ ಆಜ್ಞೆ ಇವೆರಡೂ ಕರ್ನಾಟಕದ ರೈತರ ಪಾಲಿಗೆ ಮರಣ ಶಾಸನಗಳಾಗಿವೆ' ಎಂದು ಸಭೆ ಕರೆದಿದೆ. ಇದಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು ಕೂಡ ಪಾಲುದಾರರು. ಈ ಮರಣ ಶಾಸನವನ್ನು ದುರ್ದೈವದಿಂದ ಜಾರಿಗೆ ಕೊಡತಕ್ಕಂಥ ಜಾಗದಲ್ಲಿ ನೀವು ಇದ್ದೀರಲ್ಲಾ; ಈ ಮರಣ ಶಾಸನವನ್ನು ಜಾರಿಗೆ ಕೊಡುವುದಕ್ಕೆ ಒಂದು ಸರ್ಕಾರ ಬೇಕೇ, ಇದು ನನ್ನ ಪ್ರಶ್ನೆ. ನಿನ್ನೆ ನಾವು ಕಾವೇರಿ ಜಲಾನಯನ ಪ್ರಶ್ನೆ ವಿಚಾರವಾಗಿ ಚರ್ಚೆ ಮಾಡತಕ್ಕಂಥ ಸಮಯದಲ್ಲಿ ಕೇಂದ್ರ ಸರ್ಕಾರ ಹೊರಡಿಸಿರತಕ್ಕಂಥ ಆದೇಶ, ಮತ್ತು ಅದರ ಪರವಾಗಿ ನಿನ್ನೆ ನಡೆಯಬೇಕಾಗಿದ್ದ ಈ ರಾಜ್ಯದ ಮೂವರು ಮುಖ್ಯ ಕಾರ್ಯದರ್ಶಿಗಳ ಸಭೆ ಮುಂದಕ್ಕೆ ಹೋಗಿದೆ. ಯಾವ ಕಾರಣಕ್ಕಾಗಿ ಸಭೆ ಜರುಗಲಿಲ್ಲವೋ ಗೊತ್ತಿಲ್ಲ. ಏತಕ್ಕೆ ಆ ಸಭೇ? ನ್ಯಾಯಾಧಿಕರಣ ಕೊಟ್ಟಿರತಕ್ಕಂಥ ತೀರ್ಪನ್ನು ಜಾರಿಗೆ ಕೊಡುವುದಕ್ಕೆ, ಸಲಹೆ

ಕೊಡುವುದಕ್ಕೆ ಈ ಮುಖ್ಯ ಕಾರ್ಯದರ್ಶಿಗಳ ಸಭೆ, ಈ ಸಭೆಯನ್ನು ಕರೆಯುವುದಕ್ಕೆ ಮುನ್ನ ತಮಿಳುನಾಡಿನ ಮುಖ್ಯಮಂತ್ರಿಗಳಾದ ಕುಮಾರಿ ಜಯಲಲಿತಾರವರು ಉಪವಾಸ ಸತ್ಯಾಗ್ರಹ ಕುಳಿತಾಗ ಕೇಂದ್ರ ಸರ್ಕಾರದ ಕ್ಯಾಬಿನೆಟ್ ಕಾರ್ಯದರ್ಶಿಯವರಿಗೆ 'ಜಯಲಲಿತಾರವರು ಉಪವಾಸ ಕುಳಿತದ್ದು ಸರಿ,' ಎನ್ನುವ ಒಂದು ಫ್ಯಾಕ್ಸ್ ಮೆಸೇಜ್ ಕಳುಹಿಸುತ್ತಾರೆ. ಅದು ಸರಿಯೆಂದು ಹೇಳಿ ಯಾವ ತಮಿಳುನಾಡಿನ ಮುಖ್ಯಕಾರ್ಯದರ್ಶಿಯವರು ಹೇಳಿದರೋ ಆ ಕ್ಷಣವೇ ಒಂದು ನಿಮಿಷ ಕೂಡ ತಡಮಾಡದೆ without wasting a minute, Water Resources Commission Chairman ರವರಾದ ಶ್ರೀಮಾನ್ ರೆಡ್ಡಿಯವರು ತಮಿಳುನಾಡಿಗೆ ಮತ್ತು ಕರ್ನಾಟಕಕ್ಕೆ ರಾಯಭಾರಿಯಾಗಿ ಬರುತ್ತಾರೆ. ಅವರು ಈ ದೇಶದ ಒಟ್ಟಾರೆ ಜಲನೀತಿಯನ್ನು ನಿರೂಪಿಸಿ ಅಂತ ಹೇಳಿದರೆ, ಅದರ ರಾಯಭಾರಿಯಾಗಿ ಬರುವುದಿಲ್ಲ; ಅವರು ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀಮತಿ ಜಯಲಲಿತರವರ ರಾಯಭಾರಿಯಾಗಿ ಬರುತ್ತಾರೆ. ತಮಿಳುನಾಡಿನ ಮುಖ್ಯಕಾರ್ಯದರ್ಶಿಯವರು ಕ್ಯಾಬಿನೆಟ್ ಕಾರ್ಯದರ್ಶಿಯವರೊಂದಿಗೆ ಮಾತನಾಡಿ ಆ ರೀತಿಯ ವ್ಯವಸ್ಥೆ ಮಾಡುತ್ತಾರೆ. ಅವರಿಗೆ ಆ ರೀತಿಯ ವ್ಯವಸ್ಥೆ ಇದೆ; ಆದರೆ ನಮ್ಮ ಸರ್ಕಾರದವರು ಯಾವುದಾದರೊಂದು ಇಂಥ ಕೆಲಸವನ್ನು ಮಾಡಿದ್ದಾರೆಯೇ? ಖಂಡಿತವಾಗಿಯೂ ಇಲ್ಲ. ಬರೇ ಬ್ರಾವಡೋ. ನಾನು ಇದರ ಬಗ್ಗೆ ದೀರ್ಘವಾಗಿ ಮಾತನಾಡಲು ಹೋಗುವುದಿಲ್ಲ, ಕೇವಲ ಒಂದೇ ಒಂದು ಅಂಶವಾದ ಲೆಕ್ಕದಲ್ಲಿ ತಪ್ಪಿದೆ ಎನ್ನತಕ್ಕದನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸಿ ಕೆಲವು ಮಾಹಿತಿಗಳನ್ನು ಸರ್ಕಾರಕ್ಕೆ ಒದಗಿಸಿದ್ದೆವು. ನಾನು ನ್ಯಾಯಾಧಿಕರಣವು ಏನು ತಪ್ಪು ಮಾಡಿದೆ ಎಂಬುದನ್ನು ಸೂಕ್ಷ್ಮವಾಗಿ ಹೇಳುತ್ತೇನೆ. ಅದನ್ನು ಬಿಟ್ಟು ನಾನು ಬೇರೆಯದಕ್ಕೆ ಹೋಗುವುದಿಲ್ಲ. ನ್ಯಾಯಾಧಿಕರಣವು ತನ್ನ ಮಧ್ಯಂತರ ಆಜ್ಞೆಯಲ್ಲಿ 'ಬಿಡುಗೊಂಡಲಿನಿಂದ'ಆಚೆ 205 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆಬಿಡಬೇಕೆಂದು ಆದೇಶವನ್ನು ಕೊಟ್ಟು ಟೈಮಟೇಬಲ್‌ನ್ನು ಹಾಕಿದಂಥ ಕಾಲದಲ್ಲಿ, ನಾವು ಅವರಿಗೆ 1981 ರಿಂದ 91ರ ವರೆಗೆ ನೀವು ಲೆಕ್ಕ ಮಾಡಿದ್ದೀರಿ. ಅದರಲ್ಲಿ ಬಹಳ ದೋಷವಿದೆ; ಅದೇನೆಂದರೆ: ಮೆಟ್ಟೂರು ಜಲಾಶಯವು ಕೆಳಭಾಗದಲ್ಲಿದೆ; ಆದರೆ ಬಿಳಿಗೊಂಡಲು ಮಾಪನಕೇಂದ್ರವು ಮೇಲುಗಡೆ ಇದೆ; ನೀರು ಮೇಲುಭಾಗದಲ್ಲಿ ಜಾಸ್ತಿ ಹರಿಯುತ್ತದೋ ಅಥವಾ ಕೆಳಭಾಗದಲ್ಲಿ ಜಾಸ್ತಿ ಹರಿಯುತ್ತದೋ ಎನ್ನುವ ದ್ವಂದ್ವ ಇದೆ; ಇದನ್ನು ನೀವು ಸರಿಪಡಿಸಿ ಎಂದು ಹೇಳಿದ್ದೆವು. ಏನೋ ಅದಕ್ಕೆ ಒಂದು Prorata data ಹಾಕಿಕೊಟ್ಟರು. ನಾನು ಇದರ ಬಗ್ಗೆ ವಿವರಣೆಗೆ ಹೋಗುವುದಿಲ್ಲ. ಇದರ ಬಗ್ಗೆ ಬಹಳ ಜನರು ಮಾತನಾಡಿದ್ದಾರೆ. I do not want to take the time of the House. ತಮಿಳುನಾಡು ಸರ್ಕಾರ ಕೊಟ್ಟ ಮಾಹಿತಿಯಲ್ಲಿ ನ್ಯಾಯಾಧಿಕರಣ ತೀರ್ಮಾನ ಮಾಡುವಾಗ, 205 ಟಿ.ಎಂ.ಸಿ. ನೀರನ್ನು ಮೆಟ್ಟೂರಿಗೆ ಹರಿಯ ಬಿಡಬೇಕೆಂದು ಆದೇಶ ಕೊಡುವಾಗ ಇದ್ದ ಆಧಾರವೇನು? ಆ ರೀತಿ ಕೇಳಿದ್ದಕ್ಕೆ ಅವರು ಏನು ಉತ್ತರ ಕೊಡುತ್ತಾರೆಂದರೆ ಬಿಳಿಗೊಂಡಲುನಲ್ಲಿ 227 ಟಿ.ಎಂ.ಸಿ. 1981 ರಿಂದ 1990ರ ವರೆವಿಗೆ ಹರಿದಿದೆ; ಮೆಟ್ಟೂರು ಜಲಾಶಯದಲ್ಲಿ ಸೇರಿರುವ ನೀರಿನ ಪ್ರಮಾಣ 205 ಟಿ.ಎಂ.ಸಿ. ಬಿಳಿಗೊಂಡಲಿನಿಂದ ಮೆಟ್ಟೂರಿನ ನಡುವೆಇರುವ 60 ಕಿ.ಮೀ. ದೂರವಿದೆ. ಮಧ್ಯೆ ಸೇರತಕ್ಕ ನೀರು ಮೆಟ್ಟೂರಿಗೆ ಹೋಗುವಷ್ಟರಲ್ಲಿ ಇವಾಪರೇಟ್ ಆಗುತ್ತದೆ ಎಂದು. ಇದೇನು ದುರಂತ ? ಈ ಲೆಕ್ಕದಲ್ಲಿರುವ ದೋಷವನ್ನು ಸರಿಮಾಡುವುದು ಬೇಡವೇ? It is just a mathmatical calculation. Atleast 205 TMC Ft is the Tribunal Order.

(ಶ್ರೀ ಜಿ.ಎಸ್.ಶಿವನಂಜಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

205 ಟಿ.ಎಂ.ಸಿ. ಎಂದು ಇದ್ದರೆ ಅವರದ್ದೇ ಲೆಕ್ಕದ ಪ್ರಕಾರ ಕೆಳಗಡೆ ಕನಿಷ್ಟ 25 ಟಿ.ಎಂ.ಸಿ. ಸೇರಬೇಕು. ಅಂದರೆ between Biligondlu and Mettur 25 ಟಿ.ಎಂ.ಸಿ.ಯನ್ನು ಅವರೇ ಹೊಂದಿದ್ದಾರೆ. It should be atleast 230 TMC ft.Instead, they say 227ಮತ್ತು 25 ಎರಡನ್ನೂ ಕೂಡಿದರೆ 252 ಟಿ.ಎಂ.ಸಿ. ಆಗಬೇಕು. ಆದರೆ ಆದಕ್ಕೆ ತದ್ವಿರುದ್ಧವಾಗಿ ಮೆಟ್ಟೂರಿನಲ್ಲಿ 205 ಟಿ.ಎಂ.ಸಿ. ನೀರು ಹೋಗಿದೆ ಎನ್ನತಕ್ಕಂಥ ವಾದವನ್ನು ಅವರು ಇಡುತ್ತಾರೆ. ಇದು ಒಂದು ಅಂಶ. ನಾವು ಮರುಪರಿಶೀಲನೆಗೆ ಅರ್ಜಿಯನ್ನು ಹಾಕಿದಾಗ, ಅವರ ಮಧ್ಯಂತರ ಆಜ್ಞೆಯಲ್ಲಿ ನಮ್ಮ ಭೂಪ್ರದೇಶದ ಅಭಿವೃದ್ಧಿಯನ್ನು 11 1/2 ಲಕ್ಷ ಎಕರೆಗೆ ಸೀಮಿತಗೊಳಿಸಬೇಕೆಂದು ಆಜ್ಞೆ ಕೊಡುವಾಗ, ನಾವು ಅಷ್ಟರಮಟ್ಟಿಗೆ ಭೂಅಭಿವೃದ್ಧಿಯನ್ನು ಮಾಡಿಕೊಳ್ಳಬಹುದೆಂದು ಆಜ್ಞೆ ಇತ್ತು. ಅದನ್ನು ಲೆಕ್ಕ ಮಾಡುವಾಗ, ಅಲ್ಲಿ 1980 ರಿಂದ 1990 ಅಂದರೆ 10 ವರ್ಷಗಳದ್ದನ್ನು ಪರಿಗಣನೆ ಮಾಡಿದ್ದಾರೆ. 1964ರಿಂದ 1974ರಲ್ಲಿನ ಲೆಕ್ಕವನ್ನು ಹಿಡಿಯಿರಿ. ಏತಕ್ಕೆಂದರೆ, 1974ರಿಂದ ಮುಂದೆ ಕರ್ನಾಟಕದಲ್ಲಿ ಏನು ಅಭಿವೃದ್ಧಿ ಮಾಡಿದ್ದಾರೋ ಅದನ್ನು ನಾವು ಗಣನೆಗೆ ತೆಗೆದುಕೊಳ್ಳಲು ಆಗುವುದಿಲ್ಲವೆಂದು ಹೇಳಿದ್ದಾರೆ, ಆದರಿಂದಾಗಿ, 11 1/2 ಲಕ್ಷ ಎಕರೆ ನಮಗೆ ಮಧ್ಯಂತರ ಆಜ್ಞೆಯಲ್ಲಿ ಏನು ಸಿಕ್ಕಿತ್ತೋ ಆ ಹಕ್ಕೂ ನಮಗೆ ಉಳಿಯಲಿಲ್ಲ. ಇವೆರಡು ಮುಖ್ಯವಾದಂಥ ಅಂಶಗಳು. ಇವುಗಳನ್ನಾದರೂ ನ್ಯಾಯಾಧೀಕರಣದ ಮುಂದೆ ಅವರ ಒಂದು ಗಮನಕ್ಕಾದರೂ ತರಬೇಕಾಗಿತ್ತು. ಸರಕಾರ ನಡೆಸುವುದೆಂದರೆ ನನಗೆ 1970ರ ದಶಕದ ನೆನಪು ಬರುತ್ತದೆ. 1972ರಲ್ಲಿ ಶ್ರೀಮಾನ್ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದರು. ಆಗ ನಾನು ಕಾಂಗ್ರೆಸ್‌ನ ಸಂಸದೀಯ ಸದಸ್ಯನಾಗಿದ್ದೆ. ತಮಿಳುನಾಡು ಮತ್ತು ಕರ್ನಾಟಕಕ್ಕೆ ಕಳೆದ 50 ವರುಷಗಳಿಂದ ಇದ್ದಂತಹ ಕರಾರು ಮುಗಿಯತಕ್ಕಂಥ ಸಮಯ ಬಂದಿದೆ ಎಂದು ಗೊತ್ತಾದ ತಕ್ಷಣ 72ರಲ್ಲಿ ಕೆ ಆರ್‌ಎಸ್‌ನ ಎಲ್ಲಾ ಬಾಗಿಲನ್ನು ಹಾಕಿಸಿದರು and I hope both of you were Ministers then. Mr.Ghorpade cannot forget that incident.

ಕೆಆರ್‌ಎಸ್‌ನಲ್ಲಿ ಉಸ್ತುವಾರಿ ನೋಡುವುದಕ್ಕೆ ಇದ್ದಂತಹ ತಮಿಳುನಾಡಿನ ಇಂಜಿನಿಯರ್ ಅನ್ನು you have no place. Please get out ಎಂದು ಹೇಳಿದರು. That is leadership. ಇದು ರಾಜಕೀಯ ಇಚ್ಛಾ ಶಕ್ತಿ ಆದರ ಪ್ರದರ್ಶನ. ನಾವು ಇಲ್ಲಿ ಹೇಡಿಗಳ ಮುಂದೆ ನಮ್ಮ ವಾದ ಮಾಡುತ್ತಿದ್ದೇನೆ. ಎಷ್ಟು ದೂರಕ್ಕೆ ಹೋಗಬೇಕು? ನ್ಯಾಯಾಧಿಕರಣ ಆಗಿದೆ, ಆದ್ದರಿಂದ ಏನು ಮಾಡುವುದು? ಮತ್ತೆ ದೇವರಾಜ ಅರಸರನ್ನೇ ಕೋಟ್ ಮಾಡುತ್ತೇನೆ. 1973 ರಲ್ಲಿ ಬಚಾವತ್ ನ್ಯಾಯಾಧಿಕರಣದ ಮುಂದೆ ಕೃಷ್ಣಾ ನದಿ ನೀರಿನ ವಿವಾದವಿತ್ತು. ಆ ಸಮಯದಲ್ಲಿ ನಮಗೆ ನ್ಯಾಯ ಸಿಗುವುದಿಲ್ಲವೆನ್ನುವುದು ಸ್ಪಷ್ಟವಾಗಿ ದೇವರಾಜ ಅರಸರಿಗೆ ಗೊತ್ತಾದ ತಕ್ಷಣವೇ ನಾನು ಈ ನ್ಯಾಯಾಲಯದ ಮೇಲೆ ವಿಶ್ವಾಸವಿಡುವುದಿಲ್ಲ. ಜನರ ನ್ಯಾಯಾಲಯಕ್ಕೆ ಹೋಗುತ್ತೇನೆಂದರು. Then, Mr.Byra Reddy was the Advocate General of the State. He called him back. ಭೈರಾ ರೈಡ್ಡಿಯವರೇ, ಹೊರಗೆ ಬನ್ನಿ ಎಂದು ಹೇಳಿದರುತ ಇದಕ್ಕೆ ಗಂಡಸುತನ ಬೇಕು. ರಾಜಕೀಯ ಇಚ್ಛಾ ಶಕ್ತಿ ಬೇಕು. ಆ ಇಚ್ಛಾ ಶಕ್ತಿ ನಿಮಗಿಲ್ಲ. He succeeded. ಭೈರಾ ರೆಡ್ಡಿಯವರು

ಬಚಾವತ್ ಅವಾರ್ಡನಲ್ಲಿ ಸರಕಾರದ ಪ್ರತಿನಿಧಿಯಾಗಿ ಹೊರ ಬಂದ ಮೇಲೆ ಆಗ ಕನ್‌ಸಿಲಿಯೇಟರಿ ಪ್ರಾರಂಭವಾಯಿತು. ಕರೆದು ಕೂತು ಮಾತನಾಡಿದರು. ನಿಮಗೆ ನ್ಯಾಯಾಧೀಕರಣವನ್ನು ಬಹಿಷ್ಕಾರ ಮಾಡುವುದಕ್ಕೆ ಜಯಲಲಿತಾ ಅವರು ಉಪವಾಸವನ್ನು ಬ್ರಹ್ಮಾಸ್ತ್ರವನ್ನಾಗಿ ಕೊಟ್ಟರೆ ಈ ಶಾಸನ ಸಭೆ ಒಟ್ಟಾರೆ ಅಭಿಪ್ರಾಯದ ಬ್ರಹ್ಮಾಸ್ತ್ರವನ್ನು ನಿಮ್ಮ ಕೈಗೆ ಕೊಟ್ಟಿದೆ. ಆದರೆ ಬಿಡಿಯುವುದಕ್ಕೆ ನಿಮಗೆ ಶಕ್ತಿ ಬೇಕಲ್ಲಾ. ಉತ್ತರನ ಕೈಗೆ ಬ್ರಹ್ಮಾಸ್ತ್ರ ಕೊಟ್ಟಿದ್ದೇವೆ. ಆದರೆ ಅಲ್ಲಿ ಆಕೆಯೊಬ್ಬಳೇ ತೀರ್ಮಾನ ತೆಗೆದುಕೊಳ್ಳುತ್ತಾಳೆ. You cannot implement the entire resolution of this House. What for you are ruling? ಏನು ಮಾಡಿದ್ದು ನೀವು ಇಲ್ಲಿ ಉದ್ದಗಲಕ್ಕೆ? : ಕಾವೇರಿಗಾಗಿ, ಕೃಷ್ಣಾಗಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಅದನ್ನು ನೀರಾವರಿ ಇಲಾಖೆಯ ಬೇಡಿಕೆ ಬಂದಾಗ ಚರ್ಚೆ ಮಾಡೋಣ. ನಿಮ್ಮ ಇಚ್ಛಾ ಶಕ್ತಿ ಎಷ್ಟು ಇದೆ ಎಂದು ಪ್ರದರ್ಶನ ಮಾಡಿದ್ದೀರಿ. ನಿಮಗೆ ರಾಜಕೀಯ ಇಚ್ಛಾ ಶಕ್ತಿ ಎಷ್ಟರಮಟ್ಟಿಗೆ ಇದೆ ಎಂದು ನಾವು ಬಲ್ಲೆವು. ನಿಮ್ಮ ಕೈಯ್ಯಲ್ಲಾಗುವುದಿಲ್ಲ ನಮಗೆ ಗೊತ್ತು. ಇನ್ನೂ ಸರಕಾರ ಇದೆ ಅಂತ ನಾವು ಭಾವನೆ ಮಾಡಿದ್ದೇವೆ. ಅದಕ್ಕೇ ಹೇಳಿದೆ ಹನುಮಂತರಾಯನೇ ಹಗ್ಗ ತಿನ್ನುತ್ತಾನೆ. ನಾವು ಎಂಥಹ ದುರ್ದೈವಿಗಳು. ಈ ಪೂಜಾರಿಗಳಾದ ನಾವು ಶಾವಿಗೆಗೆ ಬೇಡುತ್ತಿದ್ದೇವೆ. ಆ ಕಾರಣ ಇದಕ್ಕೆ ಹೆಚ್ಚು ಲಂಭಿಸದೆ ಈ ರಾಜ್ಯ ಸರ್ಕಾರ ಈ ಎಲ್ಲಾ ಪ್ರಕ್ರಿಯೆಗಳಿಗೆ ನಾನು ಹೇಳಿದಂತಹ 10-12 ಅಂಶಗಳಲ್ಲಿ ಒಂದರಲ್ಲಾದರೂ ಈ ರಾಜ್ಯ ಸರಕಾರಕ್ಕೆ ಫಲ ಸಿಕ್ಕಿಲ್ಲ. ಆದರೆ ತಮಿಳುನಾಡು ಸರಕಾರದವರು ಪ್ರತಿ ಹಂತದಲ್ಲೂ ಯಶಸ್ಸಿನ ಮೇಲೆ ಯಶಸ್ಸನ್ನು ಸ್ಥಾಪನೆ ಮಾಡುತ್ತಾ ಹೋಗಿದ್ದಾರೆ. ಮುಂದೆ ಸಲಹಾ ಸಮಿತಿಯೂ ಆಗಬಹುದು. ಉಸ್ತುವಾರಿ ಸಮಿತಿಯೂ ಆಗಬಹುದು. ಆಗಲೂ ಇದೇ ಮಾತನ್ನು ಹೇಳುತ್ತಾರೆ. ಆದರೆ ಅವರು ಕಾರ್‍ಯೋನ್ಮುಖರಾಗಿದ್ದಾರೆ. ನಾನು ಈ ಸರಕಾರಕ್ಕೆ ಹೇಳುತ್ತೇನೆ ನಿಮಗೆ ಈ ರಾಜ್ಯದ ಕಾವೇರಿ ನದಿ ನೀರಿನ ಹಿತವನ್ನು ಕಾಪಾಡತಕ್ಕಂತಹ ರಾಜಕೀಯ ಇಚ್ಛಾ ಶಕ್ತಿ ಇಲ್ಲ. ಈ ರಾಜ್ಯವನ್ನು ನಡೆಸತಕ್ಕಂತಹ ರಾಜ್ಯಾಂಗದತ್ತವಾದ ಹಕ್ಕನ್ನು ಕಳೆದುಕೊಂಡಿದ್ದೀರಿ; ಆ ಕಾರಣದಿಂದ ನಿಜವಾಗಿಯೂ ಇನ್ನೇನಾದರೂ ಗಂಭೀರವಾಗಿ ರಾಜ್ಯದ ಹಿತದ ಬಗ್ಗೆ ರಾಜ್ಯದ ಜನರ ಬಗ್ಗೆ ಸಮಸ್ಯೆಯನ್ನು, ಒಟ್ಟಾರೆ ರಾಜ್ಯದ ಹಿತವೇನಾದರೂ ನಿಮ್ಮ ಗಮನದಲ್ಲಿ ಅಲ್ಪ ಸ್ವಲ್ಪವಾದರೂ ಇದ್ದರೆ ಗೌರವದಿಂದ ಈ ಶಾಸನ ಸಭೆಯನ್ನು ವಿಸರ್ಜನೆ ಮಾಡಿ. ಮುಂದೆ ಯಾರಾದರೂ ಬರಲಿ. ಯೋಗ್ಯರನ್ನು ಜನ ಆರಿಸಿಕೊಳ್ಳಲಿ. ಇಂಥ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವರಿಗೆ ಬೇಕಾದವರನ್ನು ಅವರೇ ಆರಿಸಿಕೊಳ್ಳಲಿ. ಅವರೇ ಬಂದರೆ ಸಂತೋಷ. ಇಂಥವರೇ ಬೇಕೆಂದು ಜನರ ಇಚ್ಛೆ ಇದ್ದರೆ ಇವರನ್ನೇ ಆರಿಸಿಕೊಳ್ಳಲಿ. ಜನರಿಗೆ ಬೇಕಾದಂಥ ಸರ್ಕಾರ ರಚನೆ ಆಗಲಿ. ಆದ್ದರಿಂದ ಇದನ್ನು ಜನರಿಗೇ ಬಿಡಿ. ನಾವೆಲ್ಲಾ ಜನರ ಹತ್ತಿರ ಹೋಗೋಣ. ಅಪ್ಪಾ ಪರಿಸ್ಥಿತಿ ಈ ರೀತಿ ಇದೆ. ನಿಮಗೆ ಯಾರು ಬೇಕು ಎಂದು ಕೇಳೋಣ. ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ನಾವು ಎಷ್ಟು ದೂರಕ್ಕೆ ನಮ್ಮ ಅಸಾಮರ್ಥ್ಯವನ್ನು ಪ್ರದರ್ಶನಮಾಡಿದ್ದೇವೆಂದರೆ, ಇಂಡಿಯನ್ ಎಕ್ಸ್‌ಪ್ರೆಸ್ ತನ್ನ ಪತ್ರಿಕೆಯಲ್ಲಿ ಅಗ್ರಲೇಖನವನ್ನು ಬರೆಯುತ್ತದೆ. ಅದರಲ್ಲಿ ಕೇಂದ್ರಸರ್ಕಾರದ ವೈಫಲ್ಯವನ್ನು ತಿಳಿಸುತ್ತಾ, ಉಸ್ತುವಾರಿ ಸಮಿತಿಯನ್ನು ರಚನೆ ಮಾಡುವುದಕ್ಕೆ, ಸಲಹಾ ಸಮಿತಿಯನ್ನು ರಚಿಸುವುದಕ್ಕೆ ಕೇಂದ್ರಸರ್ಕಾರ ವಿಫಲವಾದುದರಿಂದ ತಮಿಳ್ನಾಡಿನ ಮುಖ್ಯಮಂತ್ರಿ ಉಪವಾಸ ಸತ್ಯಾಗ್ರಹದಂಥ ಉಗ್ರವಾದ ಆಲೋಚನೆಯನ್ನು ಮಾಡಿದರು. ಅಂದರೆ ಅರ್ಥಾತ್ ಕರ್ನಾಟಕ ಸರ್ಕಾರ ಈ ದೇಶಕ್ಕೆ ಏನೋ ಮಹಾ

ದೊಡ್ಡಅಪರಾಧವನ್ನು ಮಾಡುತ್ತಿದೆ ನೀರಿನ ಹಂಚಿಕೆಯಲ್ಲಿ ಎನ್ನುವಂಥ ಅಗ್ರಲೇಖನವನ್ನು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದಿದ್ದಾರೆ. ಅವರು ಯಾರ ಪರವಾಗಿ ಬರೆದಿದ್ದಾರೆಂಬುದು ಬೇರೆ ವಿಚಾರ. ಆದರೆ ಅದನ್ನು ನೋಡಿಕೊಂಡು ನೀವು ಸುಮ್ಮನಿದ್ದೀರಿ. ಕನಿಷ್ಟ ಪಕ್ಷ ವಸ್ತುಸ್ಥಿತಿಯನ್ನು ಮಾಧ್ಯಮಗಳಿಗಾದರೂ ಹೇಳುವ ಕೆಲಸವನ್ನಾದರೂ ನೀವು ಮಾಡಬೇಕಾಗಿತ್ತು. ಆ ಅಗ್ರಲೇಖನವನ್ನು ನೋಡಿದ ಮೇಲೆ ನಿಜವಾಗಿ ಈ ಸರ್ಕಾರದ ಪರಿಸ್ಥಿತಿಯ ಗಂಭೀರತೆಯೇ ನನಗೆ ಅರ್ಥವಾಗಿಲ್ಲ. ನನ್ನ ವಾದವನ್ನು ಈ ದಿಸೆಯಲ್ಲಿ ಹೆಚ್ಚು ಲಂಭಿಸದೆ ಒಂದು ಮಾತನ್ನು ಹೇಳುತ್ತೇನೆ. ಎಲ್ಲಾ ರೀತಿಯಲ್ಲೂ ಈ ಸರ್ಕಾರ ವಿಫಲವಾಗಿದೆ. ತನ್ನ ವೈಫಲ್ಯವನ್ನು ಮುಚ್ಚಿಡುವುದಕ್ಕೆ ಅಂತಃಕಲಹದ ಸ್ವರೂಪವನ್ನು ಕೊಟ್ಟಿದ್ದಾರೆ. ನಿನ್ನೆಯಿಂದ ನನ್ನ ದೃಷ್ಟಿಯಲ್ಲಿ ಸಂವಿಧಾನಾತ್ಮಕವಾದ ಸರ್ಕಾರ ಇಲ್ಲ. ರಾಜ್ಯಾಂಗವನ್ನು ರಕ್ಷಣೆ ಮಾಡತಕ್ಕ ಜನರು, ಜವಾಬ್ದಾರಿಯನ್ನು ಹೊತ್ತಂಥ ಜನರು ಇದನ್ನು ಯಾವರೀತಿ ಯೋಚನೆ ಮಾಡುತ್ತಾರೋ ನೋಡೋಣ. ಆದರೆ ನೀವು ಗೌರವದಿಂದ ಈ ಕೆಲಸವನ್ನು ನಾವು ಮಾಡುವುದಕ್ಕಾಗಲಿಲ್ಲ, ನಮ್ಮನ್ನು ಕ್ಷಮಿಸಿ ಎಂದು ಕೈಮುಗಿದು ಜನರ ಮುಂದೆ ಹೋಗತಕ್ಕ ಕೆಲಸ ಮಾಡಿ. ಈ ತಕ್ಷಣವೇ ಅಂದರೆ ಈ ಅಧಿವೇಶನ ಮುಗಿಯುವುದಕ್ಕೆ ಮುಂಚೆ ಮಾಡಿ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮೇಲೆ ಆದಂಥ ಹಲ್ಲೆಯ ಬಗ್ಗೆ ಜನತೆಯ ಕ್ಷಮೆಯನ್ನು ಕೇಳಿದರಲ್ಲಾ, ಅದಕ್ಕೆ ನಾವು ಹೇಳಬೇಕಾಗಿಲ್ಲ. ಕಾವೇರಿ ನೀರಿನ ಬಗ್ಗೆ ನಮ್ಮರಾಜ್ಯದ ಹಕ್ಕನ್ನು ರಕ್ಷಣೆ ಮಾಡಿಕೊಳ್ಳುವುದರಲ್ಲಿ ನಾವು ವಿಫಲವಾಗಿದ್ದೇವೆ. ಆದ್ದರಿಂದ ದಯವಿಟ್ಟು ನಮ್ಮನ್ನು ಕ್ಷಮಿಸಿ ಎಂದು ರಾಜೀನಾಮೆಯನ್ನು ಕೊಡುವ ಆಲೋಚನೆ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರೊ ಎಂ.ಡಿ.ನಂಜುಂಡಸ್ವಾಮಿ : (ಧಾರವಾಡ ರೂರಲ್) : -ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮೂಲತಃ ಕಾವೇರಿ ಜಲಾನಯನ ಪ್ರದೇಶದ ಒಬ್ಬ ರೈತ. ನಾನು ಈ ಸಮಸ್ಯೆಯ ಬಗ್ಗೆ ಒಬ್ಬ ರೈತನಾಗಿ ಮಾತನಾಡುತ್ತಿದ್ದೇನೆ. ಈ ಮಾತನ್ನು ನಾನು ಪ್ರಾರಂಭದಲ್ಲಿ ಹೇಳಬೇಕಾದ ಅವಶ್ಯಕತೆ ಇದೆ. ಅದಕ್ಕೆ ಕಾರಣ ಇಷ್ಟೆ; ನಿನ್ನೆಯಿಂದ ಮಾತನಾಡಿದಂಥ ರಾಷ್ಟ್ರೀಯ ರಾಜಕೀಯ ಪಕ್ಷದ ಸದಸ್ಯರುಗಳಾಗಿ ಈ ಸದನದ ಸದಸ್ಯರು ಯಾರಿದ್ದಾರೆ ಅವರು ಮುಖ್ಯವಾದಂಥ ಪ್ರಶ್ನೆಗಳನ್ನು ಚರ್ಚೆ ಮಾಡಲೇ ಇಲ್ಲ. ಆದರೆ ಒಬ್ಬ ಸದಸ್ಯರು ನನಗೆ ಒಂದು ವಿವರಣೆಯನ್ನು ಕೊಡಬೇಕೆಂದು ಕೇಳಿದ್ದಾರೆ. ನಾನು ಕರ್ನಾಟಕ ರಾಜ್ಯದ ರೈತರ ಸಂಘದ ಪರವಾಗಿ ಒಂದು ಪ್ರಯತ್ನವನ್ನು ಪ್ರಾರಂಭ ಮಾಡಿದ್ದೇನೆ. ರಾಷ್ಟ್ರೀಯ ರಾಜಕೀಯ ಪಕ್ಷಗಳು ಮತ್ತು ರಾಷ್ಟ್ರೀಯ ರಾಜಕೀಯ ಪಕ್ಷಗಳ ರಾಜಕಾರಣಿಗಳು, ರಾಷ್ಟ್ರೀಯ ರಾಜಕೀಯ ಪಕ್ಷದ ಹೆಸರಿನಲ್ಲಿ ನಡೆಸುತ್ತಿರತಕ್ಕಂಥ ಸರ್ಕಾರಗಳು, ಈ ಅಂತರ್‌ರಾಜ್ಯ ಜಲ ವಿವಾದದಿಂದ ದೂರ ಉಳಿಯಬೇಕು. ಸಂಬಂಧಪಟ್ಟ ರೈತರೇ ಈ ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದೆವು. ಪ್ರಯತ್ನವನ್ನು ಪ್ರಾರಂಭ ಮಾಡಿದ್ದೇವೆ. ಇದು ಹೇಗೆ ಸಾಧ್ಯ ಎಂಬ ಬಗ್ಗೆ ವಿವರಣೆಯನ್ನು ಕೊಡಬೇಕೆಂದು ಈ ಸದನದ ಒಬ್ಬ ಸದದಸ್ಯರು ನನ್ನನ್ನು ಇವತ್ತು ಕೇಳಿದರು. ನಾವು ಏಕೆ ಈ ತೀರ್ಮಾನಕ್ಕೆ ಬಂದಿದ್ದೇವೆಂಬ ಬಗ್ಗೆ ವಿವರಣೆ ಹೇಳುತ್ತಾ ಹೋದರೆ ಅಂತರ್‌ರಾಜ್ಯ ಜಲ ವಿವಾದವನ್ನು ಹೇಗೆ ರಾಷ್ಟ್ರೀಯ ರಾಜಕೀಯ ಪಕ್ಷಗಳು ತಮ್ಮ ಮೂರನೆಯ ದರ್ಜೆಯ ರಾಜಕಾರಣಕ್ಕೆ ಬಳಸಿಕೊಂಡು ಇಲ್ಲದ ಸಮಸ್ಯೆಗಳನ್ನು ಸೃಷ್ಟಿಮಾಡಿವೆ ಎಂಬುದನ್ನು ನಾನು ವಿವರಿಸಿದರೆ ಆಗ ನಾವು ರೈತರು ಏಕೆ ಈ ತೀರ್ಮಾನಕ್ಕೆ ಬಂದಿದ್ದೇವೆ ಎಂಬುದು ತಮಗೆ

ಸ್ಪಷ್ಟವಾಗುತ್ತದೆ. ನಾನು ಈ ಸರ್ಕಾರದ ನಿಲುವು ಏನು, ಸರ್ಕಾರದ ನೀತಿ ಏನು ಎಂದು ಕೇಳುವುದಿಲ್ಲ. ಏಕೆಂದರೆ ಸರ್ಕಾರಕ್ಕೆ ನೀತಿಯೂ ಇಲ್ಲ, ನಿಲುವೂ ಇಲ್ಲ; ಇಲ್ಲಿ ನಿನ್ನೆಯಿಂದ ಮಾತನಾಡಿದಂತಹ ರಾಷ್ಟ್ರೀಯ ರಾಜಕೀಯ ಪಕ್ಷಗಳ ಸದಸ್ಯರುಗಳು ನನ್ನ ಹಕ್ಕು ಏನು ಎನ್ನುವುದರ ಬಗ್ಗೆ ಚರ್ಚೆ ಮಾಡಲೇ ಇಲ್ಲ. ಕರ್ನಾಟಕದ ರೈತನ ಹಕ್ಕು ಏನು ಎಂದು ಯಾರೂ ಚರ್ಚೆ ಮಾಡಲಿಲ್ಲ. ನೀರಿನ ಕಾನೂನು ಎಂದು ಒಂದು ಇದೆ. ನೀರಿಗೂ ಭೂಮಿಗೂ ಸಂಬಂಧಪಟ್ಟ ಕಾನೂನು ಇದೆ, ನೀರಿಗೂ, ಭೂಮಿಗೂ, ರೈತನಿಗೂ ಸಂಬಂಧಪಟ್ಟ ಕಾನೂನು ಇದೆ. ಇದನ್ನು ಯಾರೂ ಚರ್ಚೆ ಮಾಡಲಿಲ್ಲ. ಏಕೆ ಎಂದು ಈ ಮೊದಲನೆಯ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ಈ ನೀರಿನ ಕಾನೂನಿನ ಬಗ್ಗೆ ತಮಗೆ ಏನಾದರೂ ಪ್ರಜ್ಞೆ ಇದೆಯಾ ? ನೀರು, ಭೂಮಿ, ಅದಕ್ಕೆ ಹೊಂದಿಕೊಂಡಿರುವಂತಹ ರೈತನ ನೀರಿನ ಹಕ್ಕಿನ ಬಗ್ಗೆ ತಮಗೆ ಪ್ರಜ್ಞೆ ಇದೆಯಾ ? ಈ ಪ್ರಶ್ನೆಯನ್ನು ಸರ್ಕಾರಕ್ಕೆ ಹಾಕುತ್ತಿದ್ದೇನೆ. ಈ ಪ್ರಶ್ನೆಯನ್ನು ಎಲ್ಲಾ ರಾಜಕೀಯ ಪಕ್ಷದ ಸದಸ್ಯರಿಗೆ, ರಾಷ್ಟ್ರೀಯ ರಾಜಕೀಯ ಪಕ್ಷದ ಸದಸ್ಯರಿಗೆ ಹಾಕುತ್ತಿದ್ದೇನೆ. ಏಕೆಂದರೆ ನಮಗೆ ಗೊತ್ತಿದೆ, ಕಾವೇರಿ ನ್ಯಾಯ ಮಂಡಳಿಯ ಅಂತಿಮ ತೀರ್ಪು ಏನು ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಿದೆ. 2000ಇಸವಿಗೆ ಕೃಷ್ಣ ನದಿಯ ಪರಿಸ್ಥಿತಿ ಏನಾಗುತ್ತಿದೆ ಎಂಬುದು ನಮಗೆ ಗೊತ್ತಿದೆ. ಆದಕಾರಣ ಮೊದಲನೆಯ ಪ್ರಶ್ನೆಯನ್ನು ನಾನು ಎತ್ತುತ್ತಿದ್ದೇನೆ. ಮಧ್ಯಂತರ ತೀರ್ಪಿನಲ್ಲಿ 205 ಟಿಎಂಸಿ ಎಫ್‌ಟಿ ಎಂದು ಕೊಟ್ಟಿದ್ದಾರೆ. ಆದರೆ ಕಾವೇರಿ ನ್ಯಾಯ ಮಂಡಳಿಯ ಅಂತಿಮ ತೀರ್ಪು ಏನಾಗುತ್ತದೆ ಎನ್ನುವುದನ್ನು ಈಗಾಗಲೇ ಸೂಚಿಸಿದ್ದೇನೆ. ಇದನ್ನು ಯಾವುದೇ ರಾಷ್ಟ್ರೀಯ ರಾಜಕೀಯ ಪಕ್ಷದ ಸದಸ್ಯರು, ಈ ಸದನದ ಸದಸ್ಯರು, ಮತ್ತು ಸರ್ಕಾರ ಇದರ ಬಗ್ಗೆ ಗಮನಿಸುವುದಕ್ಕೆ ಇಚ್ಛೆ ಪಡಲಿಲ್ಲ. ನನ್ನ ಕೈಯಲ್ಲಿ certified copy of the clarificatory order of the cauvery tribunal ಇದೆ. ಇದರ 20ನೇ ಪುಟದಲ್ಲಿ 2ನೇ ಪ್ಯಾರಾದಲ್ಲಿ ಅವರು ಲೆಕ್ಕ ಹಾಕಿ ಹೇಳುತ್ತಾರೆ. Infact, we have made further allowances by reducing from 252 to 205 TMC ft. tentatively as the share of Tamilnadu and Pondicherry without finally determining the right of the parties". ಇಲ್ಲಿ ಬಹಳ ಸ್ಪಷ್ಟ ಸೂಚನೆ ತಮಗೆ ಇದೆ. ಕಾವೇರಿ ನ್ಯಾಯ ಮಂಡಲಿಯ ಅಂತಿಮ ತೀರ್ಪಿನ ಪ್ರಕಾರ 252 ಟಿಎಂಸಿ ಎಫ್‌ಟಿ ಆಗುತ್ತದೆ. ಆಗ ನಿಮ್ಮ ನಿಲುವು ಏನು ಎಂದು ಕೇಳುವುಉದಕ್ಕೋಸ್ಕರ ನಾನು ಎದ್ದು ನಿಂತಿದ್ದೇನೆ. ಏಕೆಂದರೆ ಯಾವುದೇ ಬೇಜವಾಬ್ದಾರಿ ಸರ್ಕಾರ ಕರ್ನಾಟಕದ ರೈತನ ನೀರಿನ ಹಕ್ಕನ್ನು ಮೊಟಕುಗೊಳಿಸುವುದಕ್ಕೆ ಸಾಧ್ಯವಿಲ್ಲ. ಯಾವುದೇ ಅವಿವೇಕಿ ನ್ಯಾಯಮಂಡಲಿ ಕರ್ನಾಟಕದ ರೈತನ ನೀರಿನ ಹಕ್ಕನ್ನು ಮೊಟಕು ಮಾಡುವುದಕ್ಕೆ ಸಾಧ್ಯ ಇಲ್ಲ. ಯಾವುದೇ ಸುಪ್ರೀಂ ಕೋರ್ಟಿಗೂ ಕೂಡ ಸಾಧ್ಯವಿಲ್ಲ. ಇದು ನಿಮ್ಮ ನಿಲುವು ಆಗಬೇಕು. ಇಂತಹ ಒಂದು ಹೇಳಿಕೆಯನ್ನು ತಾವು ಕರ್ನಾಟಕದ ರಾಜ್ಯದ ರೈತರ ಪರವಾಗಿ ಕೊಡಬೇಕು. ಆಗ ನಿಮಗೆ ಒಂದು ವೈಜ್ಞಾನಿಕವಾದ ನಿಲುವು ಬರುತ್ತದೆ. You have no right to sacrifice my water rights, no Government, no Tribunal, no Court. ಆಗುತ್ತದೆಯೇ ? ನೀರಾವರಿ ಮಂತ್ರಿಗಳು, ಕಾನೂನು ಪಂಡಿತರು ನನಗೆ ಜವಾಬು ಕೊಡಬೇಕು. You have any right to sacrifice my water rights? you don't have. Nobody on earth has. ಇದನ್ನು ಏಕೆ ಹೇಳಲಿಲ್ಲ ಇಷ್ಟು ದಿವಸ? ಏಕೆ ಹೇಳಲಿಲ್ಲವೆಂದರೆ, ಅದಕ್ಕೆ ಕಾರಣ ತಾವೆಲ್ಲಾ ರಾಷ್ಟ್ರೀಯ ರಾಜಕಾರಣ ಮಾಡುವವರು. ಇದನ್ನು ನಾನು ಎಲ್ಲಾ ರಾಷ್ಟ್ರೀಯ ರಾಜಕೀಯ ಪಕ್ಷದ ಸದಸ್ಯರಿಗೆ

ಹೇಳುತ್ತಿರುವುದು without any exception, whether it is Congress (I) or Janata Dal or B.J.P. ನಾವು ವೆಂಕಟರಾಮನ್‌ರವರನ್ನು ಸುಮ್ಮನೆ ಟೀಕೆ ಮಾಡುತ್ತೇವೆ. ಅವರು ರಾಷ್ಟ್ರಾಧ್ಯಕ್ಷರಾಗಿ ಕೆಲಸ ಮಾಡಿದರೋ ಅಥವಾ ತಂಜಾವೂರಿನ ಒಬ್ಬ ಜಮೀನ್ದಾರನಾಗಿ ಕೆಲಸ ಮಾಡಿದರೋ ಎಂಬುದು ಇಲ್ಲಿ ಮುಖ್ಯ. We all know that Venkataramanan is a farmer in the Tanjavur basin. ಆತ ದೊಡ್ಡ ಹಿಡುವಳಿ ರೈತ. We know Narasimha Rao is a farmer in Andhra Pradesh.ಶುಕ್ಲರವರು ಮಧ್ಯಪ್ರದೇಶದವರು. ಎಲ್ಲಿ ಅಂತರ್‌ರಾಜ್ಯ ಜಲ ವಿವಾದಗಳು ಬಹಳ ಇದೆಯೋ ಆ ರಾಜ್ಯದವರು. ನಾವು ಅವರನ್ನು ಟೀಕೆ ಮಾಡುತ್ತೇವೆ. ನಾವು ಏಕೆ ಅವರನ್ನು ಟೀಕೆ ಮಾಡುತ್ತೇವೆ? ಅವರು ಅವರವರ ರಾಜ್ಯಕ್ಕೆ ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲರು ನಿನ್ನೆ ಹೇಳಿದ ಮಾತನ್ನು ತಮಗೆ ಜ್ಞಾಪಿಸಬೇಕು. ನಮಗೆ ಮತ ಕೊಟ್ಟು ಕಳುಹಿಸಿರುವವರು ಕರ್ನಾಟಕದ ಜನತೆ, ದೆಹಲಿಯ ಜನ ಅಲ್ಲ. ಅದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವವರು ಶ್ರೀ ವೆಂಕಟರಾಮನ್‌ರವರು; ಅದನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುವವರು ನರಸಿಂಹರಾವ್ ಅವರು; ಅದನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುವವರು ಶುಕ್ಲಾರವರು. ನಾವು ಅಲ್ಲ. ಹೌದೋ, ಅಲ್ಲವೋ? ನಾವು ಅದನ್ನು ಅರ್ಥಮಾಡಿಕೊಂಡಿಲ್ಲ. ಆದರೆ ರಾಜ್ಯದ ರಾಜಕಾರಣಿಗಳಾದ ನಾವು ಅವಿವೇಕಿಗಳು. ರಾಷ್ಟ್ರೀಯ ರಾಜಕಾರಣ ಮಾಡುತ್ತೇವೆ ಎನ್ನುವಂತಹ ಭ್ರಮೆಯಲ್ಲಿ ಈ ರಾಜ್ಯದ ರೈತರಿಗೆ ದ್ರೋಹ ಬಗೆಯುತ್ತಿದ್ದೇವೆ. ಕಾವೇರಿಗೆ ಸಂಬಂಧಪಟ್ಟ ಹಾಗೆ ಮೂರನೆ ದರ್ಜೆ ರಾಜಕಾರಣ ಪ್ರಾರಂಭವಾಗಿದ್ದು ವಿ.ಪಿ.ಸಿಂಗ್‌ರವರ ಕಾಲದಲ್ಲಿ. ಇದನ್ನು ಏಕೆ ನಮ್ಮ ಮಾಜಿ ವಿರೋಧ ಪಕ್ಷದ ನಾಯಕರು ಮುಚ್ಚಿಡುತ್ತಾರೋ ಏನೋ ಗೊತ್ತಿಲ್ಲ. ಸುಪ್ರೀಂ ಕೋರ್ಟ್ ತೀರ್ಪು ಬಂದಿದ್ದು, ವಿ.ಪಿ.ಸಿಂಗ್‌ರವರ ವಕೀಲ ಹೋಗಿ ಸುಪ್ರೀಂ ಕೋರ್ಟಿಗೆ ವರದಿ ಕೊಟ್ಟಮೇಲೆ. ಅದಕ್ಕೆ 3 ದಿವಸ ಹಿಂದೆ ನಾವು ವಿ.ಪಿ.ಸಿಂಗ್‌ರವರನ್ನು ಭೇಟಿ ಮಾಡಿದ್ದೆವು. ಕರ್ನಾಟಕದಿಂದ ಹೋದಂತಹ ಒಂದು ತಂಡದಲ್ಲಿ ನಾನೂ ಇದ್ದೆ. ಯೋಜನಾ ಮಂಡಲಿಯ ಉಪಾಧ್ಯಕ್ಷರಾಗಿದ್ದ ರಾಮಕೃಷ್ಣ ಹೆಗಡೆಯವರೂ ಹಾಜರಿದ್ದರು. ಈಗ ಇಲ್ಲಿ ಹಾಜರಿದ್ದಾರೆ. ನಾವು ಹೋದ ಕೂಡಲೇ ಮೊದಲನೇ ವಾಕ್ಯ ಏನು ಹೇಳಿದರು, "the reception sentence was that we will refer this matter to the Inter-State Council. We are going to set up very shortly. We are going to constitute it very shortly".

ಇಂಟರ್ ಸ್ಟೇಟ್ ಕೌನ್ಸಿಲ್ ಮಾಡುತ್ತೇವೆ, ಇಂಟರ್ ಸ್ಟೇಟ್ ಕೌನ್ಸಿಲ್‌ಗೆ ಕೊಡುವಂತಹ ಒಂದು ಸಮಸ್ಯೆ ಇದು. ಆದುದರಿಂದ ನ್ಯಾಯ ಮಂಡಲಿ ಏನೂ ಬೇಕಾಗಿಲ್ಲ ಎಂದೇ ಹೇಳಿದರು. ಮಾನ್ಯ ಚಂದ್ರೇಗೌಡರೇ, ಇದು, ಹೌದೋ, ಅಲ್ಲವೋ ಹೇಳಿ. ಆದರೆ ಮೂರು ದಿವಸದ ಮೇಲೆ ಏನು ಮಾಡಿದರು.ಸುಪ್ರೀಂ ಕೋರ್ಟಿಗೆ ತಮ್ಮ ವಕೀಲನ ಮೂಲಕ, ಇದು ಮಾತುಕತೆ ಮೂಲಕ ಬಗೆಹರಿಯುವುದಿಲ್ಲ, ಆದುದರಿಂದ ತಾವು ನ್ಯಾಯಮಂಡಲಿ ರಚನೆ ಮಾಡಬಹುದು ಎಂದು ಹೇಳಿಕಳುಹಿಸಿದರೋ, ಇಲ್ಲವೋ? ಏತಕ್ಕೆ? ಏಕೆಂದರೆ ಆಗ ಅವರಿಗೆ ತಮಿಳುನಾಡಿನ ಡಿಎಂಕೆ ಪಕ್ಷದ ಬೆಂಬಲ ಬೇಕಾಗಿತ್ತು. ಇದು ಯಾವ ದರ್ಜೆಯ ರಾಜಕಾರಣ? ಮೂರನೆ ದರ್ಜೆ ರಾಜಕಾರಣ. ಮೂರನೆ ದರ್ಜೆ ರಾಜಕಾರಣ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು ಮೊದಲನೆದರ್ಜೆ ರಾಜಕಾರಣ. ಈಗಲೂ

ಮಾಡಬೇಕು ಇವರು.

Sri Ramakrishna Hegde :- To put the records straight. ತಮಿಳುನಾಡಿನ ಡಿಎಂಕೆ ಸದಸ್ಯರ ಬೆಂಬಲ ಬೇಕಾಗಿತ್ತು ಎಂದು ಮಾನ್ಯ ಸದಸ್ಯರಾದ ನಂಡುಂಡಸ್ವಾಮಿಯವರು ಹೇಳಿದರು. ಡಿಎಂಕೆಯ ಒಬ್ಬ ಸದಸ್ಯರೂ ಕೂಡ ಲೋಕಸಭೆಯಲ್ಲಿ ಆಗ ಇರಲಿಲ್ಲ. ರಾಜ್ಯ ಸಭೆಯಲ್ಲಿ ಬೆಂಬಲ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ನಾವು ಒಟ್ಟಿಗೆ ಮಾನ್ಯ ವಿ.ಪಿ.ಸಿಂಗ್‌ರವರ ಹತ್ತಿರ ಹೋದದ್ದು ನಿಜ. ಆಗ ಅವರು ಈ ವಿಚಾರವನ್ನು ನಾವು ಇಂಟರ್‌ಸ್ಟೇಟ್ ಕೌನ್ಸಿಲ್‌ಗೆ ರೆಫರ್ ಮಾಡುತ್ತೇವೆಂದು ಹೇಳಿದ್ದು ನಿಜ. ಆದರೆ ಅಷ್ಟರೊಳಗಾಗಿ ಸುಪ್ರೀಂಕೋರ್ಟಿನ ತೀರ್ಮಾನ ಏನಾಯಿತು ಅಂದರೆ ಸರ್ಕಾರದ ಪರವಾಗಿ ವಾದಿಸಿದಂಥ ಅಡ್ವೊಕೇಟ್ ಜನರಲ್ ಮತ್ತು ಬೇರೆ ವಕೀಲರು, ಅದು ಜನತಾ ದಳದ ಸರ್ಕಾರವಾಗಿರಲಿಲ್ಲ. ಅವಾಗ ಎನ್ನುವುದನ್ನು ನೆನಪಿಡಬೇಕು. ಅದು ಕಾಂಗ್ರೆಸ್(ಐ) ಸರ್ಕಾರವಾಗಿತ್ತು, ಅದು ಚುನಾಯಿತ ಸರ್ಕಾರವಾಗಿರಲಿ ಅಥವಾ ಗೌವರ್ನರ್ ಸರ್ಕಾರವಾಗಿರಲಿ, ಎರಡೂ ಒಂದೇ. ಸುಪ್ರೀಂ ಕೋರ್ಟಿನವರು ಯಾವಾಗ ತೀರ್ಮಾನವನ್ನು ಕೊಟ್ಟರು ಆವಾಗ ಕೇಂದ್ರ ಸರ್ಕಾರಕ್ಕೆ ಬೇರೆ ವಿಧಿನೇ ಇರಲಿಲ್ಲ. ಅದನ್ನು ಜಾರಿಗೆ ತರದಿದ್ದರೆ, ಕಂಟೆಂಪ್ಟ್ ಆಫ್ ಕೋರ್ಟಿಗೆ ಕೇಂದ್ರ ಸರ್ಕಾರ ಭಾದ್ಯವಾಗುತ್ತಿತ್ತು. ಇಷ್ಟೇ ನಾನು ಕರೆಕ್ಟ್ ಮಾಡಲಿಕ್ಕೆ ಬಯಸುತ್ತೇನೆ.

ಪ್ರೊ. ಎಂ.ಡಿ.ನಂಜುಂಡಸ್ವಾಮಿ :- ಒಂದು ಸ್ಟೆಪ್‌ನ್ನು ಸ್ಕಿಪ್ ಮಾಡುತ್ತಿದ್ದಾರೆ, ಮಾನ್ಯ ರಾಮಕೃಷ್ಣ ಹೆಗಡೆಯವರು I will put the records straight cronologically.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ರಾಮಕೃಷ್ಣ ಹೆಗಡೆಯಂಥವರು ಮತ್ತೆ ನಮಗೆ ತಪ್ಪು ಅರ್ಥ ಬರುವ ರೀತಿಯಲ್ಲಿ ವಾಖ್ಯಾನ ಮಾಡತಕ್ಕಂಥದ್ದು ಸರಿಯಲ್ಲ. ಏತಕ್ಕೆಂದರೆ ಒಂದು ಹಂತದಲ್ಲಿ ಯಾವುದೋ ತಪ್ಪಾಗಿದ್ದರೆ ಅದನ್ನು ತಪ್ಪು ಎಂದು ಒಪ್ಪಿಕೊಳ್ಳೋಣ. ಅಂದು ಕೇಂದ್ರ ಸರ್ಕಾರದ ವಕೀಲರು ಸುಪ್ರೀಮ್ ಕೋರ್ಟಿನಲ್ಲಿ, ಕೇಂದ್ರ ಸರ್ಕಾರದ ಇನ್‌ಸ್ಟ್ರಕ್ಷನ್ ಮೇರೆಗೆ we have no objection ಎಂದು ಹೇಳಿದ್ದಾರೆ. ಏತಕ್ಕೆಂದರೆ, ಇದನ್ನು ನಾವು ನೋಡಿದ್ದೇವೆ. ಅವರು ರೆಪ್ರಸೆಂಟ್ ಮಾಡಿದ್ದರಿಂದಲೇ ಸುಪ್ರಿಮ್‌ಕೋರ್ಟಿನವರು ಆ ತೀರ್ಮಾನ ಕೊಡಬೇಕಾದಂಥ ಸಂದರ್ಭ ಬಂದಿತ್ತು. ಇಲ್ಲದಿದ್ದರೆ ಅದು ಅವತ್ತು ಆಗುತ್ತಿರಲಿಲ್ಲ. ಅವತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ಮನಸ್ಸು ಮಾಡಿದ್ದರೆ ಅಥವಾ ವಿ.ಪಿ.ಸಿಂಗ್‌ರವರ ಎದುರಿನಲ್ಲಿ ಪ್ರತಿಭಟನೆ ಮಾಡಿದ್ದರೆ ಆ ನಿರ್ಣಯವನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಏತಕ್ಕೋಸ್ಕರ ಆ ಕೆಲಸ ಆ ಸಂದರ್ಭದಲ್ಲಿ ಮಾಡಲಿಲ್ಲವೆಂದು ನಮಗಿನ್ನೂ ಸಂಶಯವಾಗಿಯೇ ಉಳಿದಿದೆ.

ಶ್ರೀ ರಾಮಕೃಷ್ಣ ಹೆಗಡೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ತಿಮ್ಮಪ್ಪನವರಿಗೆ ಬಂದಿರುವಂಥ ಸಂಶಯವನ್ನು ಆ ಭಗವಂತನಿಗೂ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಅವರಿಗೆ ನೆನಪಿರಬಹುದು. ನಾನು ಮುಖ್ಯಮಂತ್ರಿಯಾಗಿದ್ದಾಗ, ಕಾವೇರಿ ಜಲಾನಯನದ ವಾದ ವಿವಾದ ಇಷ್ಟೊಂದು ಪ್ರಕೋಪವಾದ ರೀತಿಯಲ್ಲಿ ಎಂದೂ ಹೋಗಿರಲಿಲ್ಲ. ಅದು ತಮಿಳುನಾಡಿನ ಮುಖ್ಯಮಂತ್ರಿಗಳ ಮತ್ತು ಇಲ್ಲಿಯ ಮುಖ್ಯಮಂತ್ರಿಗಳ ನೇರವಾದಂಥ ವಿಚಾರ ವಿನಿಮಯ ಮತ್ತು ಸೌಹಾರ್ದಯುತವಾದಂಥ ಒಂದು ಸಂಬಂಧ ಇದ್ದುದ್ದರಿಂದ. ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಕೂಡ ನಾನು ಇಲ್ಲಿ ಬಹಿರಂಗ ಮಾಡಬಹುದು. ಮಾನ್ಯ ದಿವಂಗತ ಎಂ.ಜಿ.ಆರ್.ರವರು ಅಕಸ್ಮಾತ್ತಾಗಿ

ಕಾಯಿಲೆಬಿದ್ದು ಅಮೇರಿಕಾಕ್ಕೆ ಹೋಗದಿದ್ದಿದ್ದರೆ ಈ ಒಂದು ವಿವಾದ ಇತ್ಯರ್ಥವಾಗಿ ಎಷ್ಟೋ ವರ್ಷಗಳಾಗುತ್ತಿತ್ತು. ನಾವು ಕೊನೇ ಮೀಟಿಂಗ್ ಮಾಡಿದ್ದು. ಅವರು ಅಮೇರಿಕಾಕ್ಕೆ ಹೋಗುವ ಕೇವಲ15 ದಿವಸಗಳ ಮೊದಲು. ಆ ಮೀಟಿಂಗ್‌ನಲ್ಲಿ ಎಂ.ಜಿ.ಆರ್.ರವರು ಹೇಳಿದರು; ಈ ಮೀಟಿಂಗ್‌ನಲ್ಲಿ ನಾನು ನನ್ನ ಸಹೋದ್ಯೋಗಿಗಳನ್ನೂ ಕರೆಯುವುದಿಲ್ಲ, ಮತ್ತು ಅಧಿಕಾರಿಗಳನ್ನು ಕರೆಯುವುದಿಲ್ಲ, ನಾವಿಬ್ಬರು ಕುಳಿತುಕೊಂಡು ಮಾತನಾಡೋಣವೆಂದು ಹೇಳಿದ್ದರು. ಆ ದಿವಸ ನಾವು ತುಸು ಹೆಚ್ಚು ಕಡಿಮೆ ಒಂದು ಇತ್ಯರ್ಥಕ್ಕೆ ಬಂದಿದ್ದೆವು. ಅದರಲ್ಲಿ ವ್ಯತ್ಯಾಸ ಇರತಕ್ಕದ್ದು ಕೇವಲ 10 ಟಿ.ಎಂ.ಸಿ. ಮಾತ್ರ. ಆಗ ಎಂ.ಜಿ.ಆರ್. ಅವರು ಹೇಳಿದರು, ನಾನು ನನ್ನ ಸಹೋದ್ಯೋಗಿಗಳ ಜೊತೆ ವಿಚಾರ ವಿನಿಮಯ ಮಾಡುತ್ತೇನೆ, ಅವರ ಜೊತೆ ಚರ್ಚೆ ಮಾಡುತ್ತೇನೆ; ಇನ್ನು 15-20 ದಿವಸ ಬಿಟ್ಟು ಪುನಃ ಸಭೆ ಸೇರೋಣ; ಆಗ ಅಂತಿಮವಾಗಿ ಬಗೆಹರಿಸೋಣ. ಇದನ್ನು ಅಧಿಕಾರಿಗಳಿಗೆ ಬಿಟ್ಟರೆ ಬಗೆಹರಿಯುವುದಕ್ಕೆ ಸಾಧ್ಯವಿಲ್ಲ; ಜಸ್ಟೀಸ್ ಆಧಾರದ ಮೇಲೆ, ಈಕ್ವಿಟಿ ಆಧಾರದ ಮೇಲೆ ನಾವಿಬ್ಬರೂ ಕುಳಿತುಕೊಂಡು ಇದರ ಬಗ್ಗೆ ಕೊನೆಯ ನಿರ್ಣಯ ಮಾಡೋಣವೆಂದರು. ಆಮೇಲೆ ಅವರು ಕಾಯಿಲೆ ಬಿದ್ದರು; ಅಮೇರಿಕಾಕ್ಕೆ ಹೋದರು. ಪುನಃ ವಾಪಸ್ಸು ಬಂದು ಮುಖ್ಯ ಮಂತ್ರಿಯ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಮಾನ್ಯ ತಿಮ್ಮಪ್ಪನವರಿಗೆ ಹೇಳಬಯಸುತ್ತೇನೆ, ಯಾವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಟ್ರಿಬ್ಯೂನಲ್‌ಗೆ ಒಪ್ಪತಕ್ಕ ಪ್ರಸಂಗ ಬಂತು ಎಂಬುದನ್ನು ಇನ್ನೊಂದು ಸಾರಿ ಯೋಚನೆ ಮಾಡಿ ನೋಡಲಿ, ಅಲ್ಲಿ ವಿ.ಪಿ.ಸಿಂಗ್ ಅವರ ಹಸ್ತಕ್ಷೇಪವಾಗಲಿ, ಪಾತ್ರವಾಗಲಿ ಇಲ್ಲ. ಅದೇನಿದ್ದರೂ ಅಂದಿನ ಸರ್ಕಾರದ ತಪ್ಪಿನಿಂದ ಆ ಸರ್ಕಾರದ ಅನಾಸಕ್ತಿಯಿಂದ, ಆ ಸರ್ಕಾರದ ಬೇಜಾವಾಬ್ದಾರಿತನದ ಧೋರಣೆಯಿಂದ ಆಗಿದೆಯೇ ಹೊರತು ಬೇರೆ ಕಾರಣದಿಂದ ಅಲ್ಲ.

ಶ್ರೀ ಆರ್.ಎಲ್.ಜಾಲಪ್ಪ :- ತಮಿಳ್ನಾಡಿನ ಇರಿಗೇಷನ್ ಮಿನಿಸ್ಟರ್ ಇಲ್ಲಿಗೆ ಬಂದಾಗ ಅವರನ್ನು ಸರಿಯಾಗಿ ಮಾತನಾಡಿಸಲಿಲ್ಲ ನಿಮ್ಮ ಆಗಿನ ನೀರಾವರಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು. ಕಮಿಟಿಯವರು ಇಲ್ಲಿಗೆ ಬಂದಾಗ ಅವರನ್ನು ಊಟಕ್ಕೆ ಕರೆದು ಇವರು ಯಾರೂ ಪತ್ತೆಯೇ ಇಲ್ಲ. ಇಷ್ಟೆಲ್ಲಾ ಸಿಕ್ಕಾಬಟ್ಟೆ ಬಿಹೇವ್ ಮಾಡಿದ್ದಕ್ಕೆ ಈ ಪರಿಸ್ಥಿತಿ ಬಂತು. ಅವರು 5 ಟಿ.ಎಂ.ಸಿ. ನೀರನ್ನು ಕೇಳುವುದಕ್ಕೆ ಬಂದಾಗ ಕೊಟ್ಟು ಕಳುಹಿಸಬಹುದಾಗಿತ್ತು. ಆವತ್ತು ಏನೂ ಆಗುತ್ತಿರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ ನಾವು ಯುದ್ಧದಲ್ಲಿ ಗೆಲ್ಲಬೇಕೆಂದರೆ ಸಣ್ಣಪುಟ್ಟ ಕಾಳಗದಲ್ಲಿ ಸೋಲಬೇಕಾಗುತ್ತದೆ; ಅಂದರೆ ಯುದ್ಧ ಗೆಲ್ಲುತ್ತೇವೆ. ಶ್ರೀಮಾನ್ ವೀರೇಂದ್ರ ಪಾಟೀಲರು ಇಲ್ಲಿ ನಿನ್ನೆ ಭಾಷಣ ಮಾಡಿದರಂತೆ. ಹದಗೆಟ್ಟಿದ್ದು ಅವರ ಕಾಲದಲ್ಲಿ. ಅದಾದ ಮೇಲೆ ಮತ್ತಷ್ಟು ಹದಗೆಟ್ಟಿತು. ಅವರು ಹತ್ತು ಸಾರಿ ಫೋನ ಮಾಡಿದರೂ, ಭೇಟಿಗೆ ಬರುತ್ತೇವೆ. ಅರ್ಧ ಗಂಟೆ ಅವಕಾಶ ಕೊಡಿ ಎಂದರೂ ಕೊಡದೆ, ಅಷ್ಟೂ ಸೌಜನ್ಯ ತೋರದೆ ಇದ್ದರೆ ಪರಿಣಾಮ ಏನಾಗುತ್ತದೆಂದು ನಿರೀಕ್ಷೆಮಾಡುವುದು ಕಷ್ಟವೇ ?

ಪ್ರೊ. ಎಂ.ಡಿ.ನಂಜುಂಡಸ್ವಾಮಿ :- ಈ ಕಾರಣಗಳಿಗೆ ನಾವೇ ತೀರ್ಮಾನ ಮಾಡಿಕೊಳ್ಳುತ್ತೇವೆ. ಅದಕ್ಕೆ ದಯವಿಟ್ಟು ತೆಪ್ಪಗೆ ಇರಿ ಎಂದು ಹೇಳುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಹೆಗಡೆಯವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ವಿ.ಪಿ.ಸಿಂಗ್ ಅವರು ಆ ದಿನ ಹೇಳಿದ ಒಂದು ಮಾತು ಕಡತದಲ್ಲಿ ಹೋಗಿದೆ. ಇಂಟರ್ ಸ್ಟೇಟ್

ಕೌನ್ಸಿಲ್‌ಗೆ ರೆಫರ್ ಮಾಡುತ್ತೇವೆಂದು ಹೇಳಿದ್ದು ನಿಜ. ಆದರೆ ಟ್ರೀಬ್ಯೂನಲ್ ಬೇಡ ಎಂದು ಹೇಳಿದರು ಅಂತ ಆದರಲ್ಲಿ ಇದೆ. ಆ ಮಾತನ್ನು ಅವರು ಹೇಳಿರಲಿಲ್ಲ. ಇಂಟರ್ ಸ್ಟೇಟ್ ಕೌನ್ಸಿಲ್ ಸಧ್ಯದಲ್ಲಿಯೇ ಮೀಟಿಂಗ್ ನಡೆಯುವುದು ಇದೆ. ಅಲ್ಲಿಗೆ ರೆಫರ್ ಮಾಡುತ್ತೇವೆಂದು ಹೇಳಿದ್ದು ಉಂಟು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಪ್ರಧಾನ ಮಂತ್ರಿಗಳ ನಿವಾಸದಲ್ಲಿ ನಡೆದ ಸಭೆಯ ಪ್ರೊಸೀಡೀಂಗ್ಸ್ ರೆಕಾರ್ಡ ಆಗಿದ್ದರೆ ಅದನ್ನು ನಾವು ತರಿಸಬೇಕಾಗುತ್ತದೆ. It is my statement against the Hon'ble Mr.D.B.Chandregowda. These are the very words he said. ನಾನು ಈ ಜನ್ಮದಲ್ಲಿ ಇನ್ನೂ ಸುಳ್ಳು ಹೇಳಿಲ್ಲ. ಇನ್ನು ಮುಂದೆ ಸಹ ಸುಳ್ಳು ಹೇಳುವ ಅವಶ್ಯಕತೆ ಏನೂ ಕಾಣಿಸುತ್ತಿಲ್ಲ. These are the very words he said. "It need not be referred to a Tribunal. We are going to constitute the Inter-State Council and these are the issues which should be referred to the Inter-State Council. "These are the words which Mr.V.P.Singh said.

(Hon'ble Mr. Deputy Speaker Sri Anjana Murthy in the Chair)

ಆಗ ಅವರಿಗೆ ರಾಜಕೀಯ ಸಂಕಟ ಇತ್ತು. ಆ ಸಂಕಟವನ್ನು ಪರಿಹಾರ ಮಾಡಿಕೊಳ್ಳುವುದಕ್ಕೋಸ್ಕರ The Counsel for the Government of India had to submit a Memo to the Supreme Court. ಅದಕ್ಕೆ 3 ದಿನ ಮುಂಚೆ ನಾವು ಡೆಲಿಗೇಷನ್ ಹೋಗಿದ್ದೆವು. ಆದರೆ ನಮಗೆ ಈ ಮಾತು ಹೇಳಿ ಮೂರನೇ ದಿವಸ ಅವರು ಏನು ಹೇಳಿದರು ಅದೇ ಮೆಮೋವನ್ನು ಹಾಕಬೇಕಾಗಿತ್ತು ಸುಪ್ರೀಂ ಕೋರ್ಟಿಗೆ; ಆದರೆ ಹಾಕಲಿಲ್ಲ. ನೀವು ಏನೂ ಬೇಜಾರು ಮಾಡಬೇಡಿ. ಮೂರನೇ ದರ್ಜೆ ರಾಜಕಾರಣ ಕಾವೇರಿಗೆ ಸಂಬಂಧಪಟ್ಟಹಾಗೆ ಅಲ್ಲಿಗೇ ನಿಲ್ಲಲಿಲ್ಲ. ಅಲ್ಲಿಂದ ಮುಂದುವರಿಯುತ್ತಾ ಇದೆ. ನಾವು ಎರಡನೇ ಸಾರಿ ಮತ್ತೆ ಹೋಗಿದ್ದೆವಲ್ಲಾ; ಕರ್ನಾಟಕ ರಾಜ್ಯದ ಪರವಾಗಿ; ಸನ್ಮಾನ್ಯ ಬಂಗಾರಪ್ಪನವರ ನಾಯಕತ್ವದಲ್ಲಿ; ಆಗ ಆಗಿದ್ದೂ ಮೂರನೇ ದರ್ಜೆ ರಾಜಕಾರಣಾನೇ. ಶಾಸನಸಭೆಗಳಲ್ಲಿ ನಿರ್ಣಯ ಮಾಡಿ, ಸರ್ವಾನುಮತದ ನಿರ್ಣಯವನ್ನು ಹೊತ್ತುಕೊಂಡು ನಾವು ದೆಹಲಿಗೆ ಹೋಗಿದ್ದೆವು. ಹೋದಮೇಲೆ ನಮಗೆ ಏನು ಮರ್ಯಾದೆ ಸಿಕ್ಕಿತು ಎಂಬುದು ಗೊತ್ತಿದೆ. ಅದೂ ಕೂಡ ಮೂರನೇ ದರ್ಜೆ ರಾಜಕಾರಣದ ನಡುವೆಯೇ ಆಗಿದ್ದು.

ಒಬ್ಬ ಮಾನ್ಯ ಸದಸ್ಯರು :- ನಿವೂ ಪಾಲುದಾರರಲ್ಲವೇ ?

ಪ್ರೊ. ಎಂ.ಡಿ.ನಂಜುಂಡಸ್ವಾಮಿ :-ನಾನು ಏಕೆ ಪಾಲುದಾರನಾಗುತ್ತೇನೆ? ಏಕೆ ಬೇಜಾವಾಬ್ದಾರಿ ಮಾತನಾಡುತ್ತೀರಿ ? ನನ್ನ ಕಾರ್ಯ ಮಾಡುವುದಕ್ಕೆ ನಾನು ಹೋಗಿದ್ದೆ ಅಷ್ಟೇ. ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಮಾತನಾಡುತ್ತಾ ಇರುವ ಯಾವುದೇ ರಾಷ್ಟ್ರೀಯ ರಾಜಕೀಯ ಪಕ್ಷದ ಸದಸ್ಯರೂ ನ್ಯಾಯ ಮಂಡಲಿ ಬಗ್ಗೆ ಸರಿಯಾದ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಕಾರಣ ಇಷ್ಟೆ; ಯಾವ ರಾಷ್ಟ್ರೀಯ ರಾಜಕೀಯ ಪಕ್ಷದ ಸರ್ಕಾರ ನ್ಯಾಯಮಂಡಲಿ ರಚನೆ ಮಾಡಿತು, ಆ ಪಕ್ಷದ ಸದಸ್ಯರಿಗೆ ನ್ಯಾಯಮಂಡಲಿಯನ್ನು ತಿರಸ್ಕರಿಸಬೇಕೆನ್ನುವ ಮಾತು ಹೇಳುವುದಕ್ಕೆ ಆಗುತ್ತಿಲ್ಲ. ಈಗ ನಿಮಗೂ ಅಷ್ಟೇ;

ಶ್ರೀ ಡಿ.ಬಿ.ಚಂದ್ರೇಗೌಡ ;- ಹಿಂದೆ ಠರಾವು ಮಾಡಿದ್ದೇವೆ. We have made a resolution.

Prof. M.D.Nanjundaswamy you see the wordings of the resolution. ದಯಮಾಡಿ ತಾವು ಆ ವರ್ಡಿಗ್ಸ್ ನೋಡಿ. The statement is not categorical at all. ಆ ಸದನದಲ್ಲಿ ಮತ್ತು ಈ ಸದನದಲ್ಲಿ ಏನು ನಿರ್ಣಯ ಮಾಡಿದ್ದಾರೆ? ಸ್ಪಷ್ಟವಾಗಿ ನ್ಯಾಯಮಂಡಲಿಯನ್ನು ತಿರಸ್ಕರಿಸುತ್ತೇವೆ ಎಂದು ಎಲ್ಲಿ ಇದೆ? ಇಲ್ಲ. ನಮಗೆ ಎಲ್ಲಾ ಗೊತ್ತಿದೆ. ಈ ದೇಶದಲ್ಲಿ ನ್ಯಾಯಮಂಡಲಿಗಳು ಯಾವ ರೀತಿ ಕೆಲಸ ಮಾಡುತ್ತವೆ? ನಡುನಡುವೆ ಮಾತನಾಡುತ್ತೇವೆ ನಾವು. ನ್ಯಾಯಮಂಡಲಿಗಳಿಗೆ ಮಾರ್ಗಸೂಚಿಗಳೇ ಇಲ್ಲ. There are no guidelines ಎಂದು ಮಾತನಾಡುತ್ತಲೇ ಇರುತ್ತೇವೆ. ಬಚಾವತ್ ಮಂಡಲಿ ಏನು ಆಧಾರ ತೆಗೆದುಕೊಂಡಿದೆ, ನೀರಿನ ಲಭ್ಯತೆ ಅಂಶ ತೆಗೆದುಕೊಂಡಾಗ 75 ವರ್ಷದ ಸರಾಸರಿ. ಕಾವೇರಿ ನ್ಯಾಯಮಂಡಲಿಯವರು ಎಷ್ಟು ವರ್ಷದ ಸರಾಸರಿ ತೆಗೆದುಕೊಂಡಿದ್ದಾರೆ 50 ವರ್ಷದ ಸರಾಸರಿ. ಯಾರಿಗಾದರೂ ಸ್ವೇಚ್ಛಾಧಿಕಾರವನ್ನು ನಾವು ಕೊಟ್ಟಿದ್ದೇವಾ? ದೇಶದಲ್ಲಿ,ಸಂವಿಧಾನದಲ್ಲಿ ಕೊಟ್ಟಿದ್ದೇವಾ? Have we given this discretionarypower to these Tribunals? ಕೊಟ್ಟಿದ್ದೇವಾ ಅಧ್ಯಕ್ಷರೇ? ಯಾರಿಗೆ ಸ್ವೇಚ್ಛಾಧಿಕಾರ ಕೊಟ್ಟಿದ್ದೇವೆ? ನಾನು ತಿಳಿದುಕೊಂಡಿರೋದು We are living under rule of law, not the rule by men or rule by discretion.

ಒಂದರಲ್ಲಿ 75 ವರ್ಷದ ಸರಾಸರಿ, ಇನ್ನೊಂದರಲ್ಲಿ 50 ವರ್ಷದ ಸರಾಸರಿ. ಯಾರು ಅಧಿಕಾರ ಕೊಟ್ಟಿದ್ದು ಇವರಿಗೆ ? ಈ ನ್ಯಾಯಮಂಡಲಿಗಳಿಗೆ ತಮಗೆ ಇಚ್ಛೆ ಬಂದಹಾಗೆ ಮಾರ್ಗ ಸೂಚಿ ಹಾಕಿಕೊಳ್ಳುವುದಕ್ಕೆ ಅಧಿಕಾರ ಕೊಟ್ಟಿದ್ದೇವೇನು? ಮತ್ತೆ ಎರಡನೆಯದು 11.2 ಲಕ್ಷ ಎಕರೆಗಿಂತ ಹೆಚ್ಚು ನೀರಾವರಿ ಮಾಡಬಾರದು ಎಂದು ನನಗೆ ಹೇಳುತ್ತಾರಲ್ಲಾ, ನಾನು ಕಾವೇರಿ ಜಲಾನಯದ ಪ್ರದೇಶದ ರೈತ. ಇವರು ಯಾರು ಹೇಳುವುದಕ್ಕೆ? ಇವರಿಗೆ ಏನು ಅಧಿಕಾರ ಕೊಟ್ಟಿದ್ದೇವೆ? ಕರ್ನಾಟಕದ ನೀರು ಎಷ್ಟು, ತಮಿಳುನಾಡಿನ ಪಾಲು ಎಷ್ಟು ಎಂಬುದನ್ನು ಮಾತ್ರ ಹೇಳುವುದಕ್ಕೆ ಅಧಿಕಾರ ಕೊಟ್ಟಿದ್ದೇವೆಯೇ ಹೊರತು ಬೇರೆ ಅಧಿಕಾರ ಕೊಟ್ಟಿಲ್ಲ. ಕರ್ನಾಟಕದ ನೀರು ಎಷ್ಟು ಅದನ್ನು ಯಾವ ರೀತಿ ಉಪಯೋಗಿಸುತ್ತೇವೆಂಬುದು ನಮಗೆ ಬಿಟ್ಟಿದ್ದು. ಹೌದೋ ಅಲ್ಲವೋ ? ಇದು ನ್ಯಾಯಮಂಡಲಿ ಮಾಡುವ ಕೆಲಸವೇ ಅಲ್ಲ. ಇದು ನ್ಯಾಯಮಂಡಲಿ ಮಾಡುತ್ತಿರುವ ಅನ್ಯಾಯಗಳು. ಇದನ್ನು ಮಾತನಾಡುತ್ತಾ ಇರುತ್ತೇವೆ. ಆದರೆ ನ್ಯಾಯಮಂಡಲಿ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕೋ,ಬೇಡವೋ? ಅದೇ ರೀತ ಬಚಾವತ್ ನ್ಯಾಯಮಂಡಲಿಗೆ ಸಂಬಂಧಪಟ್ಟಹಾಗೆ ಕೂಡ. 2000ನೇ ಇಸವಿಗೆ ಮುಗಿಸಬೇಕು. ಮುಗಿಸದೇ ಇದ್ದರೆ ಆ ಹೆಚ್ಚುವರಿ ನೀರು ನಿಮಗೆ ಸಿಗುವುದಿಲ್ಲ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಉಂಟೇ?

11.50 ಪಿ.ಎಂ

ಕರ್ನಾಟಕದ ರೈತನ ನೀರಿನ ಹಕ್ಕು ಏನಾಗುತ್ತದೆ 2 ಸಾವಿರದ ಇಸವಿಗೆ ? Whether it gets obliterated by the Bachawat Award? No. Impossible.ಯಾವ ದನಕಾಯುವ ಹುಡುಗ ಬೇಕಾದರೆ ಹೇಳುತ್ತಾನೆ. ನನ್ನ ಜಮೀನು ಇದೆ; ಅದರ ಕೆಳಗಡೆ ನನ್ನ ತಮ್ಮನ ಜಮೀನು ಇದೆ ನಾನು ಬೇಜವಾಬ್ದಾರಿ ಮನುಷ್ಯ, ನಾನು ಹೆಂಡಕುಡುಕ, ಮೇಲ್ಗಡೆ ಇರುವ ಜಮೀನು ನೀರಾವರಿ ಮಾಡುವುದಕ್ಕೆ ನಾನು ಆಸ್ತೆ ವಹಿಸುವುದಿಲ್ಲ, ಕಾಲ ತಳ್ಳುತ್ತೇನೆ; ನನ್ನ ತಮ್ಮ ಕೆಳಗಡೆ ಇರುವವನು ಬೇಗ ಬೇಗ ನೀರಾವರಿ ಮಾಡಿಕೊಳ್ಳುತ್ತಾನೆ. ಆದರೆ ನನ್ನ ಮಕ್ಕಳಿಗೆ ನೀರಿನ ಹಕ್ಕು ಹೋಗುತ್ತದೆಂದು

ಹೇಳುತ್ತೀರಾ? What does law of water say? ಎಂದೆಂದಿಗೂ ಹೋಗುವುದಿಲ್ಲ ಅದು. ನಾನು ಹೆಂಡಕುಡುಕನೆಂದು ಏಕೆ ಹೇಳುತ್ತೇನೆಂದರೆ ಕರ್ನಾಟಕ ಸರ್ಕಾರಗಳು ಯಾವುದು ಈ ಜಲ ವಿವಾದಗಳನ್ನು, ನೀರಾವರಿಯನ್ನು ಕೈಗೆ ತೆಗೆದುಕೊಂಡಿವೆ ಅವು ಹೆಂಡಕುಡಕ ಸರ್ಕಾರಗಳು ಎಂದು ಹೇಳುವ ಬದಲು ಈ ರೀತಿ ಹೇಳುತ್ತಿದ್ದೇನೆ. ಅದಕ್ಕೆ ಅಣ್ಣತಮ್ಮಂದಿರ ಉದಾಹರಣೆ ಹೇಳುತ್ತೇನೆ. A.P.Government have really done much much better than what our Governments have done . ಈಗಲಾದರೂ ನೀವು ಏನು ತಪ್ಪು ಮಾಡುತ್ತಾ ಇದ್ದೀರಿ, ಅದನ್ನು ಸರಿಪಡಿಸಿಕೊಂಡು ಕಾನೂನು ಏನಿದೆ, ಅದರ ಚೌಕಟ್ಟಿನಲ್ಲಿ ಸರಿಯಾದ ನಿಲುವು ರೂಪಿಸಿಕೊಳ್ಳಬೇಕು. You have to tell to the whole world that nobody can take away the rights of water of the farmers of Karnataka, not even a Tribunal, not even a judiciary. ನಾನು ಯಾರಿಗೂ ಕೊಡುವುದಕ್ಕೆ ತಯಾರಾಗಿಲ್ಲ; ನಾನು ಕರ್ನಾಟಕದ ರೈತ. ನನ್ನ ಪರವಾಗಿ ನೀವು ಸರ್ಕಾರ ನಡೆಸುವವರು ಹೇಳಬೇಕು. ಇಡೀ ಪ್ರಪಂಚಕ್ಕೆ ಹೇಳಬೇಕು. This is the law of waters. ಈಗಲಾದರೂ ದಯಮಾಡಿ ಹೇಳುತ್ತೀರಾ? ನೀವು ಮುಗಿಸುತ್ತಿರೋ ಬಿಡುತ್ತಿರೋ; ನೀವು ಮುಗಿಸುವುದಿಲ್ಲ ನನಗೆ ಗೊತ್ತಿದೆ. ನಾನು ಉತ್ತರ ಕರ್ನಾಟಕದ ರೈತರ ಹಾಗೂ ಗುಲ್ಬರ್ಗ ವಿಭಾಗದ ರೈತರ ಪರವಾಗಿ ವಿಶ್ವಾಸದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈಗಲಾದರೂ ಈವೊಂದು ಹೇಳಿಕೆಯನ್ನು ಸ್ಪಷ್ಟವಾಗಿ ಹೇಳಿ. ಯಾವುದೇ ನ್ಯಾಯಮಂಡಳಿಯಾಗಲೀ, ಯಾವುದೇ ನ್ಯಾಯಾಲಯವಾಗಲೀ ಹಂಚಿಕೊಂಡಿರತಕ್ಕ ನೀರಿನ ಹಕ್ಕನ್ನು ಮೊಟಕು ಮಾಡುವುದಕ್ಕೆ ಅಧಿಕಾರವಿಲ್ಲವೆಂದು ಅಷ್ಟು ಹೇಳಿ ಸಾಕು. ನೀವೇನು 2 ಸಾವಿರದ ಇಸವಿಯೊಳಗೆ ನೀರಾವರಿ ಯೋಜನೆಗಳನ್ನು ಮುಗಿಸುತ್ತೇವೆಂದು ಹೇಳುತ್ತೀರಲ್ಲಾ, ಅದರಲ್ಲಿ ನಮಗೆ ಭರವಸೆಯಿಲ್ಲ. ಆ ಭರವಸೆಯನ್ನು ಇಟ್ಟುಕೊಂಡಿಲ್ಲ, ನಮಗೆ ವಿಶ್ವಾಸವಿಲ್ಲ. ಆ ಕಾರಣ ಮುಖ್ಯವಾಗಿ ಈ ಎರಡೂ ಹೇಳಿಕೆಗಳನ್ನು ತಾವು ಕೊಡಿರಿ ಸಾಕು. ಈ ಎರಡು ವಿಷಯಗಳ ಬಗ್ಗೆ ಭಾರತೀಯ ಜನತಾ ಪಾರ್ಟಿಯವರು ಮಾತನಾಡಲಿಲ್ಲ. ಅದಕ್ಕೆ ಕಾರಣ ಇಷ್ಟೆ, ಮಧ್ಯಪ್ರದೇಶದಲ್ಲಿ ಮತ್ತೆ ಅಧಿಕಾರಕ್ಕೆ ಬರಬಹುದು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೆ ಅವರು. ಆ ಕಾರಣದಿಂದ ಕಾವೇರಿ ಉಗಮಸ್ಥಾನ ಭಾಗಮಂಡಲದಲ್ಲಿ ಪ್ರಾರಂಭವಾಗಿದ್ದು ಮಡಿಕೇರಿಯಲ್ಲಿ ನಿಂತುಹೋಯಿತು. ಏಕೆಂದರೆ ಅವರಿಗೆ ಅಲ್ಲಿಂದ ಆದೇಶ ಬಂತು. ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಜಲ ವಿವಾದಗಳು ಇರುವಂತಹ ರಾಜ್ಯ ಮಧ್ಯಪ್ರದೇಶ. ಆ ಕಾರಣ ಅವರು ರಾಷ್ಟ್ರೀಯ ಪಕ್ಷ ಅಲ್ಲ; ಇಡೀ ದೇಶಕ್ಕೋಸ್ಕರ ಕೆಲಸ ಮಾಡುವವರು; ಆ ಕಾರಣ ಅವರು ನ್ಯಾಯಮಂಡಳಿ ಬಗ್ಗೆ ನಿಲುವು ತೆಗೆದುಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ಸ್ವತಃ ಪ್ರೊ: ನಂಜುಂಡಸ್ವಾಮಿಯವರನ್ನು ಕರೆದುಕೊಂಡು ರಾಜ್ಯಸರ್ಕಾರ ಏನು ದೆಹಲಿಗೆ ಹೋಗಿತ್ತು, ಆ ನಿಯೋಗದಲ್ಲಿ ನಾನೂ ಕೂಡ ಭಾಗವಹಿಸಿದ್ದೆ. ಕಾವೇರಿ ವಿಚಾರದಲ್ಲಿ ನಾವು ದೆಹಲಿಗೆ ಹೋದಾಗ, ಆ ನಿಯೋಗದಲ್ಲಿ ಹೋದಂತಹ ಪ್ರತಿಯೊಬ್ಬ ಸದಸ್ಯರಿಗೂ ತುಂಬಾ ಸ್ಪಷ್ಟವಾದ ಸಮಾಧಾನವಾದ ಅಂಶವೆಂದರೆ ನಮ್ಮ ರಾಷ್ಟ್ರದ ನಾಯಕರಾದ ಶ್ರೀಮಾನ್ ಎಲ್.ಕೆ.ಅಧ್ವಾನಿಯವರನ್ನು ಭೇಟಿ ಮಾಡಿದಾಗ ಅವರು ಸ್ಪಷ್ಟವಾಗಿ ಹೇಳಿದರು. ಏನೆಂದರೆ ರಾಷ್ಟ್ರೀಯ ಜಲನೀತಿ ಇನ್ನೂ ಮಾಡಿಲ್ಲ. ಅದಕ್ಕೋಸ್ಕರ ಈ ಸಮಸ್ಯೆ ಹಾಗೆಯೇ ಉಳಿದಿದೆ. ರಾಷ್ಟ್ರೀಯ ಜಲನೀತಿಯಾಗಬೇಕು ಎಂದು

ಹೇಳಿದರು. ಪ್ರೊ.ನಂಜುಂಡ ಸ್ವಾಮಿಯವರಿಗೆ ಒಂದು ಅಭ್ಯಾಸ ಇದೆ. ಅವರು ಮಾತ್ರ ಸ್ಪಷ್ಟವಾದ ನೇರವಾಗಿ ರಾಜಕೀಯ ಮಾಡುತ್ತಿರುವುದು, ಬೇರೆ ಯಾರೂ ಮಾಡುತ್ತಿಲ್ಲ ಅಂತ. ರಾಷ್ಟ್ರೀಯ ರಾಜಕೀಯ ಪಕ್ಷಗಳನ್ನು ಮಾತ್ರ ಅವರು ಟೀಕೆ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದ ರೈತರ ಹೆಸರನ್ನು ಬಳಸಿಕೊಂಡು ರಾಜಕೀಯ ಮಾಡುವಂಥ ಜನ, ನಂಜುಂಡಸ್ವಾಮಿಯವರೆ ಎಂಬುದು ತಮಗೆ ಗೊತ್ತಿದೆ. ನಾನು ಏಕೆ ಈ ಅಂಶವನ್ನು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ ಎಂದರೆ ಯಾವುದೇ ವಿಚಾರದಲ್ಲಿ ಭಾರತೀಯ ಜನತಾಪಾರ್ಟಿ ನೀತಿ ನಿಯಮಗಳಲ್ಲಿ ಹಿಂದೆ ಬಿದ್ದಿಲ್ಲ. ಇದು ಅವರಿಗೆ ಕೂಡ ಗೊತ್ತಿದೆ. ಆದರೂ ಕೂಡ ಅವರು ಮಾತ್ರ ಸತ್ಯಹರಿಶ್ಚಂದ್ರರು, ಬೇರೆಯವರೆಲ್ಲರೂ ಕೂಡ ಈ ಸಮಾಜದಲ್ಲಿ ಏನೋ ಎನ್ನುವ ರೀತಿಯಲ್ಲಿ ರಾಜಕೀಯ ಮಾಡುತ್ತಿದ್ದಾರೆ; ಕಾಂಗ್ರೆಸ್ ಮತ್ತು ಜನತಾದಳ ಎರಡಕ್ಕೆ ಟೀಕೆ ಮಾಡಿದರೆ ಸಾಕಾಗಲಿಕ್ಕಿಲ್ಲ, ಭಾರತೀಯ ಜನತಾ ಪಕ್ಷವನ್ನೂ ಟೀಕೆ ಮಾಡಬೇಕು ಎನ್ನುವ ನೆವದಲ್ಲಿ ಮಧ್ಯಪ್ರದೇಶವನ್ನು ಗುರುತುಮಾಡಿ ಹೇಳುತ್ತಿದ್ದಾರೆಯೇ ವಿನಹ ಬೇರೆ ಏನೂ ಇಲ್ಲ ಅಂತ ಹೇಳಿ ನಾನು ಸ್ಪಷ್ಟವಾಗಿ ನಮ್ಮ ನಿಲುವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪ್ರೊ : ಎಂ.ಡಿ.ನಂಜುಂಡಸ್ವಾಮಿ :– ಒಂದು ರಾಷ್ಟ್ರೀಯ ರಾಜಕೀಯ ಪಕ್ಷದ ಸದಸ್ಯರಾದರೆ ಯಾವರೀತಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೆ ಎನ್ನುವುದು ಅವರಿಗೆ ಗೊತ್ತು. ಅದನ್ನು ಮಾತ್ರ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕೈ, ಬಾಯಿ ಯಾವರೀತಿ ಅದಕ್ಕೆ limitation ಬರುತ್ತದೆ. We get handicapped when we become Members of so-called national political parties. That is what I was trying to say. That is all.

ಇದರ ಬಗ್ಗೆ ನಾನೇನೂ ಜಾಸ್ತಿ ಚರ್ಚೆ ಮಾಡುವುದಿಲ್ಲ. ಯಾವ ನಮೂನೆಯ ರಾಜಕಾರಣ ಮಾಡುತ್ತಾರೆ. ಅದಕ್ಕೆ ತಕ್ಕಂತೆ ಪ್ರತಿಫಲ ಅವರಿಗೆ ಸಿಗುತ್ತದೆ. ಆದರೆ ನನ್ನದು ಒಂದೇ ಒಂದು ವಿನಂತಿ. ಈಗಲಾದರೂ ಯಾವುದೇ ಮಾರ್ಗಸೂಚಿ ಇಲ್ಲದೇ ಇರುವಂಥ ನ್ಯಾಯ ಮಂಡಳಿಗಳ ತೀರ್ಪಿನ ಬಗ್ಗೆ ಒಂದು ಸ್ಪಷ್ಟ ನೀತಿಯನ್ನು ತೆಗೆದಕೊಳ್ಳಬೇಕು. ಒಬ್ಬ ರೈತನಾಗಿ ನಾನು ತಮ್ಮನ್ನು ಕೇಳುತ್ತಿದ್ದೇನೆ. ಏಕೆಂದರೆ ನನ್ನ ಹಕ್ಕನ್ನು ಮೊಟಕು ಮಾಡುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. ಆದಕಾರಣ, ನನ್ನ ಪರವಾಗಿ ಅಷ್ಟನ್ನು ತಾವು ಹೇಳಿದರೆ ಸಾಕು. ನಮಸ್ಕಾರ.

ಉಪಾಧ್ಯಕ್ಷರು :– ಈಗ ಸನ್ಮಾನ್ಯ ಉಪಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿ) :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆ ಮಂಡಿಸಿದ ಈ ನಿಲುವಳಿ ಸೂಚನೆ ಮೇಲೆ ಸದನದ ಎಲ್ಲಾ ಪಕ್ಷಗಳಿಂದ ಬಂದ ಭಾಷಣಗಳನ್ನು ಅತ್ಯಂತ ಗಮನವಿಟ್ಟು ನಾನು ಕೇಳಿದ್ದೇನೆ. ಎಲ್ಲಾ ಭಾಷಣಗಳ ಮೂಲ ವಾಹಿನಿ ಏನೆಂದರೆ ಕಾವೇರಿ ನದಿ ಅಥವಾ ಕೃಷ್ಣಾ ನದಿ, ಇವೆರಡರ ಪಾತ್ರದಲ್ಲಿರುವ ಕನ್ನಡ ನಾಡಿನ ರೈತಾಪಿ ಜನಗಳಿಗೆ ಯಾವ ಅನ್ಯಾಯವೂ ಆಗದಂತೆ ತಡೆಯಬೇಕಾಗಿರುವ ಒಂದು ಸ್ಥಿರ ನಿಲುವನ್ನು ರೂಪಣೆ ಮಾಡಬೇಕು ಎನ್ನತಕ್ಕಂಥಾದ್ದು ಮತ್ತು ನಮ್ಮ ನೀರಿನ ಹಕ್ಕನ್ನು ನಾವು ಸಾರೋದ್ಧಾರ ಉಳಿಸಿಕೊಳ್ಳಬೇಕು ಎನ್ನತಕ್ಕಂಥಾದ್ದು ಪ್ರತಿಯೊಬ್ಬರ ಭಾಷಣದಲ್ಲೂ ಎದ್ದುಕಂಡ ಕಳಕಳಿ, ಆಸ್ಥೆ ಮತ್ತು ಸ್ಪಷ್ಟ ಅಭಿಪ್ರಾಯ .

ಮಾನ್ಯ ವಿರೋಧಪಕ್ಷಗಳ ನಾಯಕರುಗಳು, ಮತ್ತಿತರರು ಹೇಳಿದಹಾಗೆ, ಇದು ನಿನ್ನೆಮೊನ್ನೆಯ ಸಮಸ್ಯೆ ಅಲ್ಲ. ಈ ಸಮಸ್ಯೆ ಶತಮಾನದಷ್ಟು ವಯಸ್ಸಾಗಿರತಕ್ಕ ಸಮಸ್ಯೆ. ಈ ಸಮಸ್ಯೆ ಬರುಬರುತ್ತಾ

ಬಿಗಡಾಯಿಸಿರತಕ್ಕ ಸಮಸ್ಯೆ. ಒಂದು ಕಾಲದಲ್ಲಿ ಈ ಸಮಸ್ಯೆಗೆ ಎರಡು ರಾಜ್ಯಗಳ, ರಾಜಕೀಯ ವ್ಯಕ್ತಿಗಳ ನೇರ ಮಾತುಕತೆಗಳಿಂದ ಒಂದು ಪರಿಹಾರ ಸಿಗಬಹುದು ಎನ್ನುವ ಹಂತವನ್ನು ಮುಟ್ಟಿದ ಮರು ಘಳಿಗೆಯಲ್ಲಿಯೇ, ಅದು ನಮ್ಮ ಕೈ ಜಾರಿ ಹೋಯಿತು. 1978-79ನೇ ಇಸವಿಯಲ್ಲಿ ದಿವಂಗತ ದೇವರಾಜ ಅರಸುರವರು ಮುಖ್ಯ ಮಂತ್ರಿಗಳಾಗಿದ್ದಾಗ, ಅಂದಿನ ತಮಿಳುನಾಡಿನ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿದ್ದನ್ನು, ಅವರು ನನಗೆ ಅಧಿಕಾರದಿಂದ ವಿರಮಿಸಿದಾಗ ಹೇಳುತ್ತಿದ್ದರು. ಒಂದು ತೀರ್ಮಾನ ಆಗಿಯೇ ಹೋಗಿತ್ತು. ಅದರ ಫಾರ್ಮಲ್ ಅನೌನ್ಸ್‌ಮೆಂಟ್ ಆಗಬೇಕಾಗಿತ್ತು. ಅಷ್ಟರಲ್ಲಿ ನನ್ನ ಅಧಿಕಾರ ಹೋಯಿತು ಎಂದು ಹೇಳುತ್ತಿದ್ದರು. ಈಗತಾನೇ ಮತ್ತೊಬ್ಬ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಸದನದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿದರು. ಅವರೂ ಕೂಡ ಅಂದಿನ ಮುಖ್ಯಮಂತ್ರಿಗಳಾಗಿದ್ದಂಥ ಗತಿಸಿಹೋದ ಎಂ.ಜಿ.ಆರ್‌ರವರ ನಾಯಕತ್ವದಲ್ಲಿ, ಇನ್ನು 15 ದಿವಸದೊಳಗೆ ಮತ್ತೆ ತಮ್ಮನ್ನು ಭೇಟಿಯಾಗಿ, ಕರೆಸಿ, ಮಾತುಕತೆ ಮಾಡಿ, ಈ ಕಾವೇರಿ ವಿವಾದಕ್ಕೆ ಒಂದು ಪೂರ್ಣ ವಿರಾಮವನ್ನು ಹಾಕುತ್ತೇವೆ ಎನ್ನತಕ್ಕ ಆಶ್ವಾಸನೆ ಕೊಟ್ಟು, 15ದಿವಸಗಳಲ್ಲಿ ಅವರು ಆಸ್ಪತ್ರೆಯನ್ನು ಸೇರಬೇಕಾಗಿ ಬಂದ ವಿಷಯವನ್ನು ಸದನದ ಗಮನಕ್ಕೆ ತಂದಿದ್ದಾರೆ. ನಂತರ ಬಂದ ಸರ್ಕಾರಗಳು ಎಲ್ಲವೂ ಕೂಡ ತಮಿಳುನಾಡಿನ ರೈತರ ವಿರುದ್ಧವಾಗಿ ನಾವು ಯಾವ ಧ್ವನಿಯನ್ನೂ ಎತ್ತಲಿಲ್ಲ; ನಮ್ಮ ಧ್ವನಿ ಎಲ್ಲವೂ ಕೂಡ ಕರ್ನಾಟಕ ರಾಜ್ಯದ ರೈತರ ಹಿತಾಸಕ್ತಿಗಳನ್ನು ಗಮನಿಸಿ, ಆ ಹಿತಾಸಕ್ತಿಗಳನ್ನು ಕಾಪಾಡುವ ದೃಷ್ಟಿಯಲ್ಲಿ ಏನೇನು ಚೌಕಟ್ಟುಗಳನ್ನು ನಾವು ನಿರ್ಮಾಣ ಮಾಡಬೇಕೋ ಅವುಗಳನ್ನು ನಿರ್ಮಾಣ ಮಾಡಿಯೇ ಮಾಡಬೇಕಾಗುತ್ತದೆ ಎನ್ನತಕ್ಕಂಥ ನಿಲುವನ್ನು ತೆಗೆದುಕೊಂಡು ತಾಳಿಕೊಂಡು ಬಂದಿವೆ. ನಿನ್ನೆಯಿಂದ ಕಳೆದ ಮೂರು ವರ್ಷಗಳಲ್ಲಿ, ಈ ಕಾವೇರಿ ಜಲ ವಿವಾದದ ನಾನಾ ಪ್ರಕಾರಾಗಳಿಗೆ ಮಾನ್ಯ ಸದಸ್ಯರುಗಳು ನಮ್ಮನ್ನು ಕರೆದುಕೊಂಡು ಹೋಗಿ ಪರಿಚಯ ಮಾಡಿ ಕೊಟ್ಟಿದ್ದಾರೆ. ಆ ಮಾತುಗಳನ್ನು ನಾನು ಮತ್ತೆ ಪುನರುಚ್ಛಾರ ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ರಾಜಕೀಯ ಇಚ್ಛಾಶಕ್ತಿ ಈ ಸರ್ಕಾರಕ್ಕೆ ಇದೆಯೇ, ಕಾವೇರಿ ನದಿ ಪಾತ್ರದಲ್ಲಿರತಕ್ಕ, ಕನ್ನಡದ ಜನರ ಹಿತರಕ್ಷಣೆಯನ್ನು ಮಾಡುವ ರಾಜಕೀಯ ಇಚ್ಛಾಶಕ್ತಿ ಈ ಸರ್ಕಾರಕ್ಕೆ ಇದೆಯೇ ಎನ್ನುವ ಪ್ರಶ್ನೆಯನ್ನು ಮೇಲಿಂದ ಮೇಲೆ, ಮೇಲಿಂದ ಮೇಲೆ ನಮ್ಮನ್ನು ಚುಚ್ಚತಕ್ಕ ರೀತಿಯಲ್ಲಿ ಮಾನ್ಯಸದಸ್ಯರು ಹಾಕಿದ್ದಾರೆ.

ನಾವು ಸ್ಪಷ್ಟವಾಗಿ ಪ್ರತಿ ಅವಕಾಶ ಸಿಕ್ಕಿದಾಗಲೆಲ್ಲಾ ಸರ್ಕಾರದ ರೀತಿಯನ್ನು ಸರ್ಕಾರದ ನೀತಿಯನ್ನು ದೃಢೀಕರಿಸಿದ್ದೇವೆ. ಕನ್ನಡ ನಾಡಿನ ಹಿತಾಸಕ್ತಿಯನ್ನು ಬಲಿ ತೆಗೆದುಕೊಳ್ಳತಕ್ಕಂಥ ಸರ್ಕಾರ ಇದಲ್ಲ. ಕನ್ನಡ ನಾಡಿನ ಹಿತಾಸಕ್ತಿಯನ್ನು ರಕ್ಷಣೆ ಮಾಡತಕ್ಕಂಥ ಸರ್ಕಾರ ಇದು ಎಂದು ಈಗಾಗಲೇ ಹಲವಾರು ಭಾರಿ ಹೇಳಿದ್ದೇವೆ. ಹೇಗೆ ರಕ್ಷಣೆ ಮಾಡುತ್ತೇವೆ ಅಥವಾ ನಿಮ್ಮ ದೃಷ್ಟಿಯಲ್ಲಿ ನಾವು ರಕ್ಷಣೆ ಮಾಡುವುದರಲ್ಲಿ ಹೇಗೆ ವಿಫಲರಾಗಬಲ್ಲೆವು ಎನ್ನುವ ಬಗ್ಗೆ ಜಿಜ್ಞಾಸೆಗಳು ಬರತಕ್ಕಂಥದ್ದು ಸಹಜವೇ. ಒಂದೇ ವಿಚಾರವನ್ನು ನಾನಾ ದೃಷ್ಟಿ ಕೋನಗಳಿಂದ ನಾವು ವಿವೇಚನೆ ಮಾಡಬಹುದು; ವಿಶ್ಲೇಷಣೆ ಮಾಡಬಹುದು. ಈಗಲೇ 3 ದೃಷ್ಟಿಕೋನಗಳು ನನಗೆ ಪರಿಚಯವಾಯಿತು. ಒಂದು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಅವರ ದೃಷ್ಟಿಕೋನವನ್ನು ಹೇಳಿದರು. ಪ್ರೊ.ನಂಜುಂಡಸ್ವಾಮಿಯವರು ರೈತರ ದೃಷ್ಟಿಕೋನವನ್ನು ಹೇಳಿದರು. ಬಿ.ಜೆ.ಪಿ.ಯ ಈಶ್ವರಪ್ಪನವರು ಅವರ ದೃಷ್ಟಿಕೋನವನ್ನು ಹೇಳಿದರು. ಆದರೆ ಈ ದೃಷ್ಟಿಕೋನಗಳಲ್ಲಿ ನನ್ನ ಮಟ್ಟಿಗೆ ಯಾವ

ವ್ಯತ್ಯಾಸಗಳು ಕಾಣುತ್ತಿಲ್ಲ. ಮೂಲಭೂತವಾಗಿ ಈ ದೃಷ್ಟಿಕೋನಗಳನ್ನೆಲ್ಲಾ ಬಂಧಿಸತಕ್ಕಂಥಾದ್ದು ಕರ್ನಾಟಕದ ಹಿತ. ರೈತರ ಹಿತ. ಆ ರೈತರ ಹಿತವನ್ನು ದೇಶಪಾಂಡೆಯವರು ಕಾಯಬೇಕೆಂದು ಹೇಳುತ್ತಾರೆ. ಸಿಂಧ್ಯಾರವರು ಕಾಯಬೇಕೆಂದು ಹೇಳುತ್ತಾರೆ. ಯಡಿಯೂರಪ್ಪನವರು ಕಾಯಬೇಕೆಂದು ಹೇಳುತ್ತಿದ್ದಾರೆ. ನಂಜುಂಡಸ್ವಾಮಿಯವರೂ ಸಹ ಕಾಯಬೇಕೆಂದು ಹೇಳುತ್ತಿದ್ದಾರೆ. ಆತ್ಮಾನಂದರವರು ಕಾಯಬೇಕೆಂದು ಹೇಳುತ್ತಿದ್ದಾರೆ. ವೈ.ಕೆ.ರಾಮಯ್ಯನವರು ಕಾಯಬೇಕೆಂದು ಹೇಳುತ್ತಾ ಇದ್ದಾರೆ. ಈ ಚರ್ಚೆಗೆ ಇವತ್ತು ಹೆಚ್ಚು ಒತ್ತು ಏಕೆ ಬಂತು ಅಂದರೆ ಇತ್ತೀಚಿನ ವಿದ್ಯಮಾನಗಳು. ಅದರಲ್ಲಿ ಬಹಳ ಪ್ರಧಾನವಾಗಿರತಕ್ಕಂಥಾದ್ದು ಅಂದರೆ ನಿಸರ್ಗದ ಕೋಪ. ಕಳೆದ ವರ್ಷ ಇಲ್ಲಿ ಈ ಚರ್ಚೆ ನಡೆಯಲಿಲ್ಲ. ಅದರ ಹಿಂದಿನವರ್ಷ ಇದರ ಬಗ್ಗೆ ಚರ್ಚೆ ನಡೆಯಲಿಲ್ಲ. ಹೇರಳವಾಗಿ ಮಳೆ ಬಂದು ಎಲ್ಲಾ ಕೆರೆಕಟ್ಟೆಗಳು ತುಂಬಿ ಶೇಖರಿಸಲಾಗದೆ ಇರುವಷ್ಟು ಜಲ ಕಾವೇರಿಯಲ್ಲಿ ಹರಿದು ಜಯಲಲಿತಾರವರ ಮಡಿಲು ತುಂಬಿ ಅನಂತರ ಸಮುದ್ರದ ಪಾಲಾಗಿ ಹೋಯಿತು. ಆದ್ದರಿಂದ ಈ ಚರ್ಚೆ ಆಗಲಿಲ್ಲ. ಆದರೆ ಈ ವರ್ಷ ಈ ಚರ್ಚೆ ಏಕೆ ಆಗಬೇಕಾಗಿ ಬಂತು ಅಂದರೆ ನಿಸರ್ಗ ಮುನಿದಿದೆ; ಮಳೆ ಈ ಕ್ಯಾಚ್‌ಮೆಂಟ್ ಎರಿಯಾಗಳಲ್ಲಿ ಆಗಲಿಲ್ಲ. ಆದ್ದರಿಂದ ವಿಶೇಷವಾದಂತಹ ಪರಿಸ್ಥಿತಿ ಉದ್ಭವವಾಯಿತು. ನೆರೆ ರಾಜ್ಯದ ಒಬ್ಬ ಮುಖ್ಯಮಂತ್ರಿ ಅನಿರ್ದಿಷ್ಟಕಾಲ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದರೆ ನೀವು ಏಕೆ ವಿರೋಧ ಮಾಡಲಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ಮಾನ್ಯ ವಿರೋಧಪಕ್ಷದ ನಾಯಕರು ಹಾಕಿದರು. ಹಾಗೆಯೇ ಇನ್ನೂ ಕೆಲವು ಸ್ನೇಹಿತರು ನಮ್ಮ ಸರ್ಕಾರವನ್ನು ನೀವು ಏಕೆ ಪ್ರತಿಕರಿಸಲಿಲ್ಲ ಹಾಗೆ ಅಂತ ಕೇಳಿದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಇದನ್ನು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ, ಏಕೆಂದರೆ, ನಮ್ಮದು ಒಂದು ಫೆಡರಲ್ ವ್ಯವಸ್ಥೆಯ ರಾಜ್ಯಾಂಗ. ನಮ್ಮ ರಾಜ್ಯದ ಮುಖ್ಯಮಂತ್ರಿ ಹೇಗೆ ಕಾರ್ಯ ನಿರ್ವಹಣೆ ಮಾಡಬೇಕು ಎನ್ನುವ ಬಗ್ಗೆ ನಾನು ಮತ್ತೊಬ್ಬ ರಾಜ್ಯದ ಮುಖ್ಯಮಂತ್ರಿಯಿಂದಲೇ ಆಗಲಿ ಮತ್ತೊಂದು ರಾಜ್ಯದ ಶಾಸನಸಭೆಯಿಂದಲೇ ಆಗಲಿ ಯಾವ ನಿರ್ದೇಶನವನ್ನು ಆಗಲಿ ಯಾವ ಟೀಕೆಯನ್ನು ಆಗಲಿ ನಾನು ಎದುರು ನೋಡುವುದಿಲ್ಲ. ಅಂತಹ ಟೀಕೆ ಬಂದರೆ ಅದಕ್ಕೆ ನಾನು ಸೊಪ್ಪನ್ನೂ ಕೂಡ ಹಾಕುವುದಿಲ್ಲ. ಅದೇ ಸ್ವಾತಂತ್ರ್ಯ ತಮಿಳುನಾಡಿನ ಮುಖ್ಯಮಂತ್ರಿಗೆ ಇದೆ ಎನ್ನತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಆ ಸ್ವಾತಂತ್ರ್ಯವನ್ನು ಅವರು ಹೇಗೆ ಉಪಯೋಗಿಸುತ್ತಾರೆ ಎನ್ನತಕ್ಕಂಥಾದ್ದು ಆ ತಮಿಳುನಾಡಿನ ಮುಖ್ಯಮಂತ್ರಿಯವರ ವಿವೇಚನಾ ಶಕ್ತಿಗೆ ಬಿಡುತ್ತೇನೆಯೇ ಹೊರತು ಅವರನ್ನು ಟೀಕೆ ಮಾಡತಕ್ಕಂಥ ಗೋಜಿಗೆ ನಾನು ಹೋಗಲಿಲ್ಲ. ನಮ್ಮ ಮುಖ್ಯಮಂತ್ರಿಗಳೂ ಹೋಗಲಿಲ; ನಾವಾದರೂ ಹೇಳಿದ್ದು ನಮ್ಮ ಮಧುರ ಭಾಂದವ್ಯ ಉಂಟಾಗಬೇಕು ಎನ್ನುವ ದೃಷ್ಟಿಯಿಂದ ಮತ್ತೊಂದು ರಾಜ್ಯದ ಮುಖ್ಯಮಂತ್ರಿ ನಿರಶನ ವ್ರತವನ್ನು ಆರಂಭ ಮಾಡಿರತಕ್ಕಂಥಾದ್ದು. ಆದಷ್ಟು ಬೇಗ ಅವರು ಆ ನಿರಶನ ವ್ರತವನ್ನು ಬಿಡಬೇಕು ಎನ್ನತಕ್ಕಂಥ ಸಂದೇಶ ಎನ್ನತಕ್ಕಂಥಮಾತು ನಮ್ಮ ಹೃದಯದ ಮೇಲೆ ಮುಟ್ಟಿತು. ಒಂದು ಅವರು ಮುಖ್ಯಮಂತ್ರಿ; ಎರಡು ಒಂದು ಹೆಣ್ಣು ಮಗಳು. ಆ ದೃಷ್ಟಿಯಿಂದ ನಾವು ಅವರನ್ನು ಟೀಕೆ ಮಾಡಲಿಲ್ಲ ಮತ್ತು ಟೀಕೆ ಮಾಡತಕ್ಕಂಥ ಜಾಯಮಾನವೂ ಕೂಡ ನಮ್ಮದಲ್ಲ. ಈಗ ಶುಕ್ಲಾರವರು ಏಕೆ ಬಂದರು, ಅದಕ್ಕೆ ಮೊದಲು ರೆಡ್ಡಿಯವರು ಏಕೆ ಬಂದರು ಎನ್ನತಕ್ಕಂಥ ಪ್ರಶ್ನೆ ನೀವು ಕೇಳಬೇಕಾಗಿರತಕ್ಕಂಥಾದ್ದೆ. ಆದಕ್ಕೆ ನಾನು ಉತ್ತರ ಕೊಡಬೇಕಾಗಿರತಕ್ಕಂಥಾದ್ದೆ. ಅವರು ಏಕೆ ಬಂದರು, ನಮ್ಮ ಆಹ್ವಾನದ ಮೇಲೆ ಅವರು ಬರಲಿಲ್ಲ. ಇದನ್ನು ಸ್ಪಷ್ಟಪಡಿಸುತ್ತಾ ಇದ್ದೇನೆ.

ಮುಖ್ಯಮಂತ್ರಿಯವರು ಆಗಲಿ, ನಾನಾಗಲಿ ಕೇಂದ್ರ ಜಲಸಂಪನ್ಮೂಲ ಅಧ್ಯಕ್ಷ ಸೆಂಟ್ರಲ್ ವಾಟರ್ ಕಮೀಷನ್ ಅಧ್ಯಕ್ಷ ಅವರಿಗಾಗಲಿ ಅಥವಾ ಕೇಂದ್ರ ನೀರಾವರಿ ಸಂಪನ್ಮೂಲ ಸಚಿವರಾಗಲಿ ನೀವು ಬೆಂಗಳೂರಿಗೆ ಬನ್ನಿ ಅಂತ ನಾವು ಆಹ್ವಾನ ಕೊಡಲಿಲ್ಲ. ಆದರೆ ನಾವು ಬೆಂಗಳೂರಿಗೆ ಬರುತ್ತೇವೆಂದು ಹೇಳಿ ನಮಗೆ ಸಂದೇಶ ಕಳುಹಿಸಿದರೆ ನಾವು ನೀವು ಬರಬೇಡಿ ಅಂತ ಹೇಳಲಿಲ್ಲ. ಅದರಿಂದ ನಮ್ಮದು ತಪ್ಪಾಗಿದೆ ಅಂತ ಹೇಳಿದರೆ ಆ ತಪ್ಪನ್ನು ನಾನು ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಆದರೆ ಅವರು ಬಂದಾಗ ಏನು ನಡೆಯಿತು; ಸೆಂಟ್ರಲ್ ವಾಟರ್ ಕಮೀಷನ್ ಅಧ್ಯಕ್ಷರು ಬಂದರು. ನಮ್ಮ ಮುಖ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿದರು. ಮುಖ್ಯ ಕಾರ್ಯದರ್ಶಿಗಳು ರಾಜ್ಯ ಸರ್ಕಾರ ಈಗಾಗಲೇ ಸಾರಿರತಕ್ಕಂಥ ನೀತಿಯನ್ನೇ ಧೋರಣೆಯನ್ನೇ, ಪುನರುಚ್ಚರಿಸಿ ನೀವು ಮದ್ರಾಸ್ಸಿಗೆ ಹೋಗಿ ಅಂತ ಕಳುಹಿಸಿಕೊಟ್ಟರು. ಆದಾದ ನಂತರ ಮಾನ್ಯ ಶುಕ್ಲಾರವರು ಬಂದರು. ಆಹೋ ರಾತ್ರಿ ಬಂದರು ಅಂತ ಹೇಳಿದರು. ಅವರು ಬೆಳಿಗ್ಗೆ ಬಂದರೂ ನಾವು ಸ್ವಾಗತ ಮಾಡಬೇಕಾಗುತ್ತದೆ. ಮಧ್ಯಾಹ್ನಬಂದರೂ ನಾವು ಸ್ವಾಗತ ಮಾಡಬೇಕಾಗುತ್ತದೆ. ಹಾಗೆಯೇ ಅವರು ಆಹೋ ರಾತ್ರಿ 12-00 ಗಂಟೆಗೋ ಒಂದು ಗಂಟೆಗೋ ಬಂದರು. ನಾವು ಅವರನ್ನು ಸ್ವಾಗತಿಸಿದೆವು. ಆ ನಂತರ ಕೃಷ್ಣಾ ಅತಿಥಿ ಗೃಹಕ್ಕೆ ನಾವು ಅವರನ್ನು ಕರೆದುಕೊಂಡು ಹೋದೆವು. ಅಲ್ಲಿ ಈ ಎಲ್ಲಾ ವಿಚಾರಗಳನ್ನೂ ಕೂಡ ನಾವು ಚರ್ಚೆ ಮಾಡಿದೆವು. ಅವರು ಹೇಳಿದರು, ಬಹಳ ಗಂಭೀರವಾದಂತಹ ಒಂದು ಪರಿಸ್ಥಿತಿ ಉಂಟಾಗಬಹುದು. ಆದ್ದರಿಂದ ನೀವು ಕೊಂಚ ಮಟ್ಟಿಗೆ ಅನುಸರಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲವೇ ಹಾಗೆ ಅಂತ ಕೇಳಿದರು. ನಾವು ಮಾನ್ಯ ವಿದ್ಯಾಚರಣ ಶುಕ್ಲಾರವರಿಗೆ, ಕೇಂದ್ರ ವಾಟರ್‌ರಿಸೋರ್ಸಸ್ ಮಂತ್ರಿಯವರಿಗೆ, ಸ್ಪಷ್ಟವಾಗಿ ತಿಳಿಸಿದ್ದೇವೆ. ನಾವು ಏನು ನಿಲುವನ್ನು ತೆಗೆದುಕೊಂಡಿದ್ದೇವೆ ಆ ನಿಲುವಿನಲ್ಲಿ ಯಾವ ಬದಲಾವಣೆಯನ್ನೂ ಕೂಡ ನೀವು ಅಪೇಕ್ಷೆ ಮಾಡಬೇಡಿ, ಏಕೆಂದರೆ ಇದು ಕರ್ನಾಟಕ ರಾಜ್ಯದ ಜನಗಳ ಅತ್ಯಂತ ತೀಕ್ಷ್ಣವಾದಂತಹ ಬಾವುಕತೆಗೆ ಒಳಗಾಗಿರತಕ್ಕಂಥ ಸಮಸ್ಯೆ ಇದು ಮತ್ತು ಇದರ ಮೇಲೆ ನಾವು ಯಾವುದೇ ನಿರ್ಣಯ ತೆಗೆದುಕೊಂಡರೂ ಕೂಡ ಆ ನಿರ್ಣಯಕ್ಕೆ ನಾವು ಜವಾಬ್ದಾರರಾಗುತ್ತೇವೆ. ಮತ್ತು ಆ ನಿರ್ಣಯಕ್ಕೆ ನಾವು ಅಕೌಂಟಬಲ್ ಆಗುತ್ತೇವೆ; ನಾಲ್ಕೂವರೆ ಕೋಟಿ ಕನ್ನಡ ಜನಗಳ ಮುಂದೆ; ಆದ್ದರಿಂದ ಇದರ ಬಗ್ಗೆ ನಾವು ಯಾವುದೇ ವಿಧವಾದಂತಹ ರಿಯಾಯಿತಿ ಕೊಡತಕ್ಕಂಥಾದ್ದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥಾದ್ದನ್ನು ಸ್ಪಷ್ಟಮಾಡಿದೆವು. ಈ ಮಧ್ಯೆ ಮಾನ್ಯ ಶುಕ್ಲಾರವರು ಮದ್ರಾಸಿಗೆ ನಮ್ಮಿಂದ ಬೀಳ್ಕೊಟ್ಟು ಅಲ್ಲಿಗೆ ಹೋದರು. ಅಲ್ಲಿ ಅವರ ಜೊತೆಯಲ್ಲಿ ಏನೇನು ಮಾತನಾಡಿದರೋ ನಮಗೆ ಗೊತ್ತಿಲ್ಲ. ಆದರೆ ಅಲ್ಲಿಂದ ದೂರವಾಣಿಯಮೂಲಕ ನಮಗೆ ಮಾತನಾಡಿದರು. ಆ ದೂರವಾಣಿ ಮೂಲಕ ಮಾತನಾಡಿದಾಗಲೂ ಕೂಡ ನಾವು ಬೆಂಗಳೂರಿನಲ್ಲಿ ಏನು ಸ್ಪಷ್ಟವಾಗಿ ಅವರಿಗೆ ತಿಳಿಸಿದ್ದೆವು ಅದನ್ನೇ ಪುನರುಚ್ಚಾರ ಮಾಡಿದ್ದೇವೆ. ಆದ್ದರಿಂದ ಮುಖ್ಯಮಂತ್ರಿಗಳಾಗಲಿ ಅಥವಾ ಸರ್ಕಾರದ ಮತ್ತೆ ಯಾರೇ ಆಗಲಿ ಶುಕ್ಲಾರವರಿಗೆ ಯಾವುದೋ ನಾವು ಬರವಣಿಗೆ ಮೂಲಕ ಬರೆದು ಕೊಟ್ಟಿದ್ದೇವೆ;

ಇಂಪ್ಲಿಮೆಂಟೇಷನ್ ಕಮಿಟಿ ಮಾಡಿ ಅಂತ ಹೇಳಿ ನಾವು ಅವರಿಗೆ ಹಸಿರು ನಿಶಾನಿಯನ್ನು ತೋರಿಸಿದ್ದೇವೆ ಎನ್ನತಕ್ಕಂಥ ಮಾತುಗಳು ಅಲ್ಲಲ್ಲಿ. ಅಲ್ಲಲ್ಲಿ ಏನು ಕೇಳಿ ಬರುತ್ತಿದ್ದವು, ಆ ಮಾತುಗಳಲ್ಲಿ ಯಾವ ವಿಧವಾದಂತಹ ತಿರುಳೂ ಇಲ್ಲ. ಎನ್ನತಕ್ಕಂಥಾದ್ದನ್ನು ಸ್ಪಷ್ಟವಾಗಿ ಈ ಘನವೆತ್ತ ಸಭೆಯ ಮುಂದೆ ನಾನು ದೃಢೀಕರಿಸಲು ನಿಂತಿದ್ದೇನೆ.

ಈ ಮಾತನ್ನು ತಾವು ನಂಬಲೇ ಬೇಕಾಗಿದೆ. ಕಾರಣ ಈ ಸದನದ ಈ ಭಾಗದಲ್ಲಿ ನಿಂತು ಅಥವಾ ಆ ಭಾಗದಲ್ಲಿ ನಿಂತು ನಾವು ಅಸತ್ಯವನ್ನು ನುಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದು ಹೋಗಿ ಹೇಳುವುದಾದರೆ. . .

ಶ್ರೀ ಡಿ.ಬಿ.ಚಂದ್ರೇಗೌಡ :- ಮಾನ್ಯ ಶುಕ್ಲರವರು ಹೇಳಿರತಕ್ಕಂಥ ಹೇಳಿಕೆಗಳು ಸತ್ಯವಲ್ಲ ಎನ್ನತಕ್ಕಂಥ ಮಾತನ್ನು ತಾವು ನಮ್ಮನ್ನು ನಂಬಿ ಎಂದು ಹೇಳಿದ್ದೀರಿ. ಆದರೆ ಅವರು ಸಂಸತ್‌ನಲ್ಲಿ ಹೇಳಿಕೆ ಮಾಡಿದರು, ಕನಿಷ್ಟ ತಾವು ನಮ್ಮ ರಾಜ್ಯದ ಸಂಸತ್ ಸದಸ್ಯರನ್ನು ಕರ್ನಾಟಕ ರಾಜ್ಯಕ್ಕೂ ಮತ್ತು ಶುಕ್ಲರವರಿಗೂ ಮಧ್ಯೆ ನಡೆದಿರತಕ್ಕಂಥ ಮಾತುಗಳನ್ನು, ಪತ್ರವ್ಯವಹಾರವನ್ನು ಏನು ಮಾಡಿದ್ದಾರೆ, ಅದನ್ನು ಸಂಸತ್‌ನ ಮುಂದೆ ಇಡಿ ಎಂದು ಕೇಳುವಂಥ ಒಂದು ವ್ಯವಸ್ಥೆಯನ್ನಾದರೂ ತಾವು ಮಾಡಬಹುದಾಗಿತ್ತು.

ಶ್ರೀ ಎಸ್.ಎಂ.ಕೃಷ್ಣ :- ಸಂಸತ್‌ನ ಮುಂದೆ ಈ ವಿಚಾರದ ವಿವರಗಳನ್ನು ಇಡಿ ಎಂದು ನಾನು ಕೇಳುವುದಕ್ಕೆ ಆಗುತ್ತದೆಯೇ? ಇಡಿ ಎಂದು ನಾನು ನಮ್ಮ ಸಂಸತ್ ಸದಸ್ಯರಿಗೆ ನಾವು ಹೇಳೋಣ; ನಿಮ್ಮ ಸಂಸತ್ ಸದಸ್ಯರಿಗೆ ನೀವು ಹೇಳಿ, ಅನಂತರ ಅವರು ಸಂಸತ್ ಸಭೆಯಲ್ಲಿ ಈ ವಿಚಾರವನ್ನು ಅವರು ಪ್ರಶ್ನೆ ಮಾಡಲಿ ಮತ್ತು ಅದಕ್ಕೆ ಸಮಜಾಯಿಷಿಯನ್ನು ಅವರು ಪಡೆದುಕೊಳ್ಳಲಿ. 20 ನೇ ತಾರೀಖು ಮಾನ್ಯ ಮುಖ್ಯಮಂತ್ರಿಯವರು ಶ್ರೀಮಾನ್ ಶುಕ್ಲರವರಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಆ ಕಾಗದದ ಕೊನೆಯ ಒಂದು ಪ್ಯಾರವನ್ನು ಓದಿದರೆ, ನಾವು ಏನು ನಿರ್ಧಾರವನ್ನು ತೆಗೆದುಕೊಂಡಿದ್ದೆವು ಎನ್ನತಕ್ಕಂಥಾದ್ದು ಈ ಸದನಕ್ಕೆ ಸ್ಪಷ್ಟವಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಆ ಕೊನೆಯ ಪ್ಯಾರಾವನ್ನು ಉದಾಹರಿಸಲು ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಕೋರುತ್ತೇನೆ:-

"I have consulted my colleagues in the Cabinet and we are all unanimously of the view that any such notification would be totally unacceptable here. We made this position clear to you when you spoke to Sri S.M.Krishna and to me on the phone. We would, therefore, request you to keep these aspects in mind and to find some more appropriate way of resolving the present impasse."

ಶ್ರೀ ರಾಮಕೃಷ್ಣ ಹೆಗಡೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣರವರು ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ನೀರಾವರಿ ಸಚಿವರಿಗೆ ಬರೆದ ಪತ್ರದ ಒಂದು ವಾಕ್ಯವನ್ನು ಓದಿದ್ದಾರೆ. ರೂಲ್ಸ್ ಪ್ರಕಾರ ಯಾವುದೇ ಗವರ್ನ್‌ಮೆಂಟ್‌ನ ಡಾಕ್ಯುಮೆಂಟಿನ ಯಾವುದೇ ಒಂದು ಭಾಗವನ್ನು ಓದಿದರೆ, ಅಪೂರ ಡಾಕ್ಯುಮೆಂಟ್‌ನ್ನು ಸಭೆಯ ಮುಂದಿಡ ಬೇಕಾಗುತ್ತದೆ. ಅವರು ಆ ರೀತಿಯಲ್ಲಿ ದಯವಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ :- ನನ್ನ ಉತ್ತರದ ಮಟ್ಟಿಗೆ ಈ ವಾಕ್ಯ ಮತ್ತು ಇಲ್ಲಿ ಬಂದಿರತಕ್ಕಂಥ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಈ ಕೊನೆಯ ಪ್ಯಾರಾಗ್ರಾಫ್ ಒಂದನ್ನು ಓದಿದರೆ ಸಾಕು ಎನ್ನತಕ್ಕಂಥಾದ್ದು ನನ್ನ ಅಸೆಸ್‌ಮೆಂಟ್.

ಶ್ರೀ ರಾಮಕೃಷ್ಣ ಹೆಗಡೆ :- ತಮ್ಮ ತಿಳುವಳಿಕೆ ಪ್ರಕಾರ ಅಷ್ಟೇ ಸಾಕಾಗಿರ ಬಹುದು. ಆದರೆ ನಾನು ರೂಲ್ಸ್ ವಿಚಾರದಲ್ಲಿ ಹೇಳುತ್ತಾ ಇದ್ದೇನೆ. ನಮ್ಮ ನಡವಳಿಕೆಗಳ ಪ್ರಕಾರ ಯಾವುದೇ ಒಂದು

ಪತ್ರದ ಕೆಲವು ಭಾಗವನ್ನು ಒಬ್ಬ ಮಂತ್ರಿಯು ಓದಿದರೆ, ಆ ಇಡೀ ಪತ್ರವನ್ನು ಸಭೆಯ ಟೇಬಲ್ ಮುಂದೆ ಇಡಬೇಕಾಗುತ್ತದೆ. ಮಾನ್ಯ ಸ್ಪೀಕರ್‌ರವರಿಗೂ ಇದು ಗೊತ್ತಿದೆ. ಇದು ಮೊದಲಿಂದಲೂ ಬಂದಿರತಕ್ಕಂಥ ಒಂದು ಪರಿಪಾಠ. ಹಾಗೂ ಕಾಯಿದೆ ಪ್ರಕಾರ ಹೀಗೆ ಮಾಡಬೇಕಾಗುತ್ತದೆ.

Sri S.M.krishna :- I will not hesitate to withdraw anything from this Hon'ble House. After all, I am the servant of this House.

ಆದ್ದರಿಂದ ಮಾನ್ಯ ರಾಮಕೃಷ್ಣ ಹೆಗಡೆಯವರು ಏನು ಸೂಚನೆಯನ್ನು ಮಾಡುತ್ತಾ ಇದ್ದಾರೆ, ಅದರ ಪ್ರಕಾರ ಈ ಕಾಗದದ ನಕಲನ್ನು ಮೇಜಿನ ಮೇಲೆ ಇಡುತ್ತೇನೆ. ಬಹುಶಃ ಇನ್ನೂ ಏನಾದರೂ ಲಿಂಗರಿಂಗ್ ಅನುಮಾನಗಳು ಇದ್ದರೆ, ಶುಕ್ಲರವರ ಜೊತೆಯಲ್ಲಿ ಏನೋ ನೆಂಟಸ್ತನ ಮಾಡಿಕೊಂಡಿದ್ದಾರೆ, ಶುಕ್ಲಾರವರ ಜೊತೆಯಲ್ಲಿ ಯಾವುದೋ ಖರ್ಚಿಯ ಆಸೆಗಾಗಿ ಯಾವುದೋ ದುರಾಸೆಗಾಗಿ, ಅಥವಾ ಇನ್ನಾವುದೋ ಒಂದು ಆಮಿಷಕ್ಕೆ ಉಪಮುಖ್ಯಮಂತ್ರಿಯಾಗಲೀ ಮುಖ್ಯಮಂತ್ರಿಯಾಗಲೀ ಬಲಿಯಾಗಿದ್ದಾರೆ ಎನ್ನತಕ್ಕಂಥ ಒಡಕಿನ ಶಬ್ದಗಳು ಏನುಅಲ್ಲಲ್ಲಿ ಹೊರಗಡೆ ಒಳಗಡೆ ಕೇಳುತ್ತಾ ಇದೆ, ಈ ಕಾಗದವನ್ನು ಓದಿದ ಮೇಲೆ ಅದಕ್ಕೆ ವಿರಾಮ ಸಿಗುತ್ತದೆ ಎಂದು ನಾನು ಭಾವಿಸುತ್ತೇನೆ.

12.20 ಪಿ.ಎಂ

ಡಾ: ಜೀವರಾಜ ಆಳ್ವ : ಅಧ್ಯಕ್ಷರೇ, ಪ್ರಥಮ ಭಾರಿಗೆ ನಮ್ಮ ಉಪ ಮುಖ್ಯಮಂತ್ರಿಗಳು ಶುಕ್ಲಾರವರ ಬಗ್ಗೆ, ಅವರು ಬೆಂಗಳೂರಿಗೆ ಭೇಟಿ ನೀಡಿದ ಬಗ್ಗೆ ಆ ಲೆಟರ್ ಆಫ್ ಕನ್‌ಸೆಂಟ್ ಬಗ್ಗೆ ಇದೆ ಎಂದು ಹೇಳಿದ್ದಕ್ಕೆ ಪೂರಕವಾಗಿ ವಿಧಾನಸಭಾಸದಸ್ಯರನ್ನು ನಂಬಿಕೆಗೆ ತೆಗೆದುಕೊಂಡು ಈ ಭಾಗದಲ್ಲಿ ಆ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಅಭಿನಂದನೆ ಮಾಡುತ್ತೇವೆ. ಆದರೆ ಈ ಸಸ್ಪಿಷನ್ ಏಕೆ ಬಂತು ಅಂತ ಸೂಚ್ಯವಾಗಿ ತಾವು ಹೇಳಿದ್ದೀರಿ. ಆ ಅಪನಂಬಿಕೆ ಬರಲು ಕಾರಣ ಇದು ಉಪಮುಖ್ಯಮಂತ್ರಿಗಳ ಅಥವಾ ನಿಮ್ಮಜಾಗದ ಪ್ರಶ್ನೆಯಲ್ಲ; ನಾಡಿನ ಜಲದ ಪ್ರಶ್ನೆಯಾದ್ದರಿಂದ ಈ ಪ್ರಶ್ನೆ ಎತ್ತಬೇಕಾಗಿಬಂತು. ಆಮೇಲೆ series of events that occured one after another ಯಾವುದು ತಾವು ಸೂಚ್ಯವಾಗಿ ಉತ್ತರ ಕೊಟ್ಟಿರಿ ವಿರೋಧ ಪಕ್ಷದ ನಾಯಕರನ್ನು ಸಭೆಗೆ ಕರೆದಾಗ ಆ ಸ್ಟಾಟಿಸ್ಟಿಕ್ಸ್ ಕೊಟ್ಟಿಲ್ಲ ಅಂತ ಟ್ರಿಬ್ಯೂನಲ್‌ನವರು ತಿಳಿಸಿದಾಗಲೂ ಅದು ಬರಲಿಲ್ಲ; ನಂತರ ಮೊನ್ನೆ ಕೂಡ ಕೋರ್ಟಿನಲ್ಲಿ ಒಂದು ಡಿಸಿಷನ್ ಬಂತು, ಮಾದೇಗೌಡರ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್‌ನಲ್ಲೂ ನಮ್ಮದು ಫೆಲ್ಯೂರ್ basic fault with the Government. ಇದಾದ ನಂತರ ಲೆಂಟರ್ ಆಫ್ ಕನ್‌ಸೆಂಟನ್ನುವುದು ಶುಕ್ಲಾ ಅವರು ಮದ್ರಾಸಿನಲ್ಲಿ ಹೇಳಿದ್ದಲ್ಲ; ಪಾರ್ಲಿಮೆಂಟಿಗೆ ಹೇಳಿದ ಮೇಲೂ ಕೂಡ, ನಾನು ತಮ್ಮ ಹತ್ತಿರ ಒಂದು ಪ್ರಶ್ನೆ ಕೇಳುತ್ತೇನೆ. ತಾವು ನಮ್ಮ ನಾಯಕರಾದ ಚಂದ್ರೇಗೌಡರಿಗೆ ಉತ್ತರ ಕೊಟ್ಟಿರಿ, ನಿಮ್ಮ ಪಕ್ಷದ ಪಾರ್ಲಿಮೆಂಟ್ ಸದಸ್ಯರಿದ್ದಾರೆ ಅಂತ. ಪಾರ್ಲಿಮೆಂಟಿಗೆ ಅವರು ಲೆಟರ್ ಆಫ್ ಕನ್‌ಸೆಂಟ್ ಇದೆ ಅಂತ ಹೇಳಿದ್ದಕ್ಕೆ ಉತ್ತರವಾಗಿ ನೀವೇನು ಮಾಡಿದ್ದೀರಾ? ಸರ್ಕಾರ ಏನು ಮಾಡಿದೆ? ಪೂರ್ಣವಾಗಿ ಸದನವನ್ನು ನಂಬಿಕೆಗೆ ತೆಗೆದುಕೊಂಡು ಈ ಮಾತನ್ನು ಹೇಳಿದ್ದೀರಿ. But you must be above suspicion. The whole Government, we are not accusing the Minister for Irrigation alone. The whole Government of Karnataka is at fault...

ಆದ್ದರಿಂದ ಉತ್ತರ ಕೊಡಿ. ಲೆಟರ್ ಆಫ್ ಕನ್‌ಸೆಂಟ್‌ಗೆ ಯಾಕೆ ಇಷ್ಟು ದಿವಸ ಮೌನವಾಗಿದ್ದಿರಿ? ನಮಗೆ ಕಾರಣಗಳು ಗೊತ್ತಿಲ್ಲ. ನಿಮ್ಮ ಇಂಟರ್ನಲ್ ಪಾಲಿಟಿಕ್ಸ್ ಬಗ್ಗೆ ನಾವು ಮಾತನಾಡುತ್ತಿಲ್ಲ. ಪಾರ್ಲಿಮೆಂಟಿಗೆ ಲೆಟರ್ ಆಫ್ ಕನ್‌ಸೆಂಟ್ ಕೊಟ್ಟಿದ್ದಾರೆ, ಎಂದು ಹೇಳುತ್ತಾರೆ; ಮಂತ್ರಿಮಂಡಲದ ಆರು ಸದಸ್ಯರು ಸ್ಟೇಟ್‌ಮೆಂಟ್ ಕೊಡ್ತಾರೆ, ವಿ.ಸಿ.ಶುಕ್ಲಾ ಅವರು ತಪ್ಪು ದಾರಿಗೆಳೆದಿದ್ದಾರೆ, ಸುಳ್ಳು ಹೇಳಿದ್ದಾರೆ ಎಂದು. It does not become an internal matter. It is our bonafides. The integrity of this Government is at stake. That has to be replied. It is for you, it is for your Government at the Centre:- The Central Minister has spoken in the Parliament.

ಅದಕ್ಕೆ ತಾವು ವಿವರಣೆ ಕೊಡಬೇಕಾಗುತ್ತದೆ.

Sri S.M.Krishna : I think the Professor Nanjundaswamy has spoken enough about your Government, about our Government. Let us not talk about our Governments. Successive Governments at the Hasthinapura level, they have harmed the interests of Karnataka. What is it that we can do? So many Governments have come and so many Governments have gone but the water in the Cauvery continue to flow....

PROF. M.D.NANJUNDASWAMY : We can do something now.

SRI S.M.KRISHNA : Let us all get together; try to strengthen our own back-bones.

PROF. M.D.NANJUNDASWAMY : We can do something atleast now. We can atleast now say or ask this Union Government to stop this IIIrd class politics relating to Inter-State Water Disputes.

SRI S.M.KRISHNA : Let me go and say, let us stop this not only IIIrd class politics we will stop this fourth class politics. Let us try to rise ourselves to first-class politics. What is that first-class straightforward politics and I would like to invite the Members of the Opposition to join this Government to play First-class politics and we appreciate the efforts, co-operation which all of you have extended to this Government. We are grateful to it. I place my special thanks on record.

ಶ್ರೀ ಆರ್.ವಿ.ದೇಶಪಾಂಡೆ :- ಬಹಳ ಸಂತೋಷ, ತಾವು ಸಿನ್ಸಿಯರ್ ಥ್ಯಾಂಕ್ಸ್ ಹೇಳಿದಿರಿ; ಆದರೆ ಫಸ್ಟ್ ಕ್ಲಾಸ್ ಪಾಲಿಟಿಕ್ಸ್ ನಾವು ಮಾಡುತ್ತಿದ್ದೇವೆ. ನಾವು ಯಾವುದೇ ರಾಜಕೀಯವನ್ನು ಬೆರೆಸಲಿಕ್ಕೆ ಹೋಗಲಿಲ್ಲ. ತಾವು ರಾಜಕೀಯವನ್ನು ಬೆರೆಸಲಿಕ್ಕೆ ಹೋದಿರಿ. ಜಯಲಲಿತಾ ರವರು ಉಪವಾಸ ಶುರುಮಾಡಿದ ನಂತರ you never bothered about the opposition; ಕಳೆದ

ಒಂದೂವರೆ ವರ್ಷದಲ್ಲಿ ಚರ್ಚೆ ಮಾಡಲಿಕ್ಕೆ ಎಷ್ಟು ಸಾರಿ ವಿರೋಧ ಪಕ್ಷದ ನಾಯಕರನ್ನು ಕರೆದಿದ್ದೀರಿ? ತಾವು ಈ ರಾಜ್ಯದ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ ಚರ್ಚೆ ಮಾಡಲಿಕ್ಕೆ ಎಷ್ಟು ಸಾರಿ ಕರೆದಿದ್ದೀರಿ? When she starts the fast ತಮಗೆ ಎಲೆಕ್ಟ್ರಿಕ್ ಶಾಕ್ ಆದ ಹಾಗೆ ತಾವು ಎನ್‌ಲೈಟನ್ ಆಗುತ್ತೀರಿ; ಆಗ ತಮಗೆ ಕಾವೇರಿಯ ಬಗ್ಗೆ ಚಿಂತನೆಯಾಗುತ್ತದೆ. You are not bothered to call the Opposition. So, we boycotted the meeting. Again we thought, in the interest of the State, in the interest of Cauvery Basin farmers, we again went .. ಹಾಗಾದರೆ ನೀವು ನಮಗೆ ಆಮಂತ್ರಣ ಕೊಡುವ ಪ್ರಶ್ನೆ ಇಲ್ಲ. ಪ್ರಶ್ನೆ ಏನೆಂದರೆ ಫಸ್ಟ್‌ಕ್ಲಾಸ್ ಪಾಲಿಟಿಕ್ಸ್ ಮಾಡಬೇಕಾದರೆ ತಾವು ಅಧಿಕಾರದಲ್ಲಿದ್ದೀರಿ, ತಮ್ಮ ಕಡೆಯಿಂದ ಶುರು ಆಗಬೇಕು. ಆ ಕೆಲಸವನ್ನು ತಾವು ಮಾಡಿಲ್ಲ.

ಶ್ರೀ ಎಸ್.ಎಂ.ಕೃಷ್ಣ :- ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರಲ್ಲಿ ಬಹಳ ಅರ್ಥವಿದೆ. ನಾವು ಆಮಂತ್ರಣವನ್ನು ಕೊಟ್ಟಾಗ ನೀವು ತಿರಸ್ಕಾರ ಮಾಡಿದಾಗ ನಮಗೆ ಬಹಳ ನೋವು ಉಂಟಾಯಿತು.

ಶ್ರೀ ವಾಟಾಳ್ ನಾಗರಾಜ್ :- ನಾವು ಯಾವತ್ತೂ ಇವರ ಆಮಂತ್ರಣವನ್ನು ತಿರಸ್ಕರಿಸಿಲ್ಲ. ಯಾವತ್ತು ತಿರಸ್ಕರಿಸಬೇಕಾಗಿತ್ತು ಅಂದರೆ ನಾವೇ ಅತ್ತು ಕರೆದು ಔತಣಕ್ಕೆ ಹೋದರು ಅನ್ನುವ ರೀತಿಯಲ್ಲಿ ಅನೇಕ ಭಾರಿ ಈ ಸರ್ಕಾರ ವಿರೋಧ ಪಕ್ಷಗಳನ್ನು ಕಡೆಗಾಣಿಸಿದ್ದಾರೆ. ಕಾವೇರಿ, ಕೃಷ್ಣ ಸಂಬಂಧ, ನಮ್ಮೆಲ್ಲರನ್ನೂ ಕರೆದು ಮಾತನಾಡಲಿ, ಮಾತನಾಡಲಿ, ಅಂತ ಹೇಳಿ ಅನೇಕ ಪತ್ರಿಕೆಗಳಲ್ಲಿ ಹೇಳಿದ್ದೇವೆ. ಇದೂ ಅಲ್ಲದೆ ಕೊನೆಗೆ ಅಂತಿಮ ಅಸ್ತ್ರವಾಗಿ ನಾವು ರಾಜ್ಯಪಾಲರನ್ನು ಭೇಟಿ ಮಾಡಿ ಈ ಸರ್ಕಾರ ಕಾವೇರಿ ವಿಚಾರದಲ್ಲಿ ನಮ್ಮನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಅನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ರಾಜ್ಯಪಾಲರು ಈ ವಿಚಾರದಲ್ಲಿ ಬಹಳ ಮನನೊಂದರು. ಈ ವಿಚಾರದಲ್ಲಿ ಪಕ್ಷಾತೀತವಾಗಿ ಹೋಗಬೇಕಾಗಿತ್ತು ಅನ್ನುವಂತಹ ಮಾತನ್ನು ಅವರು ಹೇಳಿದರು. ತಮಗೆ ನಾನು ಹೇಳುತ್ತೇನೆ; ತಾವಾದರೂ ಕರೆಯಬಹುದಾಗಿತ್ತು, ಮುಖ್ಯಮಂತ್ರಿಗಳಾದರೂ ಕರೆಯಬಹುದಾಗಿತ್ತು. ಆದರೆ ನಿಮ್ಮ ಸರ್ಕಾರದ ನಿಲುವು ಕಾವೇರಿಯ ಬಗ್ಗೆ ಏನೆಂದು ಇದುವರೆಗೂ ಸ್ಪಷ್ಟಪಡಿಸಿಲ್ಲ. ಕೊನೆಯಲ್ಲಿ ವಿ.ಸಿ.ಶುಕ್ಲಾರವರು ಬಂದ ನಂತರ, ಕುಮಾರಿ ಜಯಲಲಿತಾರವರು ಸತ್ಯಾಗ್ರಹ ಮಾಡಿದ ನಂತರ ಕೊನೆಯಲ್ಲಿ ಎಲ್ಲಾ ಮುಗಿದು ನಿಮ್ಮ ಪತ್ರ ವ್ಯವಹಾರಗಳು ನಿಮ್ಮ ಗುಟ್ಟಾದ ವ್ಯವಹಾರಗಳು ಪ್ರತಿಯೊಂದೂ ಮುಗಿದು ಕೊನೆಯ ಘಳಿಗೆಯಲ್ಲಿ ನೀವು ನಮ್ಮನ್ನು ಕರೆದಿರಿ; ಆದರೂ ಸಹ ನಾವೇನು ಮಾಡಿದೆವು ಅಂದರೆ, ಇನ್ನು ನೀವು ಕರೆದಿರುವಾಗ ಆ ಸಂದರ್ಭದಲ್ಲಿ, ಬಹಿಷ್ಕಾರ ಹಾಕುವುದು ಸರಿ ಇಲ್ಲವೆಂದು ಹೇಳಿ ಪ್ರಾಮಾಣಿಕವಾಗಿ ತಾವು ಕರೆದ ತಕ್ಷಣ ನಾವು ಬಂದಿದ್ದೇವೆ. ಇದರಲ್ಲಿ ಹಿಂದೆ ಮುಂದೆ ನೋಡಿಲ್ಲ. ಹಿಂದೆ ಈ ಸದನದಲ್ಲಿ ಏನು ಹೇಳಿದ್ದೀರಿ ಅದನ್ನು ಈಗ ಜ್ಞಾಪಿಸುತ್ತೇನೆ. ಕೃಷ್ಣಾ ಬಗ್ಗೆ ನೀವೊಂದು ಉಸ್ತುವಾರಿ ಸಮಿತಿಯನ್ನು ಮಾಡುತ್ತೇನೆಂದು ಹೇಳಿದ್ದೀರಿ; ಇದೇ ಸದನದಲ್ಲಿ ತಾವುಭರವಸೆಯನ್ನು ಕೊಟ್ಟಿರಿ; ಈ ಕ್ಷಣದವರೆಗೂ ತಾವು ಅದರ ಬಗ್ಗೆ ಉಸ್ತುವಾರಿ ಸಮಿತಿ ಮಾಡಿದ್ದೀರಾ? ಈ ಸಮಿತಿಯ ಸಭೆ ಕೃಷ್ಣಾ ನೀರಾವರಿ ಯೋಜನೆಯಲ್ಲೇ ಸೇರೋಣ, ಅಲ್ಲಿನ ಪರಿಸ್ಥಿತಿಯನ್ನು ನೋಡೋಣ, ಅಲ್ಲಿನ ವ್ಯವಸ್ಥೆಯನ್ನು ನೋಡೋಣ ಅಂತ ಹೇಳಿ ಎಲ್ಲವನ್ನೂ ತಾವು

ಮುತ್ತಿನಂತೆ ಹೇಳಿದಿರಿ; ಏನಾಯಿತು ಸ್ವಾಮಿ? ಯಾವುದೂ ಆಗಿಲ್ಲ. ಆದ್ದರಿಂದ ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣಾ :- ತಾವು ಯಾವಾಗ ನಮ್ಮ ಆಹ್ವಾನವನ್ನು ನಿರಾಕರಣೆ ಮಾಡಿ ರಾಜ್ಯಪಾಲರ ಹತ್ತಿರ ಹೋದಿರೋ ಆಗ . . . . . .

ಶ್ರೀ ವಾಟಾಳ್ ನಾಗರಾಜ್ :- ತಾವು ಆಹ್ವಾನವನ್ನು ಎಲ್ಲಿ ಕೊಟ್ಟಿದ್ದೀರಿ? ನಿಮ್ಮ ಆಹ್ವಾನ ಇರಲಿಲ್ಲ. ನಿಮ್ಮ ಆಹ್ವಾನ ಬಂದಿಲ್ಲ ಅಂತ ಹೇಳಿ ನಾವು ರಾಜ್ಯಪಾಲರ ಬಳಿಗೆ . . . . .

ಶ್ರೀ ಎಸ್.ಎಂ.ಕೃಷ್ಣ :- ನಮ್ಮ ಮುಖ್ಯಮಂತ್ರಿಗಳಿಂದ ಆಹ್ವಾನ ಬರುವುದಕ್ಕೆ ಮುಂಚೆಯೇ ತಾವು ರಾಜ್ಯಪಾಲರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ನಾವು ತಮ್ಮಗಳೆಲ್ಲರನ್ನೂ ಕೂಡ ಕರೆಯಬೇಕು, ಆಹ್ವಾನ ಮಾಡಬೇಕು ಎನ್ನತಕ್ಕಂಥ ಸಿದ್ಧತೆಯಲ್ಲಿ ಇದ್ದೆವು. ಟೈಪ್ ಆಗುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ :- ಬುದ್ಧಿವಂತಿಕೆಗಿಂತ ತಾವು ಪ್ರಾಮಾಣಿಕತೆಯಿಂದ ಹೇಳಿ. ಅದರಲ್ಲಿ ನಿಮ್ಮ ಬಗ್ಗೆ ನಮಗೇನೂ ಚಿಂತನೆ ಇಲ್ಲ. ಬುದ್ಧಿವಂತಿಕೆಯಿಂದ ತಾವು ಮಾತನಾಡುತ್ತಿದ್ದೀರಿ. ಅದು ಬೇಡ, ದಯಮಾಡಿ ಯಾವ ಕಾರಣಕ್ಕಾಗಿ ಅಂತ ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ :- ನಾವು ಗೌರ್ನರರವರನ್ನು ಭೇಟಿ ಆದ ನಂತರ ಮೊದಲನೆಯ ಆಹ್ವಾನ ನಮಗೆ ಬಂತಲ್ಲಾ, ಅದು ಎಷ್ಟೊಂದು causal ಇತ್ತು, Do you know-the invitation was sent to us by Deputy Secretary-III in C.M.'s Office. This was the importance given by your Government to the Opposition.

SRI S.M.KRISHNA : I would like to tender my unconditional apologies if the Secretary-III has sent this invitation. Let me assure you . . SRI RAMAKRISHNA HEGDE : - Dy. Secretary-III is Third Class..

SRI S.M.KRISHNA : No, Mr. Hegde -ನಾನು ನನ್ನ ಅಪಾಲಜಿಯನ್ನು ನೀವು ಥರ್ಡ್ ಕ್ಲಾಸ್ ಅಂತ ತಿಳಿದು ಕೊಂಡಿರೋ ಏನೋ ಅಂತ ಹೆದರಿದ್ದೆ. ಡೆಪ್ಯುಟಿ ಸೆಕ್ರಿಟರಿ IV ಅಲ್ಲಿ ಇರಲಿಲ್ಲ. My colleague says the apology ended in first class.

ಶ್ರೀ ವಾಟಾಳ್ ನಾಗರಾಜ್ :- ಈ ವಿಚಾರದಲ್ಲಿ ನೀವಿಬ್ಬರೂ ಒಂದಾಗಿದ್ದೀರಿ.

SRI S.M.KRISHNA :- It so happens. ಕಾಕತಾಳಿಯ ಇದು. ನಾವಿಬ್ಬರೂ ಒಂದಾಗುತ್ತಿರುವುದು.

Going back, I also felt ನೀವು ಯಾವಾಗ ಬರಲಿಲ್ಲವೋ ಆಗ ನಾನೇ ಸೂಚನೆ ಮಾಡಿದೆ.

ಶ್ರೀ ವಾಟಾಳ್ ನಾಗರಾಜ್ :- ಈ ರಾಜ್ಯದ ಹಿತವನ್ನು ಕಾಪಾಡುವದರಲ್ಲಿ ನೀವು ಕರೆದರೆ ಸಾಕು ಎಂದು ನಾವು ಕಾದು ಕುಳಿತಿದ್ದೆವು. ನಾವು ಯಾವಾಗ ಬರಲಿಲ್ಲವೋ ಎಂದು ನೀವು ಹೇಳುತ್ತಿದ್ದೀರಿ. ನೀವು ಏನು ಈ ರೀತಿ ಸುತ್ತಿ ಬಳಸಿ ನಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುತ್ತಿದ್ದೀರಲ್ಲಾ.

ಶ್ರೀ ವೈ.ಕೆ. ರಾಮಯ್ಯ :- ಸನ್ಮಾನ್ಯ ಅಧ್ಯಕ್ಷರೇ, ಇಷ್ಟರವರೆಗೆ ಸನ್ಮಾನ್ಯ ಮಂತ್ರಿಗಳು ಕೊಡುತ್ತಿರುವ ಉತ್ತರದ ಬಗ್ಗೆ ನನಗೊಂದು ತರಹ ಥ್ರಿಲ್ ಆಗಿದ್ದೆ. ಎಲ್ಲಾ ವಿಷಯದಲ್ಲಿ, ಈಗ ಈ ವಿಷಯದಲ್ಲಿ ಅವರು ಉತ್ತರ ಕೊಡುತ್ತಿರುವುದನ್ನು ನೋಡಿದರೆ ನಾನು ಹೇಳುವ ಮಾತನ್ನು ನೀವು

ನಂಬಬೇಕು ಎಂದು ನೀವು ನಮ್ಮಿಂದ ನಿರೀಕ್ಷೆ ಮಾಡಿದರೆ ನಾನು ಆ ನಿರೀಕ್ಷೆಗೆ ಹೋಗುವುದಕ್ಕೆ ಸಿದ್ಧನಿಲ್ಲ. ಕಾರಣವೇನೆಂದರೆ ನಿನ್ನೆ ನಾನು ಇಷ್ಟು ಕಟ್ಟನ್ನು ಹೊತ್ತುಕೊಂಡು ಬಂದು ನಿಮಗೆ ತೋರಿಸಿದ್ದೇನೆ. ನಿಮಗೆ ಮತ್ತು ನಿಮ್ಮ ಮುಖ್ಯಮಂತ್ರಿಗಳಿಗೆ ಬರೆದಿರತಕ್ಕಂಥ ಪ್ರತಿಯೊಂದು ಪತ್ರದ ನಕಲು ನನ್ನ ಹತ್ತಿರ ಇದೆ. ಒಂದು ಡಜನ್ ಟೈಮ್‌ಗಿಂತ ಜಾಸ್ತಿ ಸಾರಿ ಬರೆದಿದ್ದೇನೆ. ಕೃಷ್ಣ ಕಾವೇರಿಯ ಯೋಜನೆಗಳ ಅನುಷ್ಠಾನದ ಬಗ್ಗೆ ಚರ್ಚೆ ಮಾಡಲಿಕ್ಕೆ ಆ ನದಿ ಪಾತ್ರದ ಜನರ ಶಾಸಕರ ಸಭೆಯನ್ನು ಕರೆದು ಚರ್ಚೆ ಮಾಡಿ ಎಂದು. ಒಂದು ಸಾರಿ ಆದರೂ ನೀವಾಗಲಿ ನಿಮ್ಮ ಮುಖ್ಯಮಂತ್ರಿಗಳಾಗಲಿ ಪ್ರಯತ್ನವನ್ನು ಮಾಡಿದ್ದೀರಾ? ಇಲ್ಲ. ಇದರ ಜೊತೆಗೆ ಅತ್ತೋಕರೆದೋ ಏನೋ, ಮುಖ್ಯಮಂತ್ರಿಯಾಗಿರುವಂಥ ಜಯಲಲಿತಾರವರು ಉಪವಾಸಕ್ಕೆ ಕುಳಿತ ಪುಣ್ಯದಿಂದ ನಮ್ಮನ್ನು ಈ ಸರ್ಕಾರದವರು ಕೃಷ್ಣದಲ್ಲಿ ಮೀಟಿಂಗ್‌ಗೆ ಕರೆದರು. ಅವತ್ತು ನಾನು ಇದೇ ಪ್ರಶ್ನೆಯನ್ನು ಕೇಳಿದೆ. ಆಗ ಮುಖ್ಯ ಮಂತ್ರಿಗಳು ತಮ್ಮ ಎದುರಿನಲ್ಲಿ ಒಂದು ಅಪ್ಪಣೆ ಕೊಡಿಸಿದರು. ತಮಗೆ ಜ್ಞಾಪಕ ಇದೆಯಾ? ಇಲ್ಲದಿದ್ದರೆ ನಾನೇ ಜ್ಞಾಪಿಸುತ್ತೇನೆ, ದಯಮಾಡಿ ಕೇಳಿ. ಹೌದು, ನಾವು ಸಭೆಯನ್ನು ಕರೆಯಲಿಲ್ಲ, ಏತಕ್ಕೆ ಕರೆಯಲಿಲ್ಲ ಎಂದರೆ ಸಮಸ್ಯೆ ಇರಲಿಲ್ಲ ಕರೆಯಲಿಲ್ಲ ಎಂದು ಹೇಳಿದರು. What does it mean? ಅದರ ಅರ್ಥ ಏನೆಂದರೆ ನಿಮಗೆ ಮತ್ತೆ ನಮ್ಮನ್ನು ಕರೆಯಬೇಕಾದರೆ ಜಯಲಲಿತಾರವರು ಉಪವಾಸ ಕುಳಿತುಕೊಳ್ಳಬೇಕು. ಸಮಸ್ಯೆ ಬರುವುದಕ್ಕಿಂತ ಮೊದಲೇ ಸಮಸ್ಯೆಯನ್ನು ಪರಿಹಾರ ಮಾಡಿ ಯೋಜನೆಗಳ ಅನುಷ್ಠಾನದ ಬಗ್ಗೆ ಚರ್ಚೆಮಾಡಿ ಎಂದು ಕಾಗದ ಬರೆದರೆ ನಿಮ್ಮಿಂದ ಉತ್ತರ ಇಲ್ಲ. ನೀವು ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಜಯಲಲಿತಾ ಉಪವಾಸ ಕುಳಿತುಕೊಂಡಿದ್ದರಿಂದ ಸಭೆಯನ್ನು ಕರೆದುಬಿಟ್ಟು ನೀವು ಬರಲಿಲ್ಲ ಎನ್ನತಕ್ಕಂಥ ಅಪವಾದವನ್ನು ನಮ್ಮ ಮೇಲೆ ಹೊರಿಸುತ್ತೀರಿ. ಆದ್ದರಿಂದ ದಯಮಾಡಿ ನೀವು ಹೇಳಿದ್ದೆಲ್ಲವನ್ನೂ ನಾವು ಒಪ್ಪಿಕೊಳ್ಳುವುದಕ್ಕೆ ಸಿದ್ಧರಿಲ್ಲ. ನೀವು ಹೇಳಿದ ಎಲ್ಲವನ್ನೂ ನಂಬಿಕೊಳ್ಳಲಿಕ್ಕೂ ನಾವು ಸಿದ್ಧರಿಲ್ಲ. ಕೊನೆಗೆ the minimum courtesy of the Government was to call all the legislators of the two Basins to discuss about the implementation of the schemes. You should accept that you have not done that.

ಶ್ರೀ ಎಸ್.ಎಂ. ಕೃಷ್ಣ:- I accept it.

SRI Y.K.RAMAIAH :- Thank you very much.

ಶ್ರೀ ಎಸ್.ಎಂ.ಕೃಷ್ಣ :- ಅಪವಾದವನ್ನು ನಾನು ಮಾಡಲಿಲ್ಲ. ನಾವು ವೊದಲನೇ ದಿವಸ ಸೇರಿದ ಸಭೆಗೆ ತಾವು ಬರುವುದಕ್ಕೆ ಸಾಧ್ಯವಿಲ್ಲ ಎಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಮೇಲೆ ನಾನೇ ಸೂಚನೆ ಮಾಡಿದೆ. ಅವರ ಮನ ಒಲಿಸಿಕೊಳ್ಳಬೇಕು. ಅವರು ಇಲ್ಲದೇ ಹೋದರೆ ಕರ್ನಾಟಕದ ಒಟ್ಟು ನಿರ್ಧಾರ ಏನಿದೆ, ಅದು ಅಭಿವ್ಯಕ್ತವಾಗುವುದಿಲ್ಲ. ಆದ್ದರಿಂದ ಒಂದು ದಿವಸ ಮುಂದಕ್ಕೆ ಹಾಕಿ ನಮ್ಮ ಸ್ನೇಹಿತರುಗಳನ್ನು ನಾವು ಕೇಳಿಕೊಳ್ಳಬೇಕೆಂದು ನಿರ್ಧಾರ ತೆಗೆದುಕೊಂಡ ನಂತರ ತಾವು ದೊಡ್ಡ ಮನಸ್ಸು ಮಾಡಿ ಆ ಸಭೆಗೆ ತಾವು ಬಂದು ಸಹಕಾರವನ್ನು ಕೊಟ್ಟಿರಿ. ಆ ನಂತರ ಆ ಸಭೆಯಲ್ಲಿ ಆದ ನಡವಳಿಕೆಗಳನ್ನು ಮಾನ್ಯ ವಾಟಾಳರಿಗೆ ಜ್ಞಾಪಿಸುತ್ತೇನೆ. ಇನ್ನು ಮುಂದೆ ಪ್ರತಿ ತಿಂಗಳಿಗೆ ಒಂದು ಸಾರಿ ಈ ಸಭೆ ನಡೆಯಬೇಕು ಅಥವಾ ಪ್ರತಿ ಎರಡು ತಿಂಗಳಿಗೆ ಒಂದು ಸಾರಿ ಈ ಸಭೆ ನಡೆಯಬೇಕು.ಎಂಬ

ಬಗ್ಗೆ ಕೂಡ ಒಂದು ಚರ್ಚೆ ನಡೆಯಿತು. ಆದರೆ ಉಪವಾಸ ನಡೆಯಲಿ, ನಡೆಯದೇ ಹೋಗಲಿ ನಾವು ಎರಡು ತಿಂಗಳಿಗೆ ಒಂದು ಸಾರಿ ಈ ಸಭೆಯನ್ನು ಸೇರಿಸಬೇಕು ಎನ್ನತಕ್ಕಂಥ ನಿರ್ಣಯವನ್ನು ಕೂಡ ನಾವು ತೆಗೆದುಕೊಂಡಿದ್ದೇವೆ. ಆ ನಿರ್ಣಯವನ್ನು ಇನ್ನು ಮುಂದೆ ನಾವು ಪರಿಪಾಲನೆ ಮಾಡುತ್ತೇವೆ. ಅವರು ಉಪವಾಸ ಮಾಡಲಿ, ಮಾಡದೇ ಹೋಗಲಿ ನಾವು ಎರಡು ತಿಂಗಳಿಗೆ ಒಂದು ಸಾರಿ ಇದನ್ನು ನಾವು ಪರಿಪಾಲನೆ ಮಾಡುತ್ತೇವೆ. ಹಾಗೆಯೇ ಕೃಷ್ಣ ಹೈ-ಪವರ್ ಕಮಿಟಿಗೆ ಸದಸ್ಯರುಗಳು ಯಾರು ಆಗಬೇಕು ಎನ್ನುವುದರ ಬಗ್ಗೆ ತೀರ್ಮಾನ ಈಗಾಗಲೇ ಆಗಿದೆ. ಇನ್ನು ಕೇವಲ ಮೂರು-ನಾಲ್ಕು ದಿವಸಗಳಲ್ಲಿ ಅದರ ಬಗ್ಗೆ ಒಂದು ಅಧಿಸೂಚನೆ ಹೊರಡಲಿದೆ. ಅದರ ಸಭೆಯನ್ನು ಕೂಡ ಅತೀ ಶೀಘ್ರದಲ್ಲಿಯೇ ನಾವು ಕರೆದು ಅನಂತರ ಆ ಸಭೆಯನ್ನು ಕೇವಲ ಇಲ್ಲಿ ನಡೆಸತಕ್ಕಂಥದ್ದಲ್ಲ. ಅದನ್ನು ಭೀಮರಾಯನ ಗುಡಿಯಲ್ಲಿ ಕೂಡ ನಾವು ನಡೆಸುತ್ತೇವೆ. ಅಲ್ಲಿಗೆ ನಾವೆಲ್ಲಾ ಹೋಗಿ ಒಟ್ಟಾರೆ ಕೆಲಸಕಾರ್ಯಗಳೆಲ್ಲವನ್ನೂ ಕೂಡ ನೋಡಿದರೆ ನಮಗೆ ಸಮಾಧಾನವಾಗುತ್ತದೆ. ಅಲ್ಲಿ ಕೆಲಸ ಮಾಡುತ್ತಿರತಕ್ಕಂಥ ಇಂಜಿನಿಯರುಗಳಿಗೆ ಹಾಗೂ ಕಂಟ್ರಾಕ್ಟರುಗಳಿಗೂ ಕೂಡ ನಮ್ಮ ಮೇಲೆ ಬಂದು ನೋಡತಕ್ಕಂಥ ಜನರು ಇದ್ದಾರೆ, ಎನ್ನತಕ್ಕಂಥ ಭೀತಿ ಭಯ ಕೂಡ ಇರುತ್ತದೆ. ಅದರ ಉಪಯೋಗ ಕರ್ನಾಟಕದ ಜನತೆಗೆ ಆಗುತ್ತದೆ ಎನ್ನತಕ್ಕಂಥದ್ದನ್ನು ನಾನು ಈ ಸಮಯದಲ್ಲಿ ನಿವೇದಿಸಿಕೊಳ್ಳಲು ಇಚ್ಛೆ ಪಡುತ್ತಿದ್ದೇನೆ. ಮಾನ್ಯ ರಾಮಯ್ಯನವರು ನಮ್ಮ ಪಾಲಿಗೆ ಬಂದಿರತಕ್ಕಂಥ ನೀರು ಮತ್ತು ಅದರ ಉಪಯೋಗ ಇವೆರೆಡಕ್ಕೂ ಅಜಗಜಾಂತರ ವ್ಯತ್ಯಾಸವಾಗುತ್ತಿದೆ ಎನ್ನತಕ್ಕಂಥದ್ದನ್ನು ತಮ್ಮ ಸುದೀರ್ಘವಾದ ಭಾಷಣದ ಮೂಲಕ ನನ್ನ ಗಮನವನ್ನು ಸೆಳೆದಿದ್ದಾರೆ. ಕಳೆದ ನಾಲ್ಕುರು ವರ್ಷದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೇವೆ; ಈ ವರ್ಷದಲ್ಲಿ ಈ ಜಲಾನಯನ ಪ್ರದೇಶದಲ್ಲಿ ಎಷ್ಟು ಹಣವನ್ನು ನಾವು ಖರ್ಚು ಮಾಡಬೇಕೆಂದು ಉದ್ದೇಶಿಸಿದ್ದೇವೆ ಎನ್ನುವುದರ ಬಗ್ಗೆ ತಾವು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಎಷ್ಟು ಎಲ್‌ಓಸಿ ಉಳಿದಿದೆ ಎನ್ನತಕ್ಕ ಪ್ರಶ್ನೆಯನ್ನು ತಾವು ಹಾಕಿದ್ದೀರಿ. ನಮ್ಮ ಇರಿಗೇಷನ್ ಸೆಕ್ಟಾರ್‌ನಲ್ಲಿ ಬಹಳ ಹಣ ಕೊಡಬೇಕಾಗಿದೆ.

ಶ್ರೀ ಸಿ.ಭೈರೇಗೌಡ : ಈ ತರಹ ಸೂಕ್ಷ್ಮವಾದ ವಿಚಾರಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ತಾವು ಉತ್ತರ ಕೊಡತಕ್ಕದ್ದು ಸರಿಯಲ್ಲ ಎಂದು ಹೇಳುತ್ತೇನೆ. ಏಕೆಂದರೆ ಅನೇಕ ಸಂದರ್ಭದಲ್ಲಿ ಅದನ್ನು ನಾವು ಕಾಪಾಡಿಕೊಂಡು ಬಂದಿದ್ದೇವೆ. ನಮ್ಮ ಸಭೆ ನಡೆದಂತಹ ಸಂದರ್ಭದಲ್ಲಿ ತಾವು ಆ ಅಂಕಿ ಅಂಶಗಳನ್ನು ಕೊಟ್ಟರೆ ಸೂಕ್ತ ಎಂದು ಅನ್ನಿಸುತ್ತದೆ. ಇದು ಇಲ್ಲಿ ದಾಖಲೆಗೆ ಹೋಗುತ್ತದೆ; ಮತ್ತೆ ಇದನ್ನು ನಮ್ಮ ವಿರುದ್ಧವಾಗಿ ಟ್ರಿಬ್ಯೂನಲ್‌ನಲ್ಲಿ ಉಪಯೋಗಿಸಿಕೊಳ್ಳತಕ್ಕ ಪರಿಸ್ಥಿತಿ ಕೂಡ ಬರುತ್ತದೆ. ಆದ್ದರಿಂದ ತಾವು ದಯವಿಟ್ಟು ಅಂಕಿ ಅಂಶಗಳನ್ನು ಕೊಡುವುದು ಬೇಡ ಎಂದು ಹೇಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ನನಗೆ ಅಂಕಿ ಅಂಶಗಳು ಬೇಕಾಗಿವೆ. ಇಲ್ಲದಿದ್ದರೆ ನಾನು ಬಂದು ಬಾವಿಯಲ್ಲಿ ಕುಳಿತುಕೊಳ್ಳುತ್ತೇನೆ. ನಾನು ಈ ಶಾಸನ ಸಭೆಗೆ ಬಂದಾಗಿನಿಂದ ಈ ನೆಪವನ್ನು ಹೇಳಿಕೊಂಡು ಕರ್ನಾಟಕದ ಜನತೆಗೆ ಸತ್ಯವನ್ನು ಮುಚ್ಚಿಡುತ್ತಿದ್ದೇನೆ. ಇಲ್ಲಿ ಹೇಳಿತ್ತೀರಿ, ನಾವು ಕರೆದು ಮಾತನಾಡುತ್ತೇವೆ ಎಂದು. ಅಲ್ಲಿ ಕರೆದು ಮಾತನಾಡುವುದಕ್ಕೆ ಸಭೆ ಕರೆಯುವುದಿಲ್ಲ. ಇಲ್ಲಿ ನೀವು ಹೇಳಬೇಕಾಗುತ್ತದೆ. ಕರ್ನಾಟಕ ರಾಜ್ಯದ ನೀರಾವರಿ ಅನುಷ್ಠಾನದ ಬಗ್ಗೆ ನೀವು ಕೈಗೊಂಡ ಕ್ರಮ ಏನು?

ಪತ್ರಿಕೆಗೆ ಹೋದರೂ ಪರವಾಗಿಲ್ಲ, ಟಾಂಟಾಂ ಆದರೂ ಪರವಾಗಿಲ್ಲ, ದೇಶ ಏನೂ ಮುಳುಗಿ ಹೋಗುವುದಿಲ್ಲ. ದಯಮಾಡಿ ಅಂಕಿ ಅಂಶ ಕೊಡಿ. ಈ ರಾಜ್ಯದ ನೀರಾವರಿ ಯೋಜನೆಗಳ ಅನುಷ್ಠಾನವನ್ನು ತ್ವರಿತಗೊಳಿಸಲಿಕ್ಕೆ ಈ ವಿಶೇಷ ಪರಿಸ್ಥಿತಿಯಲ್ಲಿ ಸರ್ಕಾರ ಕೈಗೊಂಡ ಕಾರ್ಯಕ್ರಮ ಏನು ಎಂಬುದನ್ನು ತಾವು ಹೇಳಬೇಕಾಗುತ್ತದೆ. ದೇಶ ಏನೂ ಮುಳುಗಿ ಹೋಗುವುದಿಲ್ಲ ಅಂಕಿ ಅಂಶ ಕೊಡಿ. ಕುಂಟು ನೆಪ ಹೇಳಿಕೊಂಡು ನಾವು ಮುಚ್ಚಿಟ್ಟು ಕೊಳ್ಳುತ್ತೇವೆ, ಎಂದು ನೀವು ಹೇಳುವುದರಲ್ಲಿ ಅರ್ಥ ಇಲ್ಲ. ದಯಮಾಡಿ ತಿಳಿಸಿ, ಕೃಷ್ಣಾ ಕಾವೇರಿ ಈ ಎರಡೂ ಯೋಜನೆಗಳ ಅನುಷ್ಠಾನವನ್ನು, ತ್ವರಿತಗೊಳಿಸಲಿಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಈ ಸರ್ಕಾರ ಏನಾದರೂ ಹಾಕಿಕೊಂಡಿದೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಈ ಕಾವೇರಿ ವಿವಾದದ ವಿಚಾರದಲ್ಲಿ ಚರ್ಚೆಯಲ್ಲಿ ಭಾಗವಹಿಸತಕ್ಕ ಸಂದರ್ಭದಲ್ಲಿ, ನಾನು ಮಾತನಾಡುವಾಗ ತಾವೇ ಇರಲಿಲ್ಲ. ನಾವು ಎರಡು ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಒಂದು ನಾನು ಕೇಳತಕ್ಕದ್ದು ಛೇರ್ಮನ್ ಆಫ್ ದಿ ಸೆಂಟ್ರಲ್ ವಾಟರ್ ಬೋರ್ಡ್ ಕಮೀಷನ್ ಏನು ಬೇಡಿಕೆಯನ್ನು ಮಾಡಿದ್ದರು, ಆ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಅವರು ಏನು ಮಾತುಕತೆ ಮಾಡಿದ್ದಾರೆ. ಹಾಗೂ ಆ ಪ್ರೊಸೀಡಿಂಗ್ಸ್ ಏನು ಎನ್ನುವುದು ನಮಗೆ ಗೊತ್ತಾಗಬೇಕು. ಇದು ಬಹಳ ಮುಖ್ಯವಾಗಿ ಇರತಕ್ಕ ಅಂಶ. ಶ್ರೀ ವಿ.ಸಿ.ಶುಕ್ಲಾ ಅವರು ಬರತಕ್ಕಂಥದ್ದು, ಪೊಲಿಟಿಕಲ್ ಲೆವೆಲ್‌ನಲ್ಲಿ ನಿಮ್ಮ ಜೊತೆ ಅಥವಾ ಸಿಎಂ ಜೊತೆಯಲ್ಲಿ ಮಾತನಾಡುವುದಕ್ಕೆ. ಅಲ್ಲಿ ಅವರಿಗೆ ಇಮ್ಮೀಡಿಯಟ್ ಆಗಿ ಜಯಲಲಿತಾ ಅವರ ಉಪವಾಸ ಮುಷ್ಕರವನ್ನು ನಿಲ್ಲಿಸತಕ್ಕದ್ದು ಇತ್ತು ಇದು ಒಂದು ಭಾಗ ಆಯಿತು. ಅದನ್ನು ತಾವು ಈ ಸಭೆಗೆ ತಿಳಿಸಬೇಕಾಗುತ್ತದೆ. ಎರಡನೆಯದಾಗಿ ವೈ.ಕೆ.ರಾಮಯ್ಯನವರು ಏನು ಅಂಕಿ ಅಂಶಗಳನ್ನು ಕೇಳುತ್ತಿದ್ದಾರೆ, ಅದರ ಬಗ್ಗೆ ಒಂದು ವಿಷಯ ಹೇಳಬೇಕಾಗಿದೆ. ಈ ವರ್ಷದ ಬಜೆಟ್‌ನಲ್ಲಿ ನೀವು ಎಷ್ಟು ದುಡ್ಡು ಇಟ್ಟಿದ್ದೀರಿ ಎನ್ನುವುದು ಲೋಕಕ್ಕೇ ಗೊತ್ತಿರತಕ್ಕ ವಿಚಾರ. ಎಷ್ಟು ಹಣವನ್ನು ನೀವು ಖರ್ಚು ಮಾಡಿದ್ದೀರಿ ಎಂಬುದು ನಮಗೆ ಗೊತ್ತಾಗ ಬೇಕಾಗುತ್ತದೆ. ಅದರಲ್ಲಿ ಏನೋ ತೊಂದರೆ ಆಗುತ್ತದೆ ಎನ್ನತಕ್ಕ ಪ್ರಶ್ನೆ ಇಲ್ಲಿ ಉದ್ಭವ ಆಗುವುದಿಲ್ಲ. ಈಗ ತಮಗೆ ಗೊತ್ತಿರುವ ಹಾಗೆ ಕಳೆದ ಮೂರು ವರ್ಷದಿಂದ ನಾವು ಆ ಸ್ಥಾನದಲ್ಲಿ ಕುಳಿತಿದ್ದಾಗ ಈ ಹೈ ಪವರ್ ಕಮಿಟಿ ಏನು ಮಾಡಿದ್ದೇವೆ, ರಿಸೋರ್ಸ್‌ಸ್ ಯಾವ ರೀತಿ ಮೊಬಲೈಸ್ ಮಾಡಬೇಕು, ಎಷ್ಟು ಖರ್ಚು ಆಗುತ್ತದೆ; ಯಾಕೆ ಆಗುತ್ತಾ ಇಲ್ಲ, ಎಲ್ ಓಸಿ ಏಕೆ ರಿಲೀಸ್ ಆಗುತ್ತಾ ಇಲ್ಲ ಎನ್ನುವ ಬಗ್ಗೆ ನಾವು ಸಾಕಷ್ಟು ಸಾರಿ ಪ್ರಸ್ತಾಪ ಮಾಡಿದ್ದೇವೆ. ಇಲ್ಲಿ ಚಂದ್ರೇಗೌಡರು ಕುಳಿತುಕೊಂಡಿರತಕ್ಕ ಸಂದರ್ಭದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ವಿಚಾರದಲ್ಲಿ ಮಾತನಾಡಿದಾಗ, ಮಾನ್ಯ ವೀರೇಂದ್ರ ಪಾಟೀಲರು ಈ ವಿಚಾರದಲ್ಲಿ ನಿನ್ನೆಯ ದಿವಸ ಮಾತನಾಡಿದ್ದಾರೆ. ಅವತ್ತು ಕೃಷ್ಣ ವಿಚಾರದಲ್ಲಿ ಬಹಳ ಚೆನ್ನಾಗಿ ಮಾತನಾಡಿದರು. ಕಾವೇರಿ ವಿಚಾರದಲ್ಲಿಯೂ ಚೆನ್ನಾಗಿ ಮಾತನಾಡಿದ್ದಾರೆ. ಪ್ರತಿ ಸಂದರ್ಭದಲ್ಲೂ ಸಹಿತ ನಮ್ಮ ಹಣವನ್ನು ಬೇರೆ ಬೇರೆ ಬಾಬುಗಳಿಗೆ ಖರ್ಚು ಮಾಡತಕ್ಕದ್ದನ್ನು ನಿಲ್ಲಿಸಿ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚಿನ ಆದ್ಯತೆಯನ್ನು ನಾವು ಕೊಡಬೇಕಾಗುತ್ತದೆ. ನಾವು ಎಲ್ಲಾ ಪಕ್ಷದವರೂ ಸಹಿತ ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ನಿಮಗೆ ಸಹಕಾರ ಕೊಡುತ್ತೇವೆ ಎನ್ನತಕ್ಕ ಮಾತನ್ನು ಸಹ ನಾವು ಹೇಳಿದ್ದೇವೆ. ಅದಕ್ಕೋಸ್ಕರ ನೀವು ಅಂಕಿ ಅಂಶಗಳನ್ನು ಆ ದೃಷ್ಟಿಯಲ್ಲಿ ಇಲ್ಲಿ ಇಡತಕ್ಕದ್ದು

ಸೂಚ್ಯ.ಆದರೆ ಒಂದು ಮಾತನ್ನು ನಾವು ಒಪ್ಪಿಕೊಳ್ಳುತ್ತೇವೆ. ಟ್ರಿಬ್ಯುನಲ್ ದೃಷ್ಟಿಯಿಂದಾಗಿ, ಟ್ರಿಬ್ಯುನಲ್‌ನಲ್ಲಿ ನಡೆಯುತ್ತಿರತಕ್ಕ ವ್ಯವಹಾರಗಳ ದೃಷ್ಟಿಯಿಂದಾಗಿ ರಾಜ್ಯದ ಹಿತಾಸಕ್ತಿಗೆ ಧಕ್ಕೆ ಬರುತ್ತದೆ ಎನ್ನುವುದಾದಲ್ಲಿ ಅಷ್ಟರ ಮಟ್ಟಿಗೆ ನೀವು ಸದನದಲ್ಲಿ ಹೇಳತಕ್ಕ ಅವಶ್ಯಕತೆ ಇರುವುದಿಲ್ಲ. ಆ ಸಭೆಯಲ್ಲಿ ಹೇಳಿ. ಆದರೆ ಉಳಿದಿರತಕ್ಕ ಅಂಶ ಅಂಶಗಳು ಏನು ಇದೆ, ಅದನ್ನು ಈ ಸಭೆಯಲ್ಲಿ ಇಡಿ. ಅದರಲ್ಲಿ ತಪ್ಪೇನಿದೆ?

ಶ್ರೀ ವೈ.ಕೆ.ರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಿನ್ನೆ ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅವರೂ ಸರ್ಕಾರದ ಒಂದು ಅಂಗ. ಈ ವರ್ಷದ ನಿಮ್ಮ ಆಯವ್ಯಯದಲ್ಲಿ ಯೋಜನೇತರ ವೆಚ್ಚಗಳ ಶೇಕಡಾ 73 ಭಾಗ. ಆ ಶೇಕಡಾ 73 ಭಾಗವನ್ನು ಕಳೆದರೆ ಯೋಜನೆಗಾಗಿ ನಿಮಗೆ ಉಳಿಯುವಂತಹ ಹಣ 1009 ಕೋಟಿ ರೂಪಾಯಿ; ಹೌದಾ? ಇದನ್ನು ನಾನು ಕೇಳುತ್ತಿಲ್ಲ; ನಿಮ್ಮ ಆಯವ್ಯಯದಲ್ಲಿರುವಂಥ ಲೆಕ್ಕವನ್ನೇ ಹೇಳುತ್ತಿದ್ದೇನೆ. ಯೋಜನಾ ವೆಚ್ಚಕ್ಕಾಗಿ 1009 ಕೋಟಿ ಹಣ ಇಟ್ಟುಕೊಂಡು ನೀರಾವರಿ, ವಿದ್ಯುಚ್ಛಕ್ತಿಗಾಗಿ 1500 ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೇವೆನ್ನುವಂಥ ಅಸತ್ಯದ ನಿಲುವನ್ನು ಈ ಸರ್ಕಾರ ತೆಗೆದುಕೊಂಡಿದೆ. ನಿಮ್ಮ ಹತ್ತಿರ ದುಡ್ಡಿಲ್ಲ; ನೀವು ಬುರುಡೆ ಬಿಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಿದೆ. ಅದು ಸತ್ಯವೇ ಅಸತ್ಯವೇ ಎನ್ನುವುದನ್ನಾದರೂ ಹೇಳಿರಿ. ನಾನು ನಿನ್ನೆ ದಿನ ಮಾತನಾಡುತ್ತಾ ಹೇಳಿದೆ. ಕಾವೇರಿ ನೀರಿಗಾಗಿ ನಡೆದಂಥ ಹೋರಾಟ ನಿಮ್ಮ ತಂದೆಯವರ ಕಾಲದಿಂದಲೂ ನಡೆಯಿತು; ನಿಮ್ಮ ಕಾಲದಲ್ಲಿಯೂ ನಡೆಯುತ್ತಿದೆ, ಮುಂದೆ ನಿಮ್ಮ ಮಕ್ಕಳ ಕಾಲದಲ್ಲೂ ನಡೆಯುತ್ತದೆಂದು ಹೇಳಿದೆ. ನದಿಗಳ ಪಾತ್ರಗಳ ವಿಚಾರವಾಗಿ ಇಂತಹ ವಿಶೇಷವಾದಂಥ ಪರಿಸ್ಥಿತಿಯಲ್ಲಿ ನಿಮ್ಮ ಸರ್ಕಾರ ಹಮ್ಮಿಕೊಂಡಿರುವಂಥ ವಿಶೇಷವಾದ ಕಾರ್ಯಕ್ರಮಗಳಾವುವು? ಈ ಯೋಜನೆಗಳ ಅನುಷ್ಠಾನವನ್ನು ತ್ವರಿತಗೊಳಿಸುವುದಕ್ಕೆ ನೀವು ಮಾಡುತ್ತಿರುವಂಥ ಕಾರ್ಯಕ್ರಮಗಳಾವುವು? ನಿಮ್ಮ ಮುಖ್ಯಮಂತ್ರಿಗಳು ಎಷ್ಟು ಸಲ ಹೆಲಿಕಾಪ್ಟರಿನಲ್ಲಿ ಹಾರಿಹೋಗಿ ಈ ಯೋಜನೆಯ ಕಾಮಗಾರಿಗಳನ್ನು ವೀಕ್ಷಿಸಿ ಬಂದಿದ್ದಾರೆ. ನೀವು ಎಷ್ಟು ಸಲ ಈ ಯೋಜನೆಗಳ ಅನುಷ್ಠಾನದ ಕುರಿತು ಚರ್ಚೆ ಮಾಡಿದ್ದೀರಿ. ಆದುದರಿಂದ, ಅದನ್ನು ಈ ಸದನಕ್ಕೆ ಈ ರಾಜ್ಯದ ಜನತೆಗೆ ತಿಳಿಸಿ. ಇಂತಹ ವಿಶೇಷವಾದ ಪರಿಸ್ಥಿತಿ ಇರುವಾಗ ನೀವು ಹಮ್ಮಿಕೊಂಡಿರುವಂಥ ವಿಶೇಷವಾದ ಕಾರ್ಯಕ್ರಗಳಾವುವು? What is the special effort you have putforth; what is the special arrangement you have made for ploughing the funds; what is the special arrangement you have made for removing the legal hitches. ಇದನ್ನು ಹೇಳಿ. ಕಾವೇರಿ ನೀರಿಗಾಗಿ ಹೋರಾಟ 1891ರಲ್ಲಿ ನಡೆಯಿತು. ಇವೊತ್ತಿಗೂ ನಡೆಯುತ್ತಿದೆ, ನಾಳೆಯೂ ನಡೆಯುತ್ತದೆ. ಆದುದರಿಂದ, ಈ ಯೋಜನೆಗಳನ್ನು ಜಾರಿಗೊಳಿಸುವುದಕ್ಕೆ ತಾವು ತೆಗೆದುಕೊಂಡಿರುವಂಥ ಕಾರ್ಯಕ್ರಮಗಳಾವುವು ಎಂಬುದನ್ನು ದಯವಿಟ್ಟು ತಿಳಿಸಬೇಕು. ಎರಡನೆಯದಾಗಿ, ಎಷ್ಟು ಹಣವನ್ನು ಈ ಯೋಜನೆಗಾಗಿ ಒದಿಗಿಸಿದ್ದೀರಿ? ನಿನ್ನೆ ನಾನು ಮಾತನಾಡಿ, ನೀವು 80 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆಯೆಂದು ಹೇಳಿದೆ. ಇದು ನಿಜವೇ ಸುಳ್ಳೆ? ಎಂಬುದನ್ನು ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ಸದಸ್ಯರಾದ ರಾಮಯ್ಯನವರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ಖರ್ಚು ಮಾಡುವಂಥ ಹಣ ತಮಗೆ ಗೊತ್ತಿರುವಂತೆ ಇದು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್. ಕೃಷ್ಣಾ ಜಲಾನಯನ ಪ್ರದೇಶದ ಕಾಮಗಾರಿಗಳಿಗೆ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಹಣವನ್ನು ಖರ್ಚು ಮಾಡಲಾಗುತ್ತದೆ. ಈಗ 10-12 ದಿವಸಗಳ ಹಿಂದೆ ಕೃಷ್ಣಾ ಜಲಾನಯನ ಪ್ರದೇಶಕ್ಕಾಗಿ ಆದರಲ್ಲೂ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಈ ವರ್ಷ ಹೆಚ್ಚುವರಿಯಾಗಿ 103 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆನ್ನತಕ್ಕ ತೀರ್ಮಾನವನ್ನು ರಾಜ್ಯ ಸಚಿವ ಸಂಪುಟ ತೆಗೆದುಕೊಂಡಿದೆ. ಕಾಮಗಾರಿಗಳು ಹೇಗೆ ನಡೆಯುತ್ತವೆಯೋ ಹಾಗೆ ನಾವು ಎಲ್.ಓ.ಸಿ.ಯನ್ನು ಬಿಡುಗಡೆ ಮಾಡಿಕೊಂಡು ಹೋಗುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಏನಾಗುತ್ತದೆಂದರೆ, ಎಲ್‌ಓಸಿಗಳನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬಂದು ಒಂದೊಂದು ಸಲ ಅರಿಯರ್ಸ್ ಅಗಾಧ ಮೊತ್ತದಲ್ಲಿ ಉಳಿದುಬಿಡುತ್ತವೆ. ನಿನ್ನೆ ತಾವು ಯಾವ ವಿಚಾರವನ್ನು ಪ್ರತಿಪಾದಿಸಿದಿರೋ ಅದನ್ನು ನಾನು ಒಪ್ಪಲೇಬೇಕಾಗಿದೆ. ಆ ವಿಚಾರ ಯಾವುದು, ಏನು ಎನ್ನತಕ್ಕಂಥಾದ್ದನ್ನು ವಿಂಗಡಣೆ ಮಾಡುವುದಕ್ಕೆ ನಾನು ಪ್ರಯತ್ನಿಸಿದೆ, ಒಂದು ಪ್ರಶ್ನೆಯನ್ನು ನಾನು ಮಾನ್ಯ ಸದಸ್ಯರಾದ ರಾಮಯ್ಯನವರಿಗೆ ಕೇಳುತ್ತೇನೆ. ಏನೆಂದರೆ, ಯಾವ ಸರ್ಕಾರವಿದ್ದಾಗ, ಯಾವ ಕಾಮಗಾರಿಯಲ್ಲಿ ಬಾಕಿ ಇಲ್ಲದೆ ಕೆಲಸ ಸರಾಗವಾಗಿ ನಡೆದಿದೆ ಎನ್ನತಕ್ಕದ್ದರ ಬಗ್ಗೆ ತಾವು ನನಗೆ ಹೇಳಬೇಕು.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಮಾತನಾಡುವಾಗ ಅವರು ಕುಳಿತುಕೊಂಡಿದ್ದರು. ನಾನು ಆಗ ಒಂದು ಮಾತನ್ನು ಹೇಳಿದೆ. ಏನೆಂದರೆ, ಈ ರಾಜ್ಯದ ನೀರಾವರಿ ವಿಷಯದಲ್ಲಿ 'ಅನ್ಯಾಯದ ಪರಂಪರೆಯಾಗಿದೆ' ಎಂದು. 'ಪರಂಪರೆ' ಎನ್ನುವಂಥ ಪದದ ಅರ್ಥ ಬಹುಶಃ ಹಿರಿಯರಾದಂಥ ಮಂತ್ರಿಗಳಿಗೆ ಗೊತ್ತಿದೆ. 'ಪರಂಪರೆ' ಎಂದರೆ ಸತತವಾಗಿ, ಅನೂಚಾನವಾಗಿ ಬಂದಿರುವಂಥ ವ್ಯವಸ್ಥೆ. ಆ ವ್ಯವಸ್ಥೆಯಲ್ಲಿ ಎಲ್ಲಾ ಸರ್ಕಾರಗಳು ಸೇರಿಕೊಂಡಿವೆ ಎಂಬುದು ನನ್ನ ಭಾವನೆ. ಆದರೆ, it is only a difference of degree. ಅವೊತ್ತು ಒಂದೆರಡು ಕೋಟಿ ರೂಪಾಯಿಗಳ ವ್ಯತ್ಯಾಸವಾದರೆ ಇವೊತ್ತು ಎರಡು ಕೋಟಿಗೆ ಎಂಭತ್ತು ಕೋಟಿ ವ್ಯತ್ಯಾಸವಾಯಿತು. ದಯಮಾಡಿ ಈ ಕುರಿತ ಅಂಕಿ-ಅಂಶ ತೆಗೆದು ಹೇಳಿ. ಯಾವುದಾದರೂ ಹಂತದಲ್ಲಿ ಕೃಷ್ಣಾ, ಕಾವೇರಿ ಯೋಜನೆಗಾಗಿ 80 ಕೋಟಿ ರೂಪಾಯಿಗಳ ಬಿಲ್ ಕೊಡದಿರುವಂಥ ಪರಿಸ್ಥಿತಿ ಹಿಂದೆ ಯಾವತ್ತಾದರೂ ಬಂದಿತ್ತೇ? ಅಂತಹ ಪರಿಸ್ಥಿತಿ ಬಂದಿದ್ದರೆ ಯಾವಾಗ ಬಂದಿತ್ತು?

ಶ್ರೀ ಎಸ್.ಎಂ. ಕೃಷ್ಣ : ಹಿಂದೆ ಯಾವ ವರ್ಷಗಳಲ್ಲಿ ಇಷ್ಟು ಪ್ರಮಾಣದಲ್ಲಿ ಕಾವೇರಿ, ಕೃಷ್ಣಾ ಯೋಜನೆಗಾಗಿ ಹಣವನ್ನು ಒದಗಿಸಿದ್ದಾರೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ವೈ.ಕೆ. ರಾಮಯ್ಯ : ಈ ಸರ್ಕಾರದ ಧೋರಣೆ ಏನೆಂಬುದೇ ನನಗರ್ಥವಾಗುತ್ತಿಲ್ಲ. ನಮ್ಮ ಸರ್ಕಾರವಿದ್ದಾಗ ಒಂದು ಮೂಟೆ ಸಿಮೆಂಟಿಗೆ 10 ರೂಪಾಯಿ ಬೆಲೆ ಇತ್ತು. ಇದರ ಹಿನ್ನೆಲೆಯಲ್ಲಿ ಎಷ್ಟು ಹಣವನ್ನು ಒದಗಿಸಿದ್ದೀರೆಂದು ಅದಕ್ಕೇ ನಾನು ಕೇಳಿದ್ದು. ನೀರಾವರಿ ವಿಷಯದಲ್ಲಿ ಈ ರಾಜ್ಯದ ಜನರನ್ನು ಅಂಕಿ-ಅಂಶಗಳ ಜಾಲದಲ್ಲಿ ಸಿಕ್ಕಿಸಿದ್ದೀರಿ; ಅವರನ್ನು ಮೋಸದ ಪರಂಪರೆಯತ್ತ ಕೊಂಡೊಯ್ಯುತ್ತಿದ್ದೀರಿ. ಎಷ್ಟು ಹಣ ಒದಗಿಸಿದ್ದೀರಿ? ಎಷ್ಟು ಹಣಖರ್ಚು ಮಾಡಿದ್ದೀರಿ ಎಂಬುದರ ವಿವರವನ್ನು ಅದಕ್ಕೇ ನಾನು ಕೇಳುತ್ತಿದ್ದೇನೆ. ಇದನ್ನು ಮೊದಲು ಹೇಳಿ. ಆಯವ್ಯಯಕ್ಕೆ ಅಪಚಾರ

ಮಾಡುವಂಥ ಪರಿಸ್ಥಿತಿಯನ್ನು ಇಟ್ಟುಕೊಂಡಿದ್ದೇವೆಂದು ನೀವೇ ಹೇಳಿದಿರಿ. ನಾನು ಮತ್ತೆ ಹೇಳುತ್ತಿದ್ದೇನೆ; ಆಯವ್ಯಯಕ್ಕೆ ಅಪಚಾರ ಮಾಡುವಂಥ, ಅಭಿವೃದ್ಧಿ ಕಾರ್ಯಗಳಿಗೆ ಆತಂಕ ತರುವಂಥ ಎಲ್.ಓ.ಸಿ. ಸಿಸ್ಟಮ್ ಇರುವುದರಿಂದ ನೀವು ನೀರಾವರಿಗೆ ಹಣ ಒದಗಿಸಿದ್ದೇವೆಂದು ಹೇಳುತ್ತಿರುವುದು ಬರೀ ಸ್ಟಂಟ್ ಆಗಿದೆ. ಮೊದಲನೆಯದಾಗಿ, ಖರ್ಚು ಮಾಡುವುದಕ್ಕೇ ನಿಮ್ಮ ಹತ್ತಿರ ಹಣವಿಲ್ಲ. ಹಣ ಇದೆ ಎನ್ನುವುದಾದರೆ, ಯೋಜನೆಗಳಿಗೆ 200-300ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಒಪ್ಪಿಕೊಳ್ಳುತ್ತೇವೆ. ದಯಮಾಡಿ, ಇದುವರೆವಿಗೆ ಎಷ್ಟು ಹಣ ಖರ್ಚಾಗಿದೆ ಎಂಬ ವಿವರ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪ್ರಶ್ನೆ ಏನೆಂದರೆ, ಈಗ ನಾವು ಒಪ್ಪಿಕೊಳ್ಳುತ್ತೇವೆ. ನಾವು ಅತ್ತ ಕಡೆ ಆರೂವರೆ ವರ್ಷಗಳ ಕಾಲ ಕುಳಿತುಕೊಂಡಿದ್ದೆವು. ನಮ್ಮ ಸರ್ಕಾರವಿದ್ದಾಗ ಹೆಚ್ಚು ಹಣ ಒದಗಿಸಿಲ್ಲ; ನೀವು ಹೆಚ್ಚು ಹಣ ಖರ್ಚು ಮಾಡಿದ್ದೀರಿ. We complement you for that. ಆದರೆ, ನೀವು ಪ್ರಾಮಾಣಿಕವಾಗಿ ಹೇಳಬೇಕು. ಕಳೆದೆರಡು ವರ್ಷಗಳಲ್ಲಿ ಕಾವೇರಿ ಜಲಾನಯನ ಪ್ರದೇಶದ ಕಾಮಗಾರಿಗಾಗಿ ವಾಸ್ತವಿಕವಾಗಿ ಎಷ್ಟು ಹಣ ಖರ್ಚಾಗಿದೆಯೆಂಬುದನ್ನು ಹೇಳಿ. ಕೃಷ್ಣಾ ಹಾಗೂ ಕಾವೇರಿ ಜಲಾನಯನ ಪ್ರದೇಶಗಳೆರಡರ ಬಗ್ಗೆಯೂ ಹೇಳಿ. ಬಜೆಟ್ ಅಲೋಕೇಷನ್ ಎಷ್ಟಿತ್ತು? ಖರ್ಚು ಮಾಡಿರುವ ಹಣವೆಷ್ಟು ಎಂಬುದನ್ನು ನಿಖರವಾಗಿ ಹೇಳಿ. ಕಾವೇರಿ ಜಲಾನಯನ ಪ್ರದೇಶದ ಕಾಮಗಾರಿಗಳಿಗೆ ಖರ್ಚು ಮಾಡುವ ಹಣ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ಗೆ ಬರುತ್ತದೆ. ಇದನ್ನು ನಾವು ಒಪ್ಪುತ್ತೇವೆ, ಇದರಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ? ನಾನು ಬೆಲೆಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅವೊತ್ತು ಒಂದು ಮೂಟೆ ಸಿಮೆಂಟ್ 40 ರೂಪಾಯಿಗಳಿದ್ದುದು ಇವೊತ್ತು 120 ರೂಪಾಯಿಗಳಾಗಿದೆಯೆಂದು ಹೇಳಿ. ಆದರೆ ವಾಸ್ತವಿಕವಾಗಿ ಕೆಲಸ ಎಷ್ಟಾಗಿದೆ? ಎಷ್ಟು ಕಿಲೋಮೀಟರ್‌ಗಳ ತನಕ ಕಾಲುವೆ ಕಾಮಗಾರಿ ಆಗಿದೆ? ಎಷ್ಟು ಕಿಲೋಮೀಟರ್‌ವರೆಗೆ ಲೈನಿಂಗ್ ಮಾಡಿದ್ದೀರಿ? ಯಾವ್ಯಾವ ಅಣೆಕಟ್ಟುಗಳನ್ನು ನೀವು ಪೂರ್ತಿಗೊಳಿಸಿದ್ದೀರಿ? ಆ ಅಣೆಕಟ್ಟುಗಳ ಕಾಮಗಾರಿ ಯಾವ ಹಂತದಲ್ಲಿತ್ತು? ಇವುಗಳನ್ನು ನಾನು ಕೇಳುವುದಕ್ಕೆ ಹೋಗುತ್ತಿಲ್ಲ. ಇದರ ಬಗ್ಗೆ ನಾವು ಹೈ-ಪವರ್ ಕಮಿಟಿಯಲ್ಲಿ ಚರ್ಚೆ ಮಾಡೋಣ. ಆದರೆ, ವಾಸ್ತವಿಕವಾಗಿ ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಕೆ. ಶಿವಮೂರ್ತಿ : ಈಗತಾನೇ ಮಾನ್ಯ ಸದಸ್ಯರಾದ ಬೈರೇಗೌಡರು ಮಾತನಾಡಿ ಅಂಕಿ-ಅಂಶ ಕೊಡಬೇಡಿ ಎಂದು ಹೇಳಿದ್ದಾರೆ; ಆದರೆ, ವೈ.ಕೆ.ರಾಮಯ್ಯನವರು ಅಂಕಿ-ಅಂಶ ಕೊಡಲೇಬೇಕೆಂದು ಹೇಳಿದ್ದಾರೆ. ಇವರುಗಳು ಒಂದೇ ಪಕ್ಷದಲ್ಲಿದ್ದುಕೊಂಡು ಒಂದು ತೀರ್ಮಾನಕ್ಕೆ ಬರದೆಹೋದರೆ ಹೇಗೆ? ಸರ್ಕಾರ ಉತ್ತರ ಕೊಡಬೇಕಾದರೆ ವಿರೋಧ ಪಕ್ಷದವರಾದ ತಾವುಗಳು ಒಂದು ಅಭಿಪ್ರಾಯಕ್ಕೆ ಬರಬೇಕು. ಬೈರೇಗೌಡರು, ಸಿಂಧ್ಯರವರು ಮತ್ತು ರಾಮಯ್ಯನವರು ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಾರೆ. ನಿಮ್ಮಲ್ಲಿಯೇ ಒಗ್ಗಟ್ಟು ಇಲ್ಲವೆಂದು ಕಾಣುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ: ನಿಮ್ಮಲ್ಲಿರುವ ಒಗ್ಗಟ್ಟು ಕಂಡು ನಮಗೆ ಬಹಳ ಸಂತೋಷವಾಗಿದೆ. ನಿಮ್ಮ ಒಗ್ಗಟ್ಟು ಎಂತಹುದೆಂದು ಇಡೀ ದೇಶವೇ ನೋಡಿದೆ.

ಶ್ರೀ ಎಸ್.ಎಂ.ಕೃಷ್ಣ : ನಿನ್ನೆ ತಾನೇ ಮಾನ್ಯ ರಾಮಯ್ಯನವರು ಮಾತನಾಡಿ 'ಈ ಅಂಕಿ-ಅಂಶಗಳ ಜಾಲದಿಂದ ಕರ್ನಾಟಕದ ಜನತೆಯ ಕಣ್ಣಿಗೆ ಮಣ್ಣೆರಚಬೇಡಿ' ಎಂದು ಹೇಳಿದರು. ಆದಕ್ಕೋಸ್ಕರವೇ ನಾನು ಅಂಕಿ-ಅಂಶಗಳ ಗೋಜಿಗೆ ಹೋಗಿಲ್ಲ. ಈಗ ನೀವು ಅಂಕಿ-ಅಂಶಗಳ ಕುರಿತು

ಕೇಳುತ್ತಿದ್ದೀರಿ. ಆದುದರಿಂದ, ಒದಗಿಸಿರುವ ಹಣ ಹಾಗೂ ಖರ್ಚು ಮಾಡಿರುವ ವಿವರಗಳ ಬಗ್ಗೆ ಅಂಕಿ-ಅಂಶ ಕೊಡುತ್ತೇನೆ. ಕಾವೇರಿ ಜಲಾನಯನ ಪ್ರದೇಶಾಭಿವೃದ್ಧಿಗಾಗಿ 1990-91ನೇ ಸಾಲಿನಲ್ಲಿ 113 ಕೋಟಿ 75 ಲಕ್ಷ ರೂಪಾಯಿಗಳ ಗ್ರಾಂಟ್ ಕೊಟ್ಟಿದ್ದು, ಅದರಲ್ಲಿ 95 ಕೋಟಿ 83 ಲಕ್ಷ ರೂಪಾಯಿಗಳು 1991-92ನೇ ಸಾಲಿನಲ್ಲಿ 138 ಕೋಟಿ ರೂಪಾಯಿಗಳ ಗ್ರಾಂಟ್ ಬಿಡುಗಡೆ ಮಾಡಿದ್ದು 140 ಕೋಟಿ ರೂಪಾಯಿಗಳು ಖರ್ಚಾಗಿದೆ; 1992-93ನೇ ಸಾಲಿನಲ್ಲಿ 222 ಕೋಟಿ 60 ಲಕ್ಷ ಗ್ರಾಂಟ್ ಕೊಟ್ಟಿದ್ದು 203 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಹಾಗೆಯೇ 1993-94ನೇ ಸಾಲಿನಲ್ಲಿ 282 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದ್ದು ಅದರಲ್ಲಿ ಇದುವರೆವಿಗೂ 57.28 ಕೋಟಿ ರೂಪಾಯಿಗಳು ಖರ್ಚಾಗಿದೆ. ಮಾನ್ಯ ಸದಸ್ಯರಾದ ರಾಮಯ್ಯನವರು ಹೇಳುವಂಥ ಮಾತಿನಲ್ಲಿ ಬಹಳ ಅರ್ಥವಿದೆ; ಪೆಂಡಿಂಗ್ ಬಿಲ್ಸ್ ಸಹ ಇದೆ. ಈ ಪೆಂಡಿಂಗ್ ಬಿಲ್ಸ್‌ನ ಅರಿಯರ್ಸ್ ಮೊತ್ತವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಈಗಾಗಲ್ ಮಾನ್ಯ ಹಣಕಾಸು ಸಚಿವರಾದ ಮಾನ್ಯ ಮುಖ್ಯಮಂತ್ರಿಗಳು ಕೆಲವು ಹೆಜ್ಜೆಗಳನ್ನು ತೆಗೆದುಕೊಳ್ಳುವವರಿದ್ದಾರೆ. ಆದುದರಿಂದ, ಈ ಅರಿಯರ್ಸ್ ಗಾತ್ರವನ್ನು ಕಡಿಮೆ ಮಾಡುವುದರಲ್ಲಿ ನಾವು ಕೊಂಚ ಮಟ್ಟಿಗೆ ಯಶಸ್ಸು ಪಡೆಯುತ್ತೇವೆ ಎನ್ನುವಂಥ ಆಶ್ವಾಸನೆ ಇದೆ.

ಶ್ರೀ ವೈ.ಕೆ.ರಾಮಯ್ಯ : ತಾವು ತಮ್ಮ ಉತ್ಸಾಹವನ್ನು ಎಲ್ಲಾ ವಿಷಯಗಳಲ್ಲೂ ತೋರಿಸಿ ನಿರ್ಭೀತರಾಗಿ ಹೇಳುತ್ತೀರಿ. ಅದೇ ರೀತಿ ಪೆಂಡಿಂಗ್ ಬಿಲ್ಸ್ ಎಷ್ಟಿದೆಯೆಂದು ಹೇಳಿ. ರಾಜ್ಯದ ಜನರು ಕೂಡ ತಮ್ಮ ಆಸಕ್ತಿಯ ಬಗ್ಗೆ ಸ್ವಲ್ಪ ತಿಳಿದುಕೊಳ್ಳಲಿ.

ಶ್ರೀ ಆರ್.ವಿ.ದೇಶಪಾಂಡೆ : ಎಷ್ಟು ಬಿಲ್ಸ್ ಪೆಂಡಿಂಗ್ ಇದೆ ಎನ್ನುವುದರ ಜೊತೆಗೆ ಯಾವಾಗಿನಿಂದ ಬಿಲ್ಸ್ ಪೆಂಡಿಂಗ್ ಇದೆ ಎನ್ನುವುದೂ ಕೂಡ ಬಹಳ ಮುಖ್ಯ. ಕಳೆದ ವರ್ಷದ ಪೆಂಡಿಂಗ್ ಬಿಲ್ಸ್ ಇದೆಯೇ? ಅದೂ ಬಹಳ ಮುಖ್ಯ. ಹಣಕಾಸಿನ ಸ್ಥಿತಿ ಬಹಳ ಚೆನ್ನಾಗಿದೆ ಎಂದು

12.05 ಪಿ.ಎಂ

ನಮ್ಮ ಮುಖ್ಯಮಂತ್ರಿಗಳು ಎಲ್ಲಾ ಕಡೆಯೂ ಹೇಳುತ್ತಿದ್ದಾರೆ. ನಾವು ಬ್ಯಾಂಕ್‌ರಪ್ಟ್ ಇದೆ ಎಂದು ಹೇಳುತ್ತಿದ್ದೇವೆ. ಕಂದಾಯ ಮಂತ್ರಿಗಳು ನಮಗೆ ಸಪೋರ್ಟ್ ಮಾಡಿದ್ದಾರೆ. ಪೆಂಡಿಂಗ್ ಬಿಲ್ಸ್ ಇದೆ ಎಂದು ಹೇಳುತ್ತಿದ್ದೀರಿ. ಯಾವಾಗಿನಿಂದ ಇದೆ, ಎಷ್ಟು ಇದೆ ಎಂದು ಹೇಳಿದರೆ ಒಳ್ಳೆಯದು.

ಶ್ರೀ ವೈ.ಕೆ.ರಾಮಯ್ಯ :ರಾಜಕಾರಣದ್ದು ಇದರೊಳಗೇನಾದರೂ ಇದೆಯೇ ಎಂದು ನೋಡೋಣ. ಮಾನ್ಯ ಮುಖ್ಯ ಮಂತ್ರಿಗಳು ನಿಮಗೆ ಬೇಕೆಂತಲೇ ತಡೆಹಿಡಿಯಬಹುದು; ನಿಮಗೆ ಗೊತ್ತಿಲ್ಲ. ಅದನ್ನೂ ಸ್ವಲ್ಪ ತಿಳಿದುಕೊಳ್ಳಬೇಕಾಗಿದೆ.

ಶ್ರೀ ಎಸ್.ಎಂ.ಕೃಷ್ಣ : ಪೆಂಡಿಂಗ್ ಬಿಲ್ಸ್ ಬಿಟ್ವೀನ್ ಕೃಷ್ಣ ಆಂಡ್ ಕಾವೇರಿ 80 ಕೋಟಿ ಇದೆ. ನನಗೆ ಸ್ವಲ್ಪ ಸಮಯ ಕೊಟ್ಟರೆ ಬ್ರೇಕಪ್ ಕೊಡುತ್ತೇನೆ; ತಮಗೆ ಮತ್ತು ರಾಮಯ್ಯನವರಿಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸಥಸ್ಯರು : ಅವರಿಬ್ಬರಿಗೆ ಹೇಳಿದರೆ ಸಾಲದು, ನಮಗೂ ತಿಳಿಯಬೇಕು.

ಶ್ರೀ ವೈ.ಕೆ.ರಾಮಯ್ಯ : ಕಾವೇರಿ ನದಿ ಪಾತ್ರದಲ್ಲಿರತಕ್ಕಂತಹ ಜನರ ವಿಶೇಷ ಪರಿಸ್ಥಿತಿಯನ್ನು ನೀಗಲಿಕ್ಕೆ ತೆಗೆದುಕೊಂಡಿರುವಂತಹ ವಿಶೇಷ ಕಾರ್ಯಕ್ರಮ ಏನು? 80 ಕೋಟಿ ಹಣ ಕೊಡದೆ ಆ ಕಂಟ್ರಾಕ್ಟರರಿಗೆ ತೊಂದರೆಯಾಗಿದೆ. ಕೃಷ್ಣ ನೀರನ್ನು 2ಸಾವಿರ ಇಸವಿಗೆ ಕೊಡುತ್ತಾರಂತೆ; ಕಾವೇರಿ ನದಿ

ನೀರನ್ನು ಟ್ರಿಬ್ಯೂನಲ್ ಜಡ್ಜ್‌ಮೆಂಟ್ ಬರುವುದಕ್ಕಿಂತ ಮೊದಲೇ ಕೊಡುತ್ತಾರಂತೆ. ಇದು ರಾಜ್ಯ ಸರಕಾರ ಈ ವಿಶೇಷವಾದ ಪರಿಸ್ಥಿತಿಯಲ್ಲಿ ಏರ್ಪಾಡು ಮಾಡಿರತಕ್ಕಂತಹ ವಿಶೇಷ ಕಾರ್ಯಕ್ರಮ, ಹೌದಾ?

ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ರಾಮಯ್ಯನವರಿಗೆ ಕಳವಳ ಬೇಡ. ನೂರಾರು ಕೋಟಿಗಳನ್ನು ಖರ್ಚು ಮಾಡತಕ್ಕಂತಹ ಸರಕಾರಕ್ಕೆ 80 ಕೋಟಿಗಳನ್ನು ತುಂಬಿಸತಕ್ಕಂತಹ ಶಕ್ತಿ ಇಲ್ಲ ಅನ್ನತಕ್ಕಂತಹ ಅನುಮಾನ ಬೇಡ. ಕೆಲವು ಕಾರಣಗಳಿಂದ ಕೆಲವು ಸಮಯದಲ್ಲಿ ಈ ಅರಿಯರ್ಸ್ ಅಕ್ಯುಮಲೇಟಾಗುತ್ತಾ ಹೋಗುತ್ತದೆ. ಆದರೆ ಕೆಲಸ ನಿಂತಿದೆಯೇ ಎಂದು ಪ್ರಶ್ನೆ ಕೇಳುವುದು ಸರಿಯಲ್ಲ. ಕಂಟ್ರಾಕ್ಟರರಿಗೆ ತೊಂದರೆಯಾಗುತ್ತದೆಂಬುದನ್ನು ಒಪ್ಪುತ್ತೇನೆ. ನಾನು ನೋಡಿದ ಮಟ್ಟಿಗೆ, ಈಗಾಗಲೇ ನಾನು ರಾಮಯ್ಯನವರ ಜೊತೆ ವೈ-ಅಲೈನ್‌ಮೆಂಟಿಗೆ 2 ಸಲ ಹೋಗಿದ್ದೇನೆ. ಡೀಪ್‌ಕಟ್‌ಗೆ ಎರಡು ಸಲ ಹೋಗಿದ್ದೇನೆ. ಉದ್ದಕ್ಕೂ ಕೆಲಸಗಳು ನಡೆಯುತ್ತಿದೆ. ಅಲ್ಲಲ್ಲಿ ಕೆಲವು ಕಡೆ ಕೆಲಸ ಕುಂಟುತ್ತಾ ನಡೆಯುತ್ತಿರಬಹುದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಹೋದ ಸಲ ಭಾರಿ ಕ್ಲಿಯರೆನ್ಸ್ ಆಗಿದ್ದು ತಮ್ಮ ಪಾರ್ಲಿಮೆಂಟ್ ಚುನಾವಣೆ ಕಾಲದಲ್ಲಿ. ಇದಕ್ಕೆ ಕಾರಣವೇನು ಎಂದು ನಾನು ರಾಮಯ್ಯನವರು ಇಲ್ಲಿ ಮಾತನಾಡುವುದಿಲ್ಲ. ಮತ್ತೊಂದು ಚುನಾವಣೆ ಬರುವವರೆಗೆ ಹೇಮಾವತಿ ನಾಲೆಯ ಬಿಲ್ಸ್‌ಗಳು ಪೆಂಡಿಂಗ್ ಇರುತ್ತವೆಯೇ ಎಂದು ಕೇಳಬೇಕಾಗಿದೆ. ಭಾರಿ ಕ್ಲಿಯರೆನ್ಸ್ ಆಗಿತ್ತು ಪಾರ್ಲಿಮೆಂಟ್ ಚುನಾವಣೆ ಡಿಕ್ಲೇರ್ ಮಾಡಿದ ಮೇಲೆ. ಬೇಕಿದ್ದರೆ ದಾಖಲೆ ತೆಗೆಸಿ ನೋಡಬಹುದು ತಾವು.

ಶ್ರೀ ಎಸ್.ಎಂ. ಕೃಷ್ಣ : ಆ ದಾಖಲೆಗಳನ್ನು ತರಿಸಿಕೊಂಡು ನೋಡತಕ್ಕಂತಹ ವ್ಯವಧಾನಕ್ಕೆ ನಾನು ಕೈ ಹಾಕುವುದಿಲ್ಲ. ಆದರೆ ತ್ವರಿತ ಗತಿಯಲ್ಲಿ ಡಿಸೆಂಬರಿಗೆ ತುಮಕೂರಿಗೆ ನೀರು ತರಬೇಕೆನ್ನುವುದು ನನ್ನ ಅಭಿಲಾಷೆ. ಆ ಅಭಿಲಾಷೆಯನ್ನು ನೀಗಿಸುವುದಕ್ಕೆ .....

ಶ್ರೀ ವೈ.ಕೆ.ರಾಮಯ್ಯ : 2 ಸಾರಿ ವೈ ಅಲೈನ್‌ಮೆಂಟ್ ಕೆಲಸ ನೋಡುವುದಕ್ಕೆ ಬಂದಿದ್ದಾರೆ. ಆಗ ಬಹಳ ಜ್ವರ ಅವರಿಗಿತ್ತು. ಅದಕ್ಕಾಗಿ ಅಭಿನಂದಿಸುತ್ತೇನೆ. ಅವರು ಬರುವುದರಿಂದ ಕೆಲಸವಾಗುತ್ತದೆಂದು ಅಲ್ಲ. ಆದರೆ ತಮ್ಮ ಶ್ರಮ ಮತ್ತು ಪ್ರಾಮಾಣಿಕತೆಗೆ ಒತ್ತು ಸಿಗುತ್ತದೆಯೇ? ಆ ಒತ್ತು ಸಿಗಬೇಕಿರುವುದು ಹಣದಲ್ಲಿ. ಮದ್ದೂರಿನ ಅವರಿಗೆ ಕಾವೇರಿ ನೀರಿನ ಬಗ್ಗೆ ಆಸಕ್ತಿಯಿಲ್ಲ ಎಂದು ಹೇಳತಕ್ಕಂತಹ ಪ್ರಾಮಾಣಿಕತನದ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಆ ಸಣ್ಣತನಕ್ಕೆ ನಾನು ಇಳಿಯುವುದಿಲ್ಲ; ಹೇಳಿದರೆ ಯಾರೂ ನಂಬುವುದಿಲ್ಲ. ದೇವರೂ ಮೆಚ್ಚುವುದಿಲ್ಲ. ಆದರೆ ನಿಮಗಿರತಕ್ಕಂತಹ ಪ್ರಾಮಾಣಿಕ ಪ್ರಯತ್ನವನ್ನು ಕಾರ್ಯ ರೂಪಕ್ಕೆ ತರುವಂತಹ ಸಂದರ್ಭದಲ್ಲಿ ನಿಮಗೆ ಅವಶ್ಯಕವಾಗಿ ಬೇಕಾಗಿರತಕ್ಕಂತಹ ಒತ್ತು ಸಿಗುತ್ತದೆಯೇ ಎಂಬ ಬಗ್ಗೆ ಪ್ರಾಮಾಣಿಕವಾದಂಥ ಆತಂಕ ಇದೆ; ಅನುಮಾನವಿದೆ. ಅದಕ್ಕಾಗಿ ಒತ್ತಿ ಒತ್ತಿ ಕೇಳುತ್ತಿರುವುದು. ಈ ಕಾರಣಕ್ಕಾಗಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಂತಹ ಸಂದರ್ಭದಲ್ಲಿ ಅನುಷ್ಠಾನದ ಗತಿಯನ್ನು ತ್ವರಿತಗೊಳಿಸಬೇಕು. ನೀವು ಹಾಕಿಕೊಂಡಿರುವಂತಹ ವಿಶೇಷವಾದ ಕಾರ್ಯಕ್ರಮವೇನು ಇದೆ; ಅದರ ಬಗ್ಗೆ ಅವರು ಆಸಕ್ತಿ ವಹಿಸಿದ್ದಾರೆಯೇ ಎಂಬುದನ್ನು ಹೇಳಬೇಕು. ನಾನು ಒಂದು ಉದಾಹರಣೆ ಕೊಡುತ್ತೇನೆ. ತುಮಕೂರು ಜಿಲ್ಲೆಗೆ ನೀರು ಬರಬೇಕಾಗಿರುವುದಕ್ಕೆ ಮೂರು ಪ್ರಮುಖವಾದ ಬಾಟಲ್ ನೆಕ್ ಇದೆ. ಒಂದು ಮಾವಿನ ಕೆರೆ ಅಕ್ವಿಡೇಟ್ ಕೆಲಸವಾಗಬೇಕು; 2ನೆಯದು ರೀ ಮಾಡಲಿಂಗ್ ಆಫ್ ದಿ ಸಿಡಿ ವರ್ಕ್ಸ್ ಆಗಬೇಕು; 3ನೆಯದು ಆಗಮನದ ಆಳ ಕಾಲುವೆ ನಿರ್ಗಮನದ ಆಳ ಕಾಲುವೆ Approach Deepcut, Exit

Deepcut. ಈ ಮೂರು ಕೆಲಸ ಆಗಬೇಕು. ನಾನು ಇಷ್ಟು ಸಾರಿ ಕಾಗದ ಬರೆದಿದ್ದರೂ ಆ ರೀ ಮಾಡಲಿಂಗ್ ಆಫ್ ದಿ ಸಿ.ಡಿ. ವರ್ಕ್ಸ್ ಅನ್ನು ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗುವಷ್ಟು ಕರುಣೆ ನಿಮ್ಮ ಸರಕಾರಕ್ಕೆ ಬರಲಿಲ್ಲವಲ್ಲ. ಆದರೂ ನೀವು ಕೆಲಸವೆಲ್ಲಾ ತೀವ್ರಗತಿಯಲ್ಲಿ ನಡೆಯುತ್ತಿದೆಯೆಂದು ಹೇಳುತ್ತಿದ್ದೀರಿ. I can understand in a normal course. This is in an abnormal situtation.

Normal course ನಲ್ಲಿ ಯಾವುದೂ ಇಲ್ಲ. ಅಂಥದ್ದು ಇದ್ದಿದ್ದರೆ 11ಲಕ್ಷ ಎಕರೆಗೆ ಜಾಸ್ತಿ ಮಾಡಬಾರದೆಂದು ಕತ್ತಿ ಇಲ್ಲದಿದ್ದರೆ ನ್ಯಾಯ ಮಂಡಲಿ ಮುಂದೆ ವಿಶೇಷ ಪ್ರಸ್ತಾವವಿಲ್ಲದಿದ್ದರೆ ನಿಧಾನವಾಗಿ 1-1ಕೋಟಿ ಖರ್ಚು ಮಾಡಿಕೊಂಡು ಹೋಗಿ ಎಂದು ಹೇಳಬಹುದಿತ್ತು. ಆದರೆ ಈಗ ಪರಿಸ್ಥಿತಿ ವಿಶೇಷವಾಗಿದೆ. This is in an abnormal situation. I am pressing you, I am requesting you, this is in abnormal situation. ಈ ಒಂದು ವಿಶೇಷವಾದ ಪರಿಸ್ಥಿತಿಯಲ್ಲಿ ವಿಶೇಷವಾದಂತಹ ಕಾರ್ಯಕ್ರಮವೇನು ಮಾಡಿದ್ದೀರಿ? ವಿಶೇಷವಾದಂತಹ ರೀತಿಯಲ್ಲಿ ಹಣ ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಸಣ್ಣ ಪಾಯಿಂಟ್. 1990-91, 91-92, 92-93, 93-94ರಲ್ಲಿ ಎಷ್ಟು ಹಣವನ್ನು ಇಟ್ಟಿದ್ದಾರೆ, ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂಬ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಪ್ರತಿವರ್ಷ ಹೆಚ್ಚಿಗೆ ಆಗಿರುವುದನ್ನೂ ಅವರು ಹೇಳಿದ್ದಾರೆ. ಖರ್ಚು ಮಾಡುವುದರಲ್ಲೂ ಕೂಡ ಇವರಿಗೆ ಸಮಾಧಾನವಾಗುವಷ್ಟು ಹಣವನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಇದೊಂದೇ ಅಲ್ಲದೆ ಇನ್ನೂ ಬೇರೆ ಬೇರೆ ಕಾರ್ಯಕ್ರಮಗಳೂ ಇವೆ. ಇಷ್ಟು ಪ್ರಾಮಾಣಿಕವಾಗಿ ಸರ್ಕಾರ ಕೆಲಸ ಮಾಡಿರುವುದನ್ನು ಪ್ರಾಮಾಣಿಕವಾಗಿಯೇ ಹೇಳಿದ್ದರೂ ಕೂಡ ಯಾವುದೋ ಒಂದನ್ನು ಹಿಡಿದುಕೊಂಡು, ಅವರು ಉತ್ತರವನ್ನೂ ಹೇಳುವುದಕ್ಕೂ ಬಿಡದೆ ಪ್ರತಿಯೊಂದು ಸಂದರ್ಭದಲ್ಲೂ ಇವರು ಅಡ್ಡಿಪಡಿಸುತ್ತಲೇ ಬಂದರೆ ಹೇಗೆ? ಕಾವೇರಿ ಯೋಜನೆ ಕೇವಲ ಮಾನ್ಯ ರಾಮಯ್ಯನವರಿಗೆ ಮಾತ್ರ ನಿಂತಿದೆಯೋ, ಅಥವಾ ಬೇರೆಯವರಿಗೂ ನಿಂತಿದೆಯೋ? ಸರ್ಕಾರ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದೆ ಎಂಬುದನ್ನು ಹೇಳಿದ್ದಾರೆ. ಇನ್ನೇನು ಹೇಳಬೇಕು? ಸರ್ಕಾರ ಎಷ್ಟು ಹಣ ಇಟ್ಟಿತ್ತು ಎಂಬುದನ್ನೂ ಹೇಳಿದ್ದಾರೆ. ರಾಮಯ್ಯನವರ ಸರ್ಕಾರವೇ ಇದನ್ನೆಲ್ಲಾ ಹೆಚ್ಚಿಗೆ ಮಾಡಿಬಿಟ್ಟಿತಾ?

ಅಧ್ಯಕ್ಷರು :- ಕುಳಿತುಕೊಳ್ಳಿ

ಡಾ. ಎನ್.ಬಿ.ನಂಜಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಯ್ಯನವರು ಏನು ಹೇಳುತ್ತಿದ್ದಾರೆ, ಆ ಕೆಲಸ ನಡೆಯುತ್ತಿರುವುದು ನನ್ನ ಕ್ಷೇತ್ರದಲ್ಲಿ. ಅಪ್ರೋಚು ಮತ್ತು ಎಕ್ಸಿಟ್‌ನಲ್ಲಿ ಇವತ್ತು ಬಹಳ ತ್ವರಿತವಾಗಿ ಚೆನ್ನಾಗಿ ಕೆಲಸ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಎರಡುಸಾರಿ ಅಲ್ಲಿಗೆ ಬಂದಿದ್ದಾರೆ. ಅಲ್ಲಿ ಸಾಕಷ್ಟು ಕೆಲಸ ನಡೆಯುತ್ತಿದೆ. ಹಗಲೂ ರಾತ್ರಿ ಅಲ್ಲಿ ಕೆಲಸ ನಡೆಯುತ್ತಿದೆ. ಆದರೂ ಇವರು ಮಾತನಾಡುತ್ತಿರುವುದನ್ನು ನೋಡಿದರೆ ನನಗೆ ಇದು ಅರ್ಥವಾಗುತ್ತಿಲ್ಲ.

ಶ್ರೀ ಬಿ.ಹೆಚ್ ಬನ್ನಿಕೋಡ್:- ರಾಜ್ಯದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದೆ ಎಂದು ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಬಜೆಟ್‌ನಲ್ಲಿ ಬಂದಂಥ ಕೆಲಸಗಳಿಗೆ ಹಣ ಬಿಡುಗಡೆ ಆಗಿಲ್ಲ. ಅಂದಮೇಲೆ ಹಣವನ್ನು ಕೊಡದೇ ಇರುವುದಕ್ಕೆ ಕಾರಣವೇನು?

ಅಧ್ಯಕ್ಷರು :- ಬನ್ನಿಕೋಡ್‌ರವರೇ, ಮಾನ್ಯ ಉಪಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಪ್ರತಿಸಾರಿಯೂ ಮಾನ್ಯ ನಂಜಪ್ಪನವರು ಸರ್ಕಾರದ ಪರವಾಗಿ ಅನೇಕ ವಿಚಾರಗಳಲ್ಲಿ ಮಾತನಾಡುತ್ತಲೇ ಇದ್ದಾರೆ. ಆದರೆ ಅವರ ಅದೃಷ್ಟ ಚೆನ್ನಾಗಿಲ್ಲ.

ಡಾ. ಎನ್.ಬಿ.ನಂಜಪ್ಪ :- ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ಕೆಲಸವೂ ನನ್ನ ಕ್ಷೇತ್ರದಲ್ಲೇ ನಡೆಯುತ್ತಿರುವುದು. ಇವರು ಯಾರೂ ಕೂಡ ಅಲ್ಲಿಗೆ ಬಂದು ನೋಡಿಲ್ಲ. ಹಗಲೂ ರಾತ್ರಿ ಅಲ್ಲಿ ಕೆಲಸ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ :- ಇವರು ಮಂತ್ರಿಯಾಗಬೇಕೆಂದು ಇಲ್ಲೇ ಇದ್ದಾರೆ. ಊರಿಗೇ ಹೋಗಿಲ್ಲ. ಅಲ್ಲಿ ಕೆಲಸವನ್ನು ಏನು ನೋಡಿದ್ದಾರೆ?

ಡಾ.ಎನ್.ಬಿ.ನಂಜಪ್ಪ :- ಅಲ್ಲಿ ಬಾಟಲ್‌ನೆಕ್ಸ್ ಏನೆಂದರೆ, ಅಲ್ಲಿ ಕೆಲಸಕ್ಕೆ ಸ್ವಲ್ಪ ತೊಂದರೆ ಬಂದಿದೆಯೇ ಹೊರತು ಬೇರೆ ಅಲ್ಲ. ಇದು ಮಾನ್ಯ ರಾಮಯ್ಯನವರಿಗೂ ಗೊತ್ತಿದೆ, ಬೇರೆಯವರಿಗೂ ಗೊತ್ತಿದೆ. ಆದರೂ ಈ ರೀತಿ ಏತಕ್ಕೆ ಮಾತನಾಡುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಎಸ್.ಎಂ.ಕೃಷ್ಣ :- ಮಾನ್ಯ ಅಧ್ಯಕ್ಷರೇ, ಅರಿಯರ್ಸ್ ವಿಚಾರದಲ್ಲಿ 88-89 ರಿಂದ ಸ್ವಲ್ಪಮಟ್ಟಿಗೆ ಸಿಂಹಾವಲೋಕನ ಮಾಡಿ ಹೇಳಲೇನು?

ಶ್ರೀ ಕೆ.ಶಿವಮೂರ್ತಿ :- ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಉಪಮುಖ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ. ತಾವು ಏನು ಹೇಳುತ್ತಿದ್ದೀರೋ ಅದನ್ನು ಸಿಂಹಾವಲೋಕನ ಮಾಡಿದರೆ ಅದು ನಮಗೂ ಗೊತ್ತಾಗುತ್ತದೆ. ಅದು ಯಾವ ಕಾಲದಲ್ಲಿ, ಎಲ್ಲೆಲ್ಲಿ ಎಷ್ಟೆಷ್ಟು ಏನಾಗಿದೆ ಎಂಬುದು ತಿಳಿಯುತ್ತದೆ.

ಶ್ರೀ ವೈ.ಕೆ. ರಾಮಯ್ಯ :- ಖಜಾನೆ ತುಂಬಿ ತುಳುಕುತ್ತಿದೆ ಎಂದು ನಿಮ್ಮ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಕೆ.ಶಿವಮೂರ್ತಿ :- ಖಜಾನೆ ಏನೂ ಖಾಲಿ ಆಗಿಲ್ಲವಲ್ಲಾ.

ಶ್ರೀ ವೈ.ಕೆ.ರಾಮಯ್ಯ :- ಖಜಾನೆ ತುಂಬಿ ತುಳುಕುತ್ತಿದೆ, ಖಾಲಿ ಆಗಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳುತ್ತಿದ್ದಾರೆ. ಹಾಗಾದರೆ 80 ಕೋಟಿ ರೂ.ಗಳನ್ನು ಏತಕ್ಕೆ ಪೇಮೆಂಟ್ ಮಾಡಿಲ್ಲ?

(ಗೊಂದಲ)

ಶ್ರೀ ಆರ್.ಎನ್.ನಾಯಕ್ :- ಮಾನ್ಯ ರಾಮಯ್ಯನವರೇ, ನಿಮ್ಮ ಮಂತ್ರಿಮಂಡಲ ಇದ್ದಾಗ ಖಜಾನೆಯೆಲ್ಲಾ ಬರಿದಾಗಿತ್ತು. ಅದನ್ನು ನೀವು ಮರೆತುಬಿಟ್ಟಿದ್ದೀರಾ?

ಶ್ರೀ ಎಸ್.ಎಂ.ಕೃಷ್ಣ :- ಅರಿಯರ್ಸ್ ಬಗ್ಗೆ ನಾವು ಹೆದರಬೇಕಾಗಿಲ್ಲ. ಏಕೆಂದರೆ, ಕೃಷ್ಣಾಗೆ ವಿಶ್ವಬ್ಯಾಂಕ್‌ನ ಸಹಾಯ, ರೀ-ಇಂಬರ್ಸ್‌ಮೆಂಟ್ ಬಗ್ಗೆ ನಾನು ಈಗಾಗಲೇ ಸದನಕ್ಕೆ ಹೇಳಿದ್ದೇನೆ. ಕಳೆದ ಸಪ್ಟೆಂಬರ್ ತಿಂಗಳಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ವರ್ಲ್ಡ್‌ಬ್ಯಾಂಕ್ ಏಯ್ಡ್ ಏನಿತ್ತು ಅದನ್ನು ಸಸ್ಪೆಂಡ್ ಮಾಡಿದ್ದರು ಎಂದು ಹೇಳಿದ್ದೇನೆ. ಇದರಿಂದಾಗಿ ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಮೇಲೆ ಬಹಳ ತೀಕ್ಷ್ಣವಾದ ಪರಿಣಾಮವನ್ನುಂಟುಮಾಡಿತು. ಆದುದರಿಂದ ಪೆಂಡಿಂಗ್ ಬಿಲ್ ಜಾಸ್ತಿ

ಕಂಡುಬಂದರೂ ಕೂಡ ಅದನ್ನು ಭರಿಸುವಂಥ, ಅದನ್ನು ತುಂಬಿಕೊಡುವಂಥ ಶಕ್ತಿಸಾಮರ್ಥ್ಯ ನಮಗಿದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಅತೀ ಶೀಘ್ರದಲ್ಲಿಯೇ ಈ 80 ಕೋಟಿ ರೂಪಾಯಿಗಳು ಏನು ಅರಿಯರ್ಸ್ ಇದೆ ಅದನ್ನು ತುಂಬಿಸಿ ಈ ಕೆಲಸಗಳನ್ನು ನಾವು ಶೀಘ್ರ ರೂಪದಲ್ಲಿ ಮಾಡತಕ್ಕಂಥಾದ್ದು ಇದೆ. ಪ್ರೊ. ನಂಜುಂಡಸ್ವಾಮಿಯವರು ಇಲ್ಲಿ ಇಲ್ಲ. ಅವರ ವಾದ ಸರಣಿಯನ್ನು ನಾನು ಕಾನೂನು ವಿದ್ಯಾರ್ಥಿಯಾಗಿ ಒಪ್ಪಬೇಕು ಎಂದು ನನ್ನ ಅನಿಸಿಕೆ. ಕೃಷ್ಣ ಮೇಲ್ದಂಡೆ ಯೋಜನೆ, ಯಾವ ನ್ಯಾಯಾಲಯವಾಗಲಿ, ಅಥವಾ ಟ್ರಿಬ್ಯೂನಲ್ ಆಗಲಿ ಇಂತಿಷ್ಟು ವರ್ಷದೊಳಗೇ ನೀವು ಈ ನೀರನ್ನು ಉಪಯೋಗಿಸಿಕೊಳ್ಳಬೇಕು ಇಲ್ಲದಿದ್ದರೆ ನೀರಿನ ಮೇಲೆ ನಿಮಗೆ ಅಧಿಕಾರ ಇಲ್ಲ ಎನ್ನುವಂತಹ ಒಂದು ನಿರ್ಭಂಧ ಏನಿದೆ, ಆ ನಿರ್ಭಂದಕ್ಕೆ ಈಕ್ವಿಟಿ ಇರಬೇಕು ಜಸ್ಟೀಸ್ ಇರಬೇಕು. ಅದರ ರೀಸನ್ ಇರಬೇಕು. ನಾವು ಇಲ್ಲಿಯವರೆಗೂ ಏನು ಹೇಳಿಕೊಂಡು ಬಂದಿದ್ದೇವೆಂದರೆ 2 ಸಾವಿರ ಇಸವಿಯೊಳಗೆ ನಾವು ಎಲ್ಲ ನೀರನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ರಾಜ್ಯಕ್ಕೆ ಕ್ಷಾಮ ಬಾರದೇ ಇರಲಿ, ಆಕಸ್ಮಾತ್ ಕರಾಳವಾದಂತಹ ಒಂದು ದೊಡ್ಡ ಕ್ಷಾಮ ಬಂದಿತು ಎಂದು ಇಟ್ಟುಕೊಳ್ಳಿ. ಹಾಗೆ ಬಂದರೆ ಯಾವ ಸರ್ಕಾರ 2 ಸಾವಿರ ಇಸವಿಯೊಳಗೆ ಕೃಷ್ಣಾ ನದಿ ನೀರನ್ನು ಪೂರ್ತಿ ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಅಂದಮೇಲೆ ನಮ್ಮ ಕರ್ನಾಟಕದ ಜನರಿಗೆ ಕೃಷ್ಣಾ ನದಿ ಪೂರ್ತಿಯಾಗಿ ಭತ್ತಿ ಹೋಗುತ್ತದೆ ಏನು? ಇದನ್ನು ನ್ಯಾಯಾಧೀಕರಣ ಏಕೆ ಯೋಚನೆ ಮಾಡಲಿಲ್ಲ ಎನ್ನತಕ್ಕಂಥಾದ್ದನ್ನು ಕೂಡ ಈ ಸದನ ಗಂಭೀರವಾಗಿ ಪರಿಗಣಿಸಬೇಕು ಮತ್ತು ಉತ್ತರೋತ್ತರ ನಾವು ಆದಕ್ಕೆ ಸ್ಪಂದಿಸಲೇ ಬೇಕಾಗುತ್ತದೆ. ಆದುದರಿಂದ ಅದನ್ನು ನಾವು ನಮ್ಮ authoritative ಆರ್ಗ್ಯುಮೆಂಟ್ ಆಗಿ ಇಟ್ಟುಕೊಂಡಿದ್ದೇವೆ. ಅದನ್ನು ಸಮಯ ಬಂದಾಗ ಇನ್ನೂ ಹೆಚ್ಚು ಹುರುಪಿನಿಂದ with greater conviction, we will go before whatever might be the Forum and plead Karnataka's case. Therefore I totally share with Prof.Nanjundswamy's thesis about the utilisation of water and the Inter-State Water dispute.

ಶ್ರೀ ವಾಟಾಳ್ ನಾಗರಾಜ್ :- ನಿಮ್ಮ ವಾದ ಸರಣಿಯಲ್ಲಿ ನಮಗೆ ಸ್ವಲ್ಪ ಸಂತೋಷವಾಗುತ್ತಿದೆ. ನೀವು ನೇರವಾಗಿ ಹೇಳಿ; ಏಕೆಂದರೆ ಬಚಾವತ್ ತೀರ್ಪನ್ನು ತಾವು ತಿರಸ್ಕರಿಸುತ್ತಿರೋ ಎಂದು ಹೇಳಬೇಕಲ್ಲಾ ಈಗ. ನೀವು ಈಗ ಒಂದು ತೀರ್ಮಾನಕ್ಕೆ ಬರಬೇಕಲ್ಲಾ. ಈಗ ಏನಾದರೂ ಒಂದು ನಿರ್ದಿಷ್ಟವಾಗಿ ಹೇಳಬೇಕು ನೀವು.

ಶ್ರೀ ಎಸ್.ಎಂ.ಕೃಷ್ಣ :- ನಿರ್ದಿಷ್ಟವಾಗಿ ನಾನು ಹೇಳುತ್ತಿರತಕ್ಕಂಥಾದ್ದು, ಅದು ಸಮಯ ಬಂದಾಗ . . . .

ಶ್ರೀ ಕಾಗೋಡು ತಿಮ್ಮಪ್ಪ :- ಈಗ ಬಚಾವತ್ ಅವಾರ್ಡನ್ನು ಕೇಂದ್ರಸರ್ಕಾರ ಒಪ್ಪಿಕೊಂಡಿತ್ತು. ನೋಟಿಫಿಕೇಷನ್ನೂ ಆಗಿತ್ತು. ಅದರ ಪ್ರಕಾರನೇ ಇವತ್ತು ಅದರ ಕಾರ್ಯಗತ ನಡೆಯುತ್ತಿದೆ. ಕೇಂದ್ರ ಸರ್ಕಾರ ಅವಾರ್ಡ್‌ನ್ನು ನೋಟಿಫಿಕೇಷನ್ ಮಾಡುವಂತಹ ಸಂದರ್ಭದಲ್ಲಿ ಮಾಡಿಫೈ ಮಾಡಬಹುದು, ಆಲ್ಟರ್ ಮಾಡಬಹುದು. ಒಂದು ಸಾರಿ ನೋಟಿಫೈ ಮಾಡಿದಮೇಲೆ ತಾವು ಏನು ಪ್ರಾರಂಭದಲ್ಲಿ ಫೆಡರಲ್ ಸ್ಟ್ರಕ್ಚರ್ ಎಂದು ಹೇಳಿದಿರಲ್ಲಾ, It is binding. It is a Central Act. It is binding on both the parties. How to get over from this?

ಸೆಂಟ್ರಲ್ ಆಕ್ಟ್‌ಗೆ ನಾವು ಬದ್ಧರೇ, ಫೆಡ್ರಲ್ ಸ್ಟ್ರಕ್ಚರ್‌ನಲ್ಲಿ ಕೇಂದ್ರ ಸರ್ಕಾರ ಹೊರಡಿಸಿದ ಕಾನೂನು ಪ್ರಕಾರ ಒಂದು ಅವಾರ್ಡ್‌ನ್ನು ನಾವು ನೋಟಿಫಿಕೇಷನ್ ಆದಮೇಲೆ ಬೈಡಿಂಗ್ ಎಂದು ಕಾನೂನಿನಲ್ಲಿ ಇರುವುದರಿಂದ ಅದನ್ನು ನಾವು ಈಗ ಬೈಡಿಂಗ್ ಅಲ್ಲ ಎಂದು ಹೇಳಿದರು ಕಾನೂನು ಬದ್ಧವಾಗಿ ನಾವು ಹೇಗೆ ಅದನ್ನು ಇಂಟ್ರಪ್ಟ್ ಮಾಡಬೇಕು.

ಶ್ರೀ ಎಸ್.ಎಂ.ಕೃಷ್ಣ :- ಈಗ ಇರುವ ಕಾನೂನಿನ ಚೌಕಟ್ಟಿನಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ವಿಶ್ಲೇಷಣೆ ಮಾಡಿದ್ದಾರೆ, ಅದು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿರತಕ್ಕಂತಹ ವಿಶ್ಲೇಷಣೆ. ನಾನು ಮತ್ತು ಪ್ರೊ.ನಂಜುಂಡಸ್ವಾಮಿಯವರು ಮಾಡಿರತಕ್ಕಂತಹ ವಿಶ್ಲೇಷಣೆ ಅದನ್ನು ಮೀರಿ We are in the realm of equity, we are in the realm of the rights of the people who live in that particular area. It has to be agitated.

ಇದು ಆಗುತ್ತದೆ ಎನ್ನುವ ಪ್ರಶ್ನೆಯಲ್ಲ. It is a question of equity. It is a question of justice and fair play. Where there is no fair play, where there is no justice and where there is no equity can it be called as law ? ಈಗ ನೇರವಾಗಿ ನಾನು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :-ಈಗ ಅದೆಲ್ಲಾ ಸರಿ ಸ್ವಾಮಿ, ನೇರವಾಗಿ ಹೇಳಿ ಅದನ್ನು.

ಶ್ರೀ ಎಸ್.ಎಂ.ಕೃಷ್ಣ :- 2ಸಾವಿರ ಇಸವಿಯ ಹೊತ್ತಿಗೆ ನಾನು ಇಲ್ಲಿ ನಿಂತಿದ್ದರೆ ಅಥವಾ ಕುಳಿತಿದ್ದರೆ, ಅವತ್ತು ನಾನು ನೇರವಾಗಿ ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ಅಲ್ಲಿವರೆಗೂ ಮುಂದೆ ಹೋಗೋಣ ನಾವು.

ಶ್ರೀ ವಾಟಾಳ್ ನಾಗರಾಜ್ :- ಈಗ ಮುಂದಿನ ಯಾವುದೋ ಕಾಲದ ಬಗ್ಗೆ ಮಾತನಾಡುವುದು ಬೇಡ. ಈಗಲೇ ಹೇಳಿ ಸ್ವಾಮಿ, ಈಗ ಹೇಳುವುದಕ್ಕೆ ಏನಾಗಿದೆ. ಬಚಾವತ್ ತೀರ್ಪನ್ನು ನಾವು ತಿರಸ್ಕರಿಸಿದ್ದೇವೆ ಎಂದು ಹೇಳಿ. ಇಷ್ಟೆಲ್ಲಾ ನೀವು ಸುತ್ತಿ ಬಳಸಿ ಹೇಳಬೇಕಾದರೆ ಬಚಾವತ್ ತೀರ್ಪನ್ನು ಏಕೆ ಒಪ್ಪಿಕೊಳ್ಳುತ್ತಿದ್ದೀರಿ ಅಲ್ಲವೇ ? ಅದನ್ನು ಹೇಳಿ ಈಗ ಪ್ರೊ. ನಂಜುಂಡ ಸ್ವಾಮಿಯವರ ವಾದವನ್ನು ಒಪ್ಪುತ್ತೇನೆ; ತಮ್ಮ ವಾದ ಸರಣಿಗೂ ನಾನು ಸಂತೋಷಪಡುತ್ತೇನೆ. ಆದರೆ ನೀವು ನೇರವಾಗಿ ರಸ್ತೆಗೆ ಬನ್ನಿ. ಸುತ್ತಿ ಬಳಸಿ ಎಲ್ಲೆಲ್ಲೊ ಹೋಗಬೇಡಿ. ಬಚಾವತ್ ತೀರ್ಪಿನಿಂದ ನಮಗೆ ಅನ್ಯಾಯವಾಗಿದೆ; ಆದುದರಿಂದದ ಆ ತೀರ್ಪನ್ನು ತಿರಸ್ಕರಿಸಿದ್ದೇವೆ ಎಂದು ಬಹಿರಂಗವಾಗಿ ಹೇಳಿ, ಏನಾಗುತ್ತದೆ ನೋಡೋಣ.

ಶ್ರೀ ಆರ್.ವಿ.ದೇಶಪಾಂಡೆ :- ನನ್ನದು ಒಂದು ಕ್ಲಾರಿಫಿಕೇಷನ್ ಇದೆ. ಈಗ ಬಚಾವತ್ ಅವಾರ್ಡ್ ಬಗ್ಗೆ ತಾವು ದಯಮಾಡಿ ಉತ್ತರ ಕೊಡಿ. ಈಗ ಮುಖ್ಯವಾಗಿ ಮಾನ್ಯ ಉಪಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಬರೆದ. . . .

ಶ್ರೀ ವೈ.ಕೆ. ರಾಮಯ್ಯ :- ನಿನ್ನೆ ಕೂಡ ನಾನು ಪ್ರಸ್ತಾಪ ಮ್ಹಾಡಿದ್ದೇನೆ. ಬಚಾವತ್ ಕಮಿಷನ್ ಅವಾರ್ಡ್‌ನ ಫಲ ಅನುಭವಿಸುವಂತಹ ಮೂರು ಜಿಲ್ಲೆ ಶಾಸಕರು ಇಲ್ಲಿ ಇದ್ದಾರೆ. ನಮಗೆ ಮೂಲಭೂತವಾಗಿ ಇರುವಂತಹ ಪ್ರಶ್ನೆ ಇಷ್ಟೇ; 2 ಸಾವಿರ ಇಸವಿಯೊಳಗೆ ಆ ಒಂದು ಅವಾರ್ಡ್‌ನ ಪ್ರಕಾರ. . . .

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ಬಚಾವತ್ ಅವಾರ್ಡ್‌ನಿಂದ ಬರೀ ಮೂರು ಜಿಲ್ಲೆ ಅಲ್ಲ.

ಶ್ರೀ ವೈ.ಕೆ.ರಾಮಯ್ಯ :- ನಾಲ್ಕು ಜಿಲ್ಲೆ ಬರುತ್ತದೆಯೇ?

ಪ್ರೊ. ಎಂ.ಡಿ.ನಂಜುಂಡಸ್ವಾಮಿ :- ಇಲ್ಲ, ನಾಲ್ಕು ಅಲ್ಲ. ಇನ್ನೂ ಜಾಸ್ತಿ ಇದೆ. Even Tungabhadra sub-basin comes under the Bachwat Award.

ಧಾರವಾಡ, ಚಿತ್ರದುರ್ಗ ಎಲ್ಲಾ ಬರುತ್ತದೆ. ಬಳ್ಳಾರಿ ಕೂಡ ಬರುತ್ತದೆ. ಆ ಕಾರಣ ತಾವು ದಯವಿಟ್ಟು ಮೂರು ಜಿಲ್ಲೆ ಎಂದು ಹೇಳಬೇಡಿ. ಇಡೀ ಉತ್ತರ ಕರ್ನಾಟಕ, ಮತ್ತು ಚಿತ್ರದುರ್ಗವನ್ನು ಸೇರಿಸಿಕೊಂಡು ನೀವು ಹೇಳಬೇಕು. ಮತ್ತು ಶಿವಮೊಗ್ಗ ಸಹ ಬರುತ್ತದೆ.

ಶ್ರೀ ವೈ.ಕೆ. ರಾಮಯ್ಯ :- ಸಿರಾಕ್ಕೂ ನೀರು ಬರುತ್ತದೆ ಎಂದು ಒಂದು ಯೋಜನೆ ಇದೆ. ತುಮಕೂರು, ಪಾವಗಡಕ್ಕೂ ಬರುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ನೇರವಾದ ಪ್ರಶ್ನೆ ಇಷ್ಟೇನೆ ; If the Karnataka Government do not utilise the water as per the Award before 2000 A.D., what will be the consequences, I repeat,

2 ಸಾವಿರದ ವರ್ಷದ ಇಸವಿ ಒಳಗಾಗಿ ಕರ್ನಾಟಕ ತನ್ನ ಪಾಲಿನ ನೀರನ್ನು ಬಳಸಿಕೊಳ್ಳುವಂತಹ ಪ್ರಯತ್ನವನ್ನು ಮಾಡಿಕೊಳ್ಳದೆ ಇದ್ದರೆ ಏನಾಗಬಹುದು? ನನಗೆ ನೀವು ಏನೇ ಹೇಳಿದರೂ ನಾನು ಒಬ್ಬ ಕಾನೂನು ವಿದ್ಯಾರ್ಥಿಯಾಗಿ ಅಭಿಪ್ರಾಯ ವ್ಯಕ್ತಮಾಡುತ್ತೇನೆ. Your right will be extinguished. ನಿಮ್ಮ ಹಕ್ಕು ನಶಿಸಿ ಹೋಗುತ್ತದೆ. This is not my opinion.

ಇದಕ್ಕಿಂತ ವಿಭಿನ್ನವಾದಂತಹ ಒಪೀನಿಯನ್ ನಿಮ್ಮ ಲಾ ಡಿಪಾರ್ಟಮೆಂಟ್, ನಿಮ್ಮ ಅಡ್ವೋಕೇಟ್ ಜನರಲ್ ಹೇಳುವುದಾದರೆ ನಿನ್ನೆ ನಾನು ಸದನದ ಶಾಸಕಾಂಗ ಸಭೆಗೆ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದೇನೆ; ದಯಮಾಡಿ ಈ ಪ್ರಶ್ನೆಗೆ ಉತ್ತರ ಕೊಡಿ. ಏನು ಅಲ್ಲಿ 4 ಜಿಲ್ಲೆ ಇವೆಯೋ 4 ತಾಲ್ಲೂಕು ಇವೆಯೋ, ಇದು ಲಕ್ಷಾಂತರ ಜನರ ಭೂಮಿಗೆ ನೀರು ಬರುವಂತಹ ವಿಷಯ. ಇವತ್ತು ಬಹಳ ಸಂತೋಷ ನನಗೆ. 2 ಸಾವಿರವರ್ಷ ಇಸವಿಯ ಒಳಗಾಗಿ ನಾವು ನೀರನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವಂತಹ ಪ್ರಾಮಾಣಿಕವಾದಂತಹ ಮಾತನ್ನು ನೀವು ಆಡಿದ್ದೀರಿ. ನಾನು ತಮಗೆ ಅಭಿನಂದಿಸುತ್ತೇನೆ. ಪ್ರಾಮಾಣಿಕವಾದಂತಹ ನಿಮ್ಮ ಹಿನ್ನೆಲೆಯಲ್ಲಿ 2 ಸಾವಿರ ವರ್ಷ ಇಸವಿಯಲ್ಲೂ ನಾವು ಬಳಸಿಕೊಳ್ಳಲು ಆಗದಿದ್ದರೆ ಏನಾಗುತ್ತದೆ? ಕರ್ನಾಟಕದದ ಹಕ್ಕಿಗೆ ಚ್ಯುತಿ ಬರುತ್ತದೆಯೋ, ಇಲ್ಲವೋ? ಈಗ ಈ ಪ್ರಶ್ನೆಗೆ ದಯಮಾಡಿ ನನಗೆ ಉತ್ತರ ಬರಬೇಕು. What will happen if the Karnataka Government do not make use of water of their share before 2000 A.D.?

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಇಷ್ಟೊತ್ತಿನವರೆಗೂ ಅವರೇ ಹೇಳಿದ್ದಾರೆ. ಈ ಕಾವೇರಿ ವಿಷಯದ ಬಗ್ಗೆ ಹಿಂದೆನೂ ಚಳುವಳಿ ನಡೆದಿದೆ. ನಿಮ್ಮ ತಾತನೂ ಚಳುವಳಿ ಮಾಡಿದ್ದಾನೆ, ನಿಮ್ಮ ಅಪ್ಪನೂ ಚಳುವಳಿ ಮಾಡಿದ್ದಾನೆ. ನೀವು ಮಾಡಿದ್ದೀರಿ, ಮುಂದೆ ನಿಮ್ಮ ಮಕ್ಕಳು, ಮೊಮ್ಮಕ್ಕಳು ಮಾಡುತ್ತಾರೆ ಎಂದು ಹೇಳಿದ್ದಾರೆ. ಆಗ ಬಚಾವತ್ ಅವಾರ್ಡ್ ಒಳಗಡೆ ಉಪಯೋಗಿಸಿಕೊಳ್ಳುವುದಕ್ಕೆ ಆಗದೇ ಹೋದರೆ ಮೊಮ್ಮಕ್ಕಳು ಚಳುವಳಿ ಮಾಡುತ್ತಾರೆ, ಮಕ್ಕಳು ಚಳುವಳ ಮಾಡುತ್ತಾರೆ ಈ ಬಗ್ಗೆ ನೀವು ಹೇಳಿ, ನೀವು ಹೇಳಿ ಎಂದರೆ ಅವರು ಏನು ಹೇಳುತ್ತಾರೆ?

ಶ್ರೀ ವೈ.ಕೆ. ರಾಮಯ್ಯ :- ತಾವು ಲಘುವಾಗಿ ಆಡುವಂತಹ ಮಾತಲ್ಲ ಇದು. ನೀವು ತಮಾಷೆಯಾಗಿ ಮಾತನಾಡಬೇಡಿ.

ಶ್ರೀ ಕರಿಯಣ್ಣ :- ನಾನು ಲಘುವಾಗಿ ಮಾತನಾಡುತ್ತಿಲ್ಲ ಸ್ವಾಮಿ. ಅವರೇ ಈ ಮಾತನ್ನು ಹೇಳಿದ್ದು. ತಾವು ತಮಾಷೆಗೆ ಆಡಲಿಲ್ಲ. ನೀವು ನನಗೆ ಹೇಳಬೇಡಿ. ಮಾನ್ಯ ಅಧ್ಯಕ್ಷರೇ ಅವರೇ ಹೇಳಿದ ಶಬ್ದ. ಇದು ರೆಕಾರ್ಡ್‌ನಲ್ಲಿ ಇದ್ದರೆ ನೋಡಿ, ಇಲ್ಲದಿದ್ದರೆ ಬೇಡ.

ಶ್ರೀ ವೈ.ಕೆ.ರಾಮಯ್ಯ :- ಇಲಿಗೆ ಪ್ರಾಣ ಸಂಕಟ ಬೆಕ್ಕಿಗೆ ಚೆಲ್ಲಾಟ. ನಮಗೆ ನಮ್ಮ ನೀರು ಬರಬೇಕು. 4ಲಕ್ಷ ಎಕರೆಗೆ ನೀರು ಬರಬೇಕು; ನಮಗೆ ಪ್ರಾಣ ಹೋಗುತ್ತಿದೆ. ಇವರು ತಮಾಷೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕರಿಯಣ್ಣ :-ಸ್ವಾಮಿ ರೆಕಾರ್ಡ್ ತೆಗೆದು ನೋಡಿ. ನಾವು ಏನಾದರು ಸುಳ್ಳು ಹೇಳಿದ್ದೇವಾ ನೋಡಿ. ಸಿಎಲ್‌ಪಿ ಮೀಟಿಂಗ್ ಎಂದು ಹೇಳುತ್ತಾರೆ. ನಾವೇನು ಅವರ ಹಾಗೆ ಶಾಸಕರು ಅಲ್ಲವೇ? ಅವರು ಹೇಳಿದ್ದನ್ನೇ ಹೇಳುತ್ತಿದ್ದೇನೆ ನಾನು. ಹೇಳಿ ರಾಮಯ್ಯನವರೇ, ನಾನು ಹೇಳಿಗ ಶಬ್ದ ಇಲ್ಲ ಎಂದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಈಗ ಅವರ ಪಕ್ಷದ ನಾಯಕರೂ ಹೇಳುತ್ತಾರೆ, ಇವರೂ ಹೇಳುತ್ತಾರೆ. ಹೀಗಾದರೆ ಎಷ್ಟು ಹೊತ್ತಿಗೆ ಮುಗಿಯುವುದು. ಈ ಉತ್ತರ ಎಂದು ನಾನು ಮಾನ್ಯ ಅಧ್ಯಕ್ಷರಿಗೆ ಕೇಳುತ್ತಿರುವುದು.

ಅಧ್ಯಕ್ಷರು :- ಮಾನ್ಯ ಕರಿಯಣ್ಣನವರೇ, ತಾವು ಕುಳಿತುಕೊಳ್ಳಿ. ಎಲ್ಲರಿಗೂ ಪ್ರಾಣ ಸಂಕಟವಿದೆ, ತಾವು ಕುಳಿತುಕೊಳ್ಳಿ. ಪ್ರೊಫೇಸರ್ ನಂಜುಂಡಸ್ವಾಮಿಯವರೇ ಈಗ . . . .

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ಮಾನ್ಯ ಅಧ್ಯಕ್ಷರೇ, ಉಪಮುಖ್ಯಮಂತ್ರಿಗಳು ನನಗೆ ಅವಕಾಶವನ್ನು ಕೊಟ್ಟಿದ್ದರು. ಉಪಮುಖ್ಯಮಂತ್ರಿಗಳು ಎದ್ದುನಿಂತಿದ್ದರು, ನಾನು ಕೇಳಿದಮೇಲೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ತಮ್ಮ ಮೂಲಕ ನಾನು ಇಲ್ಲಿ ಎಲ್ಲಾ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುವುದು, ಸನ್ಮಾನ್ಯ ವೈ.ಕೆ.ರಾಮಯ್ಯನವರು ಏನು ಪ್ರಶ್ನೆಯನ್ನು ಕೇಳುತ್ತಿದ್ದರು, ಮತ್ತೆ ಅದಕ್ಕೆ ಅವರೇ ಏನು ಉತ್ತರವನ್ನು ಕೊಟ್ಟರು, ಆ ಮಾತುಗಳನ್ನು ದಯವಿಟ್ಟು ಮತ್ತೆ ಆಡಬಾರದು. ಏತಕ್ಕೆಂದರೆ ರೈತನ ಹಕ್ಕು ಶಾಶ್ವತವಾದದ್ದು. . .

ಶ್ರೀ ಬಿ.ಶಿವಣ್ಣ :- ಮಾನ್ಯ ಅಧ್ಯಕ್ಷರೇ . . .

ಪ್ರೊ ಎಂ.ಡಿ.ನಂಜುಂಡಸ್ವಾಮಿ :- ಪ್ರೊ ಶಿವಣ್ಣನವರು ಕಾನೂನು ಪಂಡಿತರು. ನಾನು ಅದನ್ನು ನೆನಪಿನಲ್ಲಿಟ್ಟುಕೊಂಡೇ ಮಾತನಾಡುತ್ತೇನೆ. The fundamental right of the farmer to the water who is living adjacent to it is a self-sustaining permanent right which cannot be taken away by anybody. ಇದು ಕಾನೂನು, ಸನ್ಮಾನ್ಯ ರಾಮಯ್ಯನವರೇ, ದಯವಿಟ್ಟು ತಾವು ಹೇಳುವುದನ್ನು ಆಮೇಲೆ ಹೇಳಿ; ಇಬ್ಬಿಬ್ಬರು ಒಟ್ಟಿಗೆ ಮಾತನಾಡುವುದು ಸರಿಯಲ್ಲ. ನಾನು ಯಾವತ್ತೂ ಆ ಕೆಲಸವನ್ನು ಮಾಡಿಲ್ಲ. ನನ್ನ ಶಿಸ್ತನ್ನು ನಾನು ಕಾಪಾಡಿಕೊಳ್ಳಲು ತಾವು ಅವಕಾಶವನ್ನು ಮಾಡಿಕೊಡಬೇಕು. ಮಾನ್ಯ ಅಧ್ಯಕ್ಷರೇ, ಏತಕ್ಕೋಸ್ಕರ ನಾನು ವಿನಂತಿ ಮಾಡಿಕೊಳ್ಳುತ್ತೇನೆಂದರೆ ಇದು ಬಹಳ ಜವಾಬ್ದಾರಿ ಇರುವಂಥ ಸದನ ಮತ್ತು ಇಲ್ಲಿರತಕ್ಕಂಥವರೆಲ್ಲರೂ ಬಹಳ ಜವಾಬ್ದಾರಿ ಇರತಕ್ಕಂಥ ಸದಸ್ಯರು. ಈ ಮುಖ್ಯ ವಿಷಯದಮೇಲೆ

ಮಾತನಾಡುವಾಗ ನಾವು ನಮ್ಮ ಹಕ್ಕನ್ನೇ ಮೊಟಕು ಮಾಡಿಕೊಳ್ಳುವಂಥ ಮಾತುಗಳನ್ನು ಆಡಬಾರದು. ಆದಕಾರಣ after 2000 AD, Karnataka's rights will not be extinguished. ನಾವು ಕರ್ನಾಟಕದ ರೈತರು; ನಮ್ಮ ಹಕ್ಕು ಎಲ್ಲೂಹೋಗುವುದಿಲ್ಲ. It will not be extinguished at all. ತಾವು ಎರಡುಸಾವಿರದ ಇಸವಿವರೆಗೆ ಇಲ್ಲಿದ್ದರೆ ಆವಾಗ ನಾನು ಹೇಳುತ್ತೇನೆಂದು ಹೇಳುತ್ತಿರಲ್ಲಾ, ಆವಾಗ ರೈತರೂ ಕೂಡ ಹೇಳುತ್ತಾರೆ.

ಶ್ರೀ ಎಸ್.ಎಂ.ಕೃಷ್ಣ : – ಮಾನ್ಯ ಅಧ್ಯಕ್ಷರೇ, ತಮ್ಮ ಕ್ಷಮಾಪಣೆಯನ್ನು ಕೇಳುತ್ತೇನೆ. ಇದು ಬೇಸಿಕಲಿ ಕಾವೇರಿ ವಿಚಾರದಲ್ಲಿರುವ ಅಡ್ಜರ್ನ್‌ಮೆಂಟ್ ಮೋಷನ್. ಇದು ನಮ್ಮ ಕಾವೇರಿಯಿಂದ ಕೃಷ್ಣಾವರೆಗೆ ಚರ್ಚೆ ಎಳೆದುಕೊಂಡು ಹೋಗಿದೆ. ಆದ್ದರಿಂದ ಮಾನ್ಯ ಪ್ರೊ.ನಂಜುಂಡಸ್ವಾಮಿಯವರು ಮತ್ತು ಮಾನ್ಯ ವೈ.ಕೆ.ರಾಮಯ್ಯನವರು ಮಾನ್ಯ ಶಿವಣ್ಣನವರು ಇವರುಗಳೆಲ್ಲಾ ಹೇಳಿದಂಥ ಮಾತುಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು ಕಾವೇರಿಯ ಬಗ್ಗೆ. ಸುಪ್ರೀಮ್‌ಕೋರ್ಟ್‌ನಲ್ಲಿ ಸಂಸತ್ ಸದಸ್ಯರಾದಂಥ ಮಾನ್ಯ ಮಾದೇಗೌಡರು ಹಾಕಿದಂಥ ಒಂದು ಇಪ್ಲೀಡಿಂಗ್ ಪೆಟಿಷನ್ ಏನು ಇದೆ, ಅದು ಬಂದಾಗ ನಮ್ಮ ರಾಜ್ಯ ಸರ್ಕಾರದಿಂದ ಯಾವ ವಕೀಲರೂ ಇರಲಿಲ್ಲ ಎಂಬುದು ಪತ್ರಿಕೆಗಳಲ್ಲಿ ಬಂದುದನ್ನು ನಾವು ನೋಡಿದ್ದೇವೆ. ತಾಂತ್ರಿಕವಾಗಿ ನಾವು ಹೇಳಬಹುದು, ರಾಜ್ಯ ಸರ್ಕಾರಕ್ಕೆ ನೋಟೀಸ್‌ನ್ನು ಸರ್ವ್ ಮಾಡಿರಲಿಲ್ಲವೆಂದು. ಮತ್ತು ಅದಕ್ಕೆ ಪ್ರತಿಪ್ರಶ್ನೆಯಾಗಿ ತಾವು ಕೇಳಬಹುದು, ತಮಿಳುನಾಡಿನವರು ಹೇಗೆ ಇದ್ದರೆಂದು ಹೇಳಿ. ತಮಿಳುನಾಡಿನವರು ಕೆವಿಯಟ್ ಹಾಕಿದ್ದರು. ಆದ್ದರಿಂದ ಅವರು ಇದ್ದರು. ನಮಗೆ ನೋಟೀಸ್ ಸರ್ವ್ ಆಗಿರಲಿಲ್ಲ, ಆದ್ದರಿಂದ ನಮ್ಮ ವಕೀಲರು ಹೋಗಿರಲಿಲ್ಲ. ಈಗಾಗಲೇ ಮಾನ್ಯ ನಮ್ಮ ಕಾನೂನು ಸಚಿವರ ಜೊತೆಯಲ್ಲಿ ಮಾತನಾಡಿದ್ದೇವೆ. ನಮ್ಮ ದೆಹಲಿಯ ಕಾನೂನು ಘಟಕವನ್ನು ಇನ್ನೂ ಬ್ರಾಡ್‌ಬೇಸ್ ಮಾಡಿ ನಮ್ಮ ಇಂಥ ಪಿಟಿಷನ್‌ಗಳು ಬಂದಾಗ ಪ್ರತಿಯೊಂದು ಕೋರ್ಟಿನಲ್ಲೂ ಕೂಡ ನಮ್ಮ ಅಡ್ವೋಕೇಟ್‌ಗಳು ಹಾಜರಿರಬೇಕೆನ್ನುವಂಥ ಶಿಸ್ತನ್ನು ಪಾಲಿಸಿಕೊಂಡು ಬರುತ್ತೇವೆ. ಈಗಾಗಲೇ ನಮ್ಮ ಸೀನಿಯರ್ ಅಡ್ವೊಕೇಟ್ ನಾರಿಮನ್ ಅವರು ಸುಪ್ರೀಂ ಕೋರ್ಟ್ ಮುಂದೆ ಒಂದು ದೃಢೀಕರಣ ಪತ್ರವನ್ನು, ಅವರು ಏನು ಅಬ್ಸರ್ವೇಷನ್ಸ್ ಮಾಡಿದ್ದಾರೆ ಅದರ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಆ ವಿಚಾರವನ್ನು ಎತ್ತುತ್ತೇವೆಂಬ ಸಂದೇಶವನ್ನು ಅವರು ನಮಗೆ ಕಳುಹಿಸಿಕೊಟ್ಟಿದ್ದಾರೆ. ನಾನು ಮಾತು ಮುಗಿಸುವ ಮುನ್ನ ಒಂದು ಮಾತು ಏನೆಂದರೆ, ಈ ಸಭೆಯ ಎಲ್ಲಾ ಭಾಗದಿಂದ ಪ್ರತಿಧ್ವನಿತವಾಗಬೇಕಾಗಿರತಕ್ಕ ಮಾತು – ಕಾವೇರಿಯಾಗಲಿ, ಕೃಷ್ಣ ಆಗಲಿ, ಯಾವುದೇ ಸರ್ಕಾರ ಬರಲಿ, ಈ ಕಾವೇರಿ–ಕೃಷ್ಣ ನಮ್ಮ ರಾಜ್ಯದ ರೈತರ, ನಮ್ಮ ರಾಜ್ಯದ ಭವಿಷ್ಯದ ದೃಷ್ಟಿಯಿಂದ ನಮ್ಮ ಹಕ್ಕನ್ನು ಸಂಪೂರ್ಣವಾಗಿ ನಾವು ದೃಢೀಕರಿಸಿಕೊಳ್ಳುವುದಕ್ಕೆ, ಹಾಗೂ ಅದನ್ನು ಸಾರೋದ್ಧಾರ ಮಾಡುವುದಕ್ಕೆ ಈ ಸರ್ಕಾರ ತನ್ನ ಪೂರ್ಣ ವಿಶ್ವಾಸವನ್ನು ಹೊಂದಿದೆಯೆಂಬ ಮಾತನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : – ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯ ಮಂತ್ರಿಗಳು ಸರ್ಕಾರದ ನಿಲುವಿನ ಬಗ್ಗೆ ಸ್ಪಷ್ಟವಾದ ವಿಚಾರವನ್ನು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ, ಅದು ಕಾವೇರಿ ಇರಲಿ,

ಕೃಷ್ಣ ಇರಲಿ ನಮ್ಮ ಹಕ್ಕನ್ನು ನಮ್ಮ ರೈತರ ಹಿತವನ್ನು ಪ್ರೊಟೆಕ್ಟ್ ಮಾಡಲಿಕ್ಕೆ ನಾವೆಲ್ಲರೂ ಒಂದಾಗಿ ಕೆಲಸ ಮಾಡಬೇಕಾಗಿದೆ. ಪಕ್ಷಾತೀತವಾಗಿ ಕೆಲಸ ಮಾಡಬೇಕಾಗಿದೆ. ಅದಕ್ಕೆ ನಮ್ಮೆಲ್ಲರ ಸಹಕಾರ ಇದೆ ಎಂದು ಹೇಳಿದ್ದೆವು. ಎರಡು ಮೂರು ವಿಚಾರಗಳಲ್ಲಿ ಉಪ ಮುಖ್ಯಮಂತ್ರಿಗಳು ಯಾವುದೇ ಬೆಳಕು ಚೆಲ್ಲಲಿಲ್ಲ. ತಾವು ಒಂದು ಮಾತು ಸ್ಪಷ್ಟವಾಗಿ ಹೇಳಿ ತಮ್ಮ ಪತ್ರವನ್ನೂ ಸಹ ಟೇಬಲ್ ಮುಂದೆ ಇಡುತ್ತೇವೆಂದು ಹೇಳಿದಿರಿ. ಈ ಮಾನಿಟರಿಂಗ್ ಕಮಿಟಿ ವಿಚಾರದಲ್ಲಿ ರಾಜ್ಯ ಸರ್ಕಾರ ಯಾವಾಗಲೂ ಒಪ್ಪಿಕೊಂಡಿಲ್ಲ ಅಥವಾ ಪತ್ರವನ್ನು ಹಾಕಿಲ್ಲವೆಂದು ಹೇಳಿದಿರಿ, ಸಂತೋಷ. ಆ ಮಾತನ್ನು ನಂಬಬೇಕಾಗುತ್ತದೆ. ಆದರೆ ವಾಟರ್ ರಿಸೋರ್ಸಸ್ ಮಿನಿಸ್ಟರ್ ಆದ ಶ್ರೀ ವಿ.ಸಿ.ಶುಕ್ಲಾ ಅವರು ಇಂಥ ಪತ್ರ ಕರ್ನಾಟಕ ರಾಜ್ಯ ಸರ್ಕಾರದಿಂದ ಬಂದಿದೆ ಎಂದು ಹೇಳಿದ್ದಾರೆ. ಹಾಗಾದರೆ ತಮ್ಮ ಮಾತನ್ನು ನಂಬುತ್ತೇವೆಂದು ಹೇಳಿದಾಗ ಅವರು ಹೇಳಿದ್ದು ಸುಳ್ಳಾಯಿತು. ಅದರ ಬಗ್ಗೆ ಖಂಡನೆ ಮಾಡಿ ಒಂದು ರೆಸಲ್ಯೂಷನ್ ಅನ್ನು ನೀವು ಇಲ್ಲಿ ಪಾಸ್ ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ, ನಮ್ಮ ರಾಜ್ಯದ ಕಾವೇರಿ ಬೇಸಿನ್ ಜನರ ಹಿತದೃಷ್ಟಿಯಿಂದ ಇದನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಜನರು ನಿಮ್ಮನ್ನು ನಂಬುವುದಿಲ್ಲ. ಹಾಗಾಗಿ ಅದನ್ನು ಖಂಡನೆ ಮಾಡಿ ರೆಸಲ್ಯೂಷನ್ ಮೂವ್ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಎರಡನೆಯದಾಗಿ, ತಾವು ಮುಖ್ಯಮಂತ್ರಿಗಳು, ಲೋಕಸಭಾ ಸದಸ್ಯರು ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಮೆಮೋರ್‍ಯಾಂಡಂ ಕೊಟ್ಟು ಇಲ್ಲಿ ಒಂದು ಉಸ್ತುವಾರಿ ಸಮಿತಿ ಆಗಬಾರದೆಂದು ಹೇಳಿದ ನಂತರ ಪುನಃ ಪಾರ್ಲಿಮೆಂಟಿನಲ್ಲಿ ಮಾನ್ಯ ತುಂಗನ್ ಅವರು, ವಾಟರ್ ರಿಸೋರ್ಸಸ್ ಸ್ಟೇಟ್ ಮಿನಿಸ್ಟರ್‌ರವರು ಪುನಃ ನಾವು ಈ ಉಸ್ತುವಾರಿ ಸಮಿತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರ ಬಗ್ಗೆ ತಾವು ಏನೂ ಹೇಳಿಲ್ಲ, ಅಥವಾ ಅದರ ಬಗ್ಗೆ ಪ್ರೊಟೆಸ್ಟ್ ಮಾಡಿ ಒಂದು ಪತ್ರವನ್ನೂ ಬರೆದಿಲ್ಲ. ಅದರ ಬಗ್ಗೆ ತಾವು ಏನು ಹೇಳುತ್ತೀರಿ? ಮೂರನೆಯದಾಗಿ, ನಾನು, ನೀವು ಮತ್ತು ಚಂದ್ರೇಗೌಡರು ಪ್ರಸ್ತಾಪ ಮಾಡಿದ ಹಾಗೆ ಕರ್ನಾಟಕ ರಿವಿಷನ್ ಪಿಟಿಷನ್ ಮೇಲೆ ಒಂದು ಆಜ್ಞೆ ಆಗಿದೆ. In the changed circumstances, any party could approach them ಎಂದು. ಹಾಗಾಗಿ ಕೇಂದ್ರ ಸರ್ಕಾರಕ್ಕೆ ಮಾನಿಟರಿಂಗ್ ಕಮಿಟಿ ಮಾಡುವ ಅಧಿಕಾರ ಇಲ್ಲ. ತಮಿಳು ನಾಡಿಗೆ ಏನಾದರೂ ಡಿಮ್ಯಾಂಡ್ಸ್ ಇದ್ದರೆ they have to approach only the Tribunal ಅದರ ಬಗ್ಗೆ ತಾವು ಬೆಳಕು ಚೆಲ್ಲಲಿಲ್ಲ. ಅದರ ಬಗ್ಗೆ ಸರ್ಕಾರದ ನಿಲುವು ಏನು? ನಾಲ್ಕನೆಯದಾಗಿ 93-94ರ ಮುಂಗಡ ಪತ್ರದಲ್ಲಿ 280ರಿಂದ 285 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆಂದು ಹೇಳಿದ್ದರೂ ಸಹ ಇವತ್ತಿನವರೆಗೆ ಕೇವಲ 57-58 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಒಂದು ಮಾತು ಒಪ್ಪಿಕೊಳ್ಳುತ್ತೇನೆ. ಇದೇ ವೇಗದಲ್ಲಿ ಹೋದರೆ ನಿಮ್ಮ ಇರಿಗೇಷನ್ ಪೊಟೆನ್‌ಷಿಯಲ್ ಇನ್‌ಕ್ರೀಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ತಾವು ಯಾವುದರ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಈ 285 ಕೋಟಿ ರೂಪಾಯಿ ಅಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಿನ ಹಣ ಖರ್ಚು ಮಾಡಿ ಮ್ಯಾಕ್ಸಿಮಂ ಇರಿಗೇಷನ್ ಪೊಟೆನಷಿಯಲ್ ಯೂಸ್ ಮಾಡುವ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ನಿಮಗೆ ಹೇಳಲಿಕ್ಕೆ ತೊಂದರೆ ಇದ್ದರೆ ನಾನು ನಿಮ್ಮಿಂದ ಉತ್ತರವನ್ನು ನಿರೀಕ್ಷಿಸುವುದಿಲ್ಲ. 285 ಕೋಟಿ ರೂಪಾಯಿಗಳಲ್ಲಿ ಕೇವಲ 55 ಕೋಟಿ ರೂಪಾಯಿ ಯುಟಿಲೈಸ್

ಆಗಿದೆ. ಅದು ಏಪ್ರಿಲ್, ಮೇ, ಜೂನ್, ಜುಲೈ, ಆಗಸ್ಟ್ ಈ 5 ತಿಂಗಳುಗಳಲ್ಲಿ 55 ಕೋಟಿ ರೂಪಾಯಿ ಉಪಯೋಗವಾಗಿರುವುದು. ಇದರ ಬಗ್ಗೆ ತಮ್ಮ ನಿಲುವು ಏನು?

1.20 ಪಿ.ಎಂ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ) : – ಮಾನ್ಯ ಅಧ್ಯಕ್ಷರೇ, ಒಂದು ವಿಚಾರದ ಬಗ್ಗೆ ಮಾನ್ಯ ನೀರಾವರಿ ಸಚಿವರು ಉತ್ತರ ಕೊಡಬೇಕು. ಟ್ರಿಬ್ಯುನಲ್ ಆರ್ಡರ್ ಪ್ರಕಾರ ಡಿಸ್ಟ್ರೆಸ್ಡ್ ವರ್ಷದಲ್ಲಿ ಟ್ರಿಬ್ಯುನಲ್‌ಗೆ ಅಪ್ರೋಚ್ ಮಾಡಬೇಕೆಂದು ಆದೇಶ ಇದೆ. ಅದರಂತೆ ತಾವು ಏನಾದರೂ ಅಪ್ರೋಚ್ ಮಾಡಿದ್ದೀರಾ? ಮಾನ್ಯ ಚಂದ್ರೇಗೌಡರು ಮುಖ್ಯವಾಗಿ ಇದನ್ನೇ ಹೇಳಿದರು. ಅದಕ್ಕೆ ಉತ್ತರ ಬಂದಿಲ್ಲ. ಮತ್ತೆ 2 ದಿವಸಗಳ ಕಾಲ ಕಾವೇರಿ ವಿಚಾರದಲ್ಲಿ ಚರ್ಚೆ ಮಾಡಿದಮೇಲೆ ಈ ಸದನದ ಎಲ್ಲಾ ಜನರ ಅಭಿಪ್ರಾಯಗಳನ್ನು ಸಂಗ್ರಹ ಮಾಡಿ ಕ್ರೋಢೀಕರಿಸಿ ಒಂದು ನಿರ್ಣಯಕ್ಕೆ ಬರದೇ ಹೋದರೆ ಬರೀ ಚರ್ಚೆ ಇಷ್ಟಕ್ಕೇ ನಿಲ್ಲುತ್ತದೆ. ಇದರಿಂದ ಉಪಯೋಗ ಏನೂ ಆಗುವುದಿಲ್ಲ ಮತ್ತು ಇದು this will give wrong signal to the Tamil Nadu and also to the Union Government. ಎರಡೂ ಕಡೆಯ ಸದಸ್ಯರು ಕೂಡ ವಿ.ಸಿ.ಶುಕ್ಲಾ ಅವರ ಬಗ್ಗೆ the way in which he has handled ಅವರ ಬಗ್ಗೆ ನಾವು ಕಾನ್ಫಿಡೆನ್ಸ್ ಕಳೆದುಕೊಂಡಿದ್ದೇವೆನ್ನುವ ವಿಚಾರಕ್ಕೆ ಬಂದಿದ್ದೇವೆ. ಅದನ್ನು ನಾವು ಎಕ್ಸ್‌ಪ್ರೆಸ್ ಮಾಡಬೇಕಾಗುತ್ತದೆ. ಆ ಒಂದು ಮಾನಿಟರಿಂಗ್ ಕಮಿಟಿ ಬಗ್ಗೆ ನಾವು ವಿರೋಧ ಮಾಡುತ್ತೇವೆಂದು, ಈ ಸದನವೇ ವಿರೋಧ ಇದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಆ ಬಗ್ಗೆ ಒಂದು ನಿರ್ಣಯ ಮಾಡಬೇಕೆಂದು ಹೇಳಿದ್ದೇವೆ. ಅದರ ಜೊತೆಗೆ ವಿ.ಸಿ.ಶುಕ್ಲಾ ಅವರು ಈ ವಿಚಾರದಲ್ಲಿ ನಡೆದುಕೊಂಡ ರೀತಿ ಸರಿಯಿಲ್ಲ ಎನ್ನುವ ಅಭಿಪ್ರಾಯ ಎಲ್ಲಾದರೂ ಒಂದು ಕಡೆ ನಿರ್ಣಯದಲ್ಲಿ ಬರಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) : – ಮಾನ್ಯ ಅಧ್ಯಕ್ಷರೇ, ಉಪಮುಖ್ಯಮಂತ್ರಿಗಳ ಉತ್ತರದಲ್ಲಿ ಸ್ಪಷ್ಟವಾಗದೇ ಇರುವ 2 ಅಂಶಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ದೇವರ ದಯೆಯಿಂದ ಸಾಕಷ್ಟು ಮಳೆಯಾಗಿ ಕಾವೇರಿಯಲ್ಲಿ ನೀರು ಬಂದು ಅದನ್ನು ಬಿಡುತ್ತಿರುವ ಅಂಶವನ್ನು ನಾವು ಕಾಣುತ್ತಿದ್ದೇವೆ. ಆದರೆ ಈ ಒಂದು ಗೊಂದಲ ಪ್ರಾರಂಭ ಆದ ಸಂದರ್ಭದಲ್ಲಿ, ನೀರು ಇಲ್ಲದೇ ಇರತಕ್ಕ ಸಂದರ್ಭದಲ್ಲಿ, ಇಡೀ ಕರ್ನಾಟಕ ರಾಜ್ಯದ ಜನರು ನೀರಿಗೆ ಹಾಹಾಕಾರ ಪಡುತ್ತಿದ್ದ ಸಂದರ್ಭದಲ್ಲಿ, ನಾವು ಈ ರಾಜ್ಯ ಸರ್ಕಾರ ನೀರು ಬಿಟ್ಟಿದೆ, ಇದು ಅನ್ಯಾಯ ಮಾಡುತ್ತಿದೆ, ಮಧ್ಯಂತರ ಆಜ್ಞೆ ಪ್ರಕಾರಸರ್ಕಾರಗಮನಹರಿಸಿ ನೀರು ಬಿಡುತ್ತಿದೆ ಎನ್ನುವ ಅಂಶವನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದಾಗ ಆ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಸ್ಪಷ್ಟ ಮಾಡಿದರು. ನಾವು ನೀರು ಬಿಟ್ಟಿಲ್ಲ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ಸ್ವತಃ ನಾನೇ ಬಿಜೆಪಿ ನಿಯೋಗದಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ನೀರನ್ನು ಬಿಟ್ಟಿದೆ. ಈ ಸರ್ಕಾರ ಈ ರಾಜ್ಯದ ಜನತೆಗೆ ಒಂದು ರೀತಿಯ ಸುಳ್ಳು ಹೇಳಿದೆ, ಮೋಸ ಮಾಡಿದೆ. ಆದಕ್ಕೋಸ್ಕರ ಈ ಬಗ್ಗೆ ನಿಮ್ಮ ಉತ್ತರದಲ್ಲಿ ಏನೂ ಗಮನ ಸೆಳೆದಿಲ್ಲ. ಮುಂದೆ ಉಸ್ತುವಾರಿ ಸಮಿತಿ ಮಾಡಬೇಕೆಂದು ಕೇಂದ್ರ ಸರ್ಕಾರ ಏನು ಪ್ರಯತ್ನ ಮಾಡುತ್ತಿದೆ ಹಾಗೂ ಮಧ್ಯಂತರ ಆಜ್ಞೆ ಏನು ಬಂದಿದೆ ಅದರ ಕ್ರಿಯೆ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಏನೂ ಹೇಳಿಲ್ಲ. ಈ ಎರಡೂ ವಿಚಾರಗಳ ಬಗ್ಗೆ ನಿನ್ನೆ ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದರು. ಪಾರ್ಲಿಮೆಂಟ್‌ನಲ್ಲಿ ಶುಕ್ಲಾ ಅವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ

ಕರ್ನಾಟಕದ ಮುಖ್ಯಮಂತ್ರಿಗಳಿಂದ ಲಿಖಿತ ಉತ್ತರ ಬಂದಿದೆ ಎಂದು ಹೇಳಿದ್ದಾರೆ ಎಂದು ಹೇಳುತ್ತಿದ್ದಾಗ, ಉಪಮುಖ್ಯಮಂತ್ರಿಗಳು ಎದ್ದು ಇಲ್ಲ, ಇಲ್ಲ, ಇಲ್ಲ ಎಂದು ಮೂರು ಸಾರಿ ಹೇಳಿದರು ಅದಕ್ಕೆ ನಮ್ಮ ನಾಯಕರಾದ ಯಡಿಯೂರಪ್ಪನವರು ಸ್ಪಷ್ಟವಾಗಿ ಹೇಳಿದರು. ನೀವು ಹೇಳುತ್ತಿರುವುದ ಸುಳ್ಳು, ಸುಳ್ಳು, ಸುಳ್ಳು ಎಂದು ಹೇಳಿದರು. ಇದರಲ್ಲಿ ಒಂದು ರೀತಿಯ ಸವಾಲು ಹಾಕಿದರು.

ಅಧ್ಯಕ್ಷರು :- ಕ್ಲಾರಿಫಿಕೇಷನ್ ಕೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ :- ಅವರು ಸವಾಲು ಹಾಕಿದರು. ಈ ರೀತಿ ಪಾರ್ಲಿಮೆಂಟ್‌ನಲ್ಲಿ ಉತ್ತರ ಬಂದಿದ್ದರೆ, ನಾನು ಡಾಕ್ಯುಮೆಂಟ್ಸ್ ಕೊಟ್ಟರೆ ತಾವು ಏನು ಮಾಡುತ್ತೀರಿ ಎಂದು ಕೇಳಿದರು. ಇದರ ಬಗ್ಗೆ ಇವರ ಉತ್ತರದಲ್ಲಿ ಏನೂ ಇಲ್ಲ. ಈಗಾಗಲೇ ಶುಕ್ಲಾ ಅವರು ಸ್ಪಷ್ಟ ಮಾಡಿದ್ದಾರೆ. ಈ ರೀತಿ ಮುಖ್ಯಮಂತ್ರಿಗಳಿಂದ ಹೇಳಿಕೆ ಬಂದಿದೆ ಎಂದು ಅಲ್ಲಿ ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ನಮ್ಮ ಮುಖ್ಯಮಂತ್ರಿಗಳು ಹೇಳಿದ್ದು ಸುಳ್ಳು ಇರಬೇಕು, ಇಲ್ಲವೇ ಶುಕ್ಲಾ ಅವರು ಹೇಳಿದ ಅಂಶ ಸುಳ್ಳು ಇರಬೇಕು. ಇವತ್ತು ಈ ಬಗ್ಗೆ ಇಡೀ ದೇಶದಲ್ಲಿ ಗೊಂದಲ ಇದೆ. ಅದಕ್ಕಾಗಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವತ್ತು ಶುಕ್ಲಾ ಅವರ ಹೇಳಿಕೆಯನ್ನು ಖಂಡನೆ ಮಾಡಬೇಕು. ಕೇಂದ್ರದಲ್ಲಿ ಇಂತಹ ಮಂತ್ರಿ ಇರೋದು ನಾಲಾಯಕ್ಕು, ಅಂತಹ ಮಂತ್ರಿಯನ್ನು ಕೇಂದ್ರ ಸರ್ಕಾರದಿಂದ ಕಿತ್ತು ಹಾಕಬೇಕೆಂದು ನಿರ್ಣಯ ಮಾಡಬೇಕಾಗುತ್ತದೆ. ಇಲ್ಲ ಎಂದರೆ ಇಲ್ಲಿ ಇವರು ಸುಳ್ಳು ಹೇಳಿದಹಾಗೆ ಆಗುತ್ತದೆ. ಇಲ್ಲವೇ ಅವರು ಸುಳ್ಳು ಹೇಳಿದ ಹಾಗೆ ಆಗುತ್ತದೆ. ಈ ಎರಡು ಅಂಶವನ್ನು ಸ್ಪಷ್ಟ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಅಧ್ಯಕ್ಷರೆ, ಮೊದಲಿನಿಂದಲೂ ಇದು ರಾಜಕೀಯವಾಗಿ ನಿರ್ಧಾರವಾಗಬೇಕು, ಅದು ನ್ಯಾಯಮಂಡಳಿಯಲ್ಲಿ ತೀರ್ಮಾನವಾಗುವುದಿಲ್ಲ ಎಂದು ಹೇಳುತ್ತಿದ್ದೇವೆ. ರಾಜಕೀಯ ನಿರ್ಧಾರದ ಬಗ್ಗೆ ನಮ್ಮ ಸರ್ಕಾರದ ರಾಜಕೀಯ ತಂತ್ರವೇನು? ರಾಜಕೀಯ ನಿರ್ಧಾರವಾಗಬೇಕಾದರೆ ಯಾವುದಾದರೂ ರೂಪದಲ್ಲಿ ರಾಜಕೀಯ ವ್ಯವಸ್ಥೆಯನ್ನು ನಾವೇನು ಮುಂದೆ ಮಾಡಬೇಕು ಎನ್ನತಕ್ಕದ್ದು ಆ ಸೂತ್ರಗಳು ನಿಮ್ಮಲ್ಲಿ ಏನಿವೆ?

ಶ್ರೀ ಆರ್.ಎನ್.ನಾಯಕ್ : ಇಲ್ಲಿ ಮಾತನಾಡಿದರೆ ಬಹಿರಂಗವಾಗುತ್ತದೆ, ಲೀಡರ್ಸ್ ಎಲ್ಲಾ ಸೇರಿ ನಮ್ಮ ಸರ್ಕಾರದವರು ಸೇರಿ ಒಂದು ಕಡೆ ಕುಳಿತು ಈ ಬಗ್ಗೆ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಕುಮಾರಿ ಜಯಲಲಿತಾರವರ ಸತ್ಯಾಗ್ರಹ ಸರಿಯಲ್ಲವೆಂದು ಬಹಿರಂಗವಾಗಿ ತಾವೆಲ್ಲಾ ಹೇಳಿದ್ದೀರಿ, ನೀವೂ ಹೇಳಿದ್ದೀರಿ, ಸರ್ಕಾರ ಹೇಳಿದೆ, ನಾವೂ ಹೇಳಿದ್ದೇವೆ. ಅದಕ್ಕೆ ಒಂದು ಖಂಡನಾನಿರ್ಣಯವನ್ನು ಈ ಸಭೆಯಲ್ಲಿ ಮಾಡುತ್ತೀರಾ? ಹೊರಗಡೆ ಹೇಳಿದ್ದು ಬೇರೆ. ಆದ್ದರಿಂದ ಈ ಬಗ್ಗೆ ಏನಾದರೂ ಒಂದು ನಿರ್ಣಯವಾಗಬೇಕು. ಈ ಬಗ್ಗೆ ಒಂದು ಖಂಡನಾನಿರ್ಣಯವನ್ನು ತಾವು ಮಾಡುತ್ತೀರಾ? ಈ ಬಗ್ಗೆ ಉಸ್ತುವಾರಿ ಸಮಿತಿಯನ್ನು ಕೇಂದ್ರ ಸರ್ಕಾರ ಮಾಡುತ್ತದೆಂಬ ಆ ತೀರ್ಮಾನಕ್ಕೆ ಬಂದಿರುವಾಗ ತಾವು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದೀರಾ? ಪ್ರಧಾನಮಂತ್ರಿಗಳು ತಮಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ? ಮುಖ್ಯಮಂತ್ರಿಗಳು ಭೇಟಿ ಮಾಡಿದ್ದಾರೆಯೇ? ತಾವು ಭೇಟಿ ಮಾಡಿದ್ದೀರಾ ಅಥವಾ ನಿಯೋಗ ಹೋಗಿದ್ದೀರಾ? ಅದು ಬಂದ ತಕ್ಷಣ ನೀವು ಕೇಂದ್ರ ಸರ್ಕಾರದ ಜೊತೆ ಮಾತುಕತೆಯನ್ನು ಆಡಿರಬೇಕು. ಜಲಸಂಪನ್ಮೂಲ ಸಚಿವರ ಜೊತೆ ನೀವು ಮಾತನಾಡಿರಬೇಕು; ಅವರ ಭರವಸೆ ಏನು? ನಿಮಗೆ ಏನು ಭರವಸೆಯನ್ನು

ಜೊತೆ ನೀವು ಮಾತನಾಡಿರಬೇಕು; ಅವರ ಭರವಸೆ ಏನು? ನಿಮಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ? ನಾವಿಲ್ಲಿ ಚರ್ಚೆ ಮಾಡಿದ್ದೇವೆ. ಇಷ್ಟೊಂದು ಚರ್ಚೆ ಮಾಡಿದ್ದೇವೆ. ಅದು ಬಹಳ ಮುಖ್ಯವಾದುದು ಇನ್ನೂ ಚರ್ಚೆಯಾಗಬೇಕೆಂದು ಚರ್ಚೆ ಮಾಡಿದ್ದೇವೆ. ಈ ಚರ್ಚೆಗೆ ಅಂತಿಮ ಸ್ವರೂಪವಾದ ಒಂದು ನಿರ್ಣಯ ಈ ಸಭೆಯಲ್ಲಿ ಆಗಬೇಕು. ಈ ಚರ್ಚೆ ಇಲ್ಲಿಗೇ ಮುಗಿಯತಕ್ಕದ್ದಲ್ಲ. ನಿರ್ಣಯ ರೂಪದಲ್ಲಿ ತರುವುದಕ್ಕೆ ಏನಾದರೂ ಆಗಲೇಬೇಕು. ಕೇಂದ್ರ ಸರ್ಕಾರದ ವಿರುದ್ಧ ಯಾವುದಾದರೂ ರೀತಿಯಲ್ಲಿ ನಾವು ನಿರ್ಣಯ ತರಲೇಬೇಕು. ಕಾವೇರಿ, ಕೃಷ್ಣ ಈ ಬಗ್ಗೆ ನಿಮ್ಮ ನಿಲುವೇನು? ಈ ನಿರ್ಣಯವನ್ನು ತಾವು ಮಾಡುತ್ತೀರಾ? ತಮ್ಮಲ್ಲಿ ನಾನು ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ, ನಿರ್ಣಯವನ್ನು ಯಾವರೀತಿ ತರುತ್ತೀರಿ ಎಂದು ತಿಳಿಸಬೇಕು; ಕೇಂದ್ರ ಸರ್ಕಾರದ ನೀತಿಯ ಬಗ್ಗೆ ಮತ್ತು ತಮಿಳುನಾಡಿನ ನೀತಿಯ ಬಗ್ಗೆ ಒಂದು ನಿರ್ಣಯ ಬರಬೇಕಾಗಿದೆ.

ಶ್ರೀ ಸಿ.ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದಿಂದ ಬಂದಂತಹ ಮಾನ್ಯ ವಿ.ಸಿ.ಶುಕ್ಲಾರವರ ಜೊತೆ ಮತ್ತು ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿ ಬಹಳ ಚರ್ಚೆ ನಡೆಸಿದ್ದಾರೆ. ಇಲ್ಲಿಂದ ಪತ್ರವನ್ನು ಕೂಡ ಬರೆದಿದ್ದಾರೆ. ಆ ಪತ್ರದಲ್ಲಿ ಒಂದು ಸ್ಪಷ್ಟವಾಗದೇ ಇರತಕ್ಕದ್ದು ಅಂದರೆ ನಮ್ಮ ರಾಜ್ಯದ ಅಸೆಂಬ್ಲಿ ಮತ್ತು ಕೌನ್ಸಿಲ್‌ನ ನಿರ್ಣಯ ಏನಿದೆ, ಈ ಮಧ್ಯಂತರ ಆಜ್ಞೆ ಬಂದಿರತಕ್ಕದ್ದನ್ನು ನಾವು ತಿರಸ್ಕರಿಸಿದ್ದೇವೆ ಎಂಬುದು ಸ್ಪಷ್ಟವಾದ ತೀರ್ಮಾನವಾಗಿದೆ. ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಸರ್ವಾನುಮತದ ತೀರ್ಮಾನವಾಗಿದೆ. ಅದು ಇವತ್ತಿನವರೆಗೂ ಜಾರಿಯಲ್ಲಿದೆಯೋ ಅಥವಾ ಇಲ್ಲವೋ? ಅದಕ್ಕೆ ಸರ್ಕಾರದ ಮನ್ನಣೆ ಇದೆಯೋ ಇಲ್ಲವೋ ಎನ್ನತಕ್ಕದ್ದನ್ನು ತಾವು ಸ್ಪಷ್ಟಪಡಿಸಬೇಕು. ಕಾರಣ ಏನೆಂದರೆ, ಕೇಂದ್ರಸರ್ಕಾರದ ಜೊತೆ ಮಾಡಿರತಕ್ಕ ಪತ್ರವ್ಯವಹಾರದಲ್ಲಿ ಅದನ್ನು ಸ್ಪಷ್ಟಪಡಿಸಬೇಕು. ಅದರಿಂದ ಅನುಮಾನ ಉದ್ಭವವಾಗಿದೆ. ಅದನ್ನು ಸ್ಪಷ್ಟಪಡಿಸುವ ಅವಶ್ಯಕತೆಯಿದೆ. ಎರಡನೆಯದಾಗಿ ಸಲಹಾ ಸಮಿತಿ ಏನಿದೆ, ಇಂಪ್ಲಿಮೆಂಟೇಷನ್ ಕೆಲಸಕಾರ್ಯಗಳು ಯಾವರೀತಿ ನಡೆಯುತ್ತಿವೆ ಎನ್ನುವುದನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆಯಿದೆ. ಆ ಸಭೆಯನ್ನು ತಾವು ಯಾವತ್ತು ಕರೆಯುತ್ತೀರಿ? ಇದರ ಬಗ್ಗೆ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಉಪಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಯವರು) :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಕೇಂದ್ರದ ರಾಜ್ಯಸಚಿವರಾದ ತುಂಗನರವರು ಲೋಕಸಭೆಯಲ್ಲಿ ಒಂದು ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದ ಬಗ್ಗೆ ನೀವು ಏಕೆ ಖಂಡಿಸಲಿಲ್ಲವೆಂದು ಕೇಳಿದರು. ಕೇಂದ್ರಸರ್ಕಾರ ತಾನು ತೆಗೆದುಕೊಂಡಿರತಕ್ಕ ನಿಲುವಿನ ಬಗ್ಗೆ ಸಂಸತ್‌ನಲ್ಲಿ ಪ್ರತಿಪಾದನೆ ಮಾಡುತ್ತದೆ. ರಾಜ್ಯಸರ್ಕಾರ ತಾನು ತೆಗೆದುಕೊಂಡಿರತಕ್ಕ ನಿಲುವಿನ ಬಗ್ಗೆ ವಿಧಾನಸಭೆಯಲ್ಲಿ ಪ್ರತಿಪಾದನೆ ಮಾಡುತ್ತದೆ. ರಾಜ್ಯಸರ್ಕಾರ ತೆಗೆದುಕೊಂಡಿರತಕ್ಕ ನಿಲುವಿನ ಬಗ್ಗೆ ವಿಧಾನಸಭೆಯಲ್ಲಿ ನಾವು ಪ್ರತಿಪಾದನೆ ಮಾಡುವುದರ ಮೂಲಕ ಶ್ರೀಮಾನ್ ತುಂಗನ್‌ರವರಿಗೆ ನಾವು ಉತ್ತರವನ್ನು ಕೊಟ್ಟಿದ್ದೇವೆ. ಮಾನ್ಯ ಚಂದ್ರೇಗೌಡರು ತಮ್ಮ ಭಾಷಣದಲ್ಲಿ ಡಿಸ್ಟ್ರೆಸ್ಡ್ ಸ್ಯುಚಿಯೇಷನ್ ಬಗ್ಗೆ ಈ ನ್ಯಾಯಾಧೀಕರಣದ ಮುಂದೆ ಮಂಡಿಸಿದ್ದೀರಾ ಎಂದು ಕೇಳಿದರು. ನಾವು ಯಾವಾಗ ಮಳೆ ಬರುವುದಿಲ್ಲ ಅಥವಾ ಮಳೆ ಬರುವುದು ಕಡಿಮೆಯಾಗುತ್ತದೆ ಆ ಸೂಚನೆ ಬಂದ ತಕ್ಷಣ ನಮ್ಮ ವಕೀಲರು

ನ್ಯಾಯಾಧೀಕರಣದ ಮುಂದೆ ಇದರ ಬಗ್ಗೆ ಆವೊತ್ತೇ ನೋಟೀಸ್ ಕೊಟ್ಟಿದ್ದಾರೆ. ಅದರ ಬಗ್ಗೆ ಡೇಟ್ ತಮಗೆ ಆಮೇಲೆ ಕೊಡುತ್ತೇನೆ. ಇನ್ನು ಶ್ರೀ ಶುಕ್ಲಾ ಅವರ ಬಗ್ಗೆ ಖಂಡನಾ ನಿರ್ಣಯ ಮಾಡಬೇಕು ಎಂಬುದು. ಖಂಡನಾ ನಿರ್ಣಯ ಮಾಡುವುದರಿಂದ ನಮಗೇನು ಸಮಾಧಾನ? ಈಗ ನಾನು ಹೇಳಿರತಕ್ಕಂಥಾದ್ದೇ ಸಂಶಯದಿಂದ ಬಹಳ ದಿವಸದ ಕೆಳಗೆ ಹೊರಗೆ ಬಂದಹಾಗೆ ಆಯಿತು. ಹೌದು, ನಾನು ಕಾಗದವನ್ನೇ ತಮ್ಮ ಮುಂದೆ ಇಡುತ್ತೇನೆ ಎಂದು ಹೇಳಿದಮೇಲೆ ಇನ್ನೇನು? ಸಂಶಯದ ಸುಳಿಗೆ ನಾನಿನ್ನೂ ಸಿಕ್ಕಿಲ್ಲ. ಆದ್ದರಿಂದ ಅದು ಈಗ ಅಪ್ರಕೃತ ಅಂತ ನನಗನ್ನಿಸುತ್ತದೆ. ಮತ್ತು ಶ್ರೀ ಈಶ್ವರಪ್ಪನವರು ನೀವು ನೀರು ಬಿಟ್ಟೀದ್ದೀರಿ ಅಂತ ಹೇಳಿದರು. ಮುಖ್ಯಮಂತ್ರಿಗಳು ನೀರನ್ನು ಬಿಟ್ಟಿಲ್ಲಅಂತ ಹೇಳುತ್ತಾರೆ. ಈಶ್ವರಪ್ಪನವರು ಹೇಳುತ್ತಾರೆ; ನಾನು ನೋಡಿದ್ದೇನೆ, ನೀವು ನೀರು ಬಿಟ್ಟಿದ್ದೀರಿ ಅಂತ. ನನಗೆ ಮುಖ್ಯಮಂತ್ರಿಗಳಲ್ಲಿ ಹೆಚ್ಚು ವಿಶ್ವಾಸ ಇದೆಯೇ ಹೊರತು ಈಶ್ವರಪ್ಪನವರ ಬಗ್ಗೆ ನನಗೆ ಹೆಚ್ಚು ವಿಶ್ವಾಸ ಇಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಆದನ್ನು ನಾನು ಪ್ರತಿಪಾದನೆ ಮಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ :- ನೀವು ಮುಖ್ಯಮಂತ್ರಿಗಳ ಬಗ್ಗೆ ವಿಶ್ವಾಸ ಇದೆ ಅಂತ ಹೇಳುತ್ತಿರುವುದು ತುಂಬಾ ಆಶ್ಚರ್ಯವಾಗುತ್ತದೆ. ನಾನು ಸ್ವಂತಃ ಕಣ್ಣಾರೆ ನೋಡಿಕೊಂಡು ಬಂದ ವಿಷಯದ ಬಗ್ಗೆ ಈ ರೀತಿ ಮಾತನಾಡಿದರೆ ಏನು ಹೇಳಬೇಕು? ನನಗೂ ಮುಖ್ಯ ಮಂತ್ರಿಗಳ ಬಗ್ಗೆ ವಿಶ್ವಾಸ ಇದೆ. ಇದರಲ್ಲಿ ರಾಜಕೀಯ ನಡೆಯುತ್ತಿದೆ. ಬೇರೆ ಏನೂ ಇಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ :- ಮಾನ್ಯ ಯಡಿಯೂರಪ್ಪನವರು ನಾನು ಹೇಳಿರತಕ್ಕಂಥಾದ್ದು ಸುಳ್ಳು-ಸುಳ್ಳು ಎಂದು ಹೇಳಿದಾಗ ಅವರ ಬ್ರೀಫ್ ಕೇಸನ್ನು ಸದನದ ಮುಂದೆ ಇಟ್ಟು ತೋರಿಸಬೇಕಾಗಿತ್ತು. ನೀವು ಬರೆದುಕೊಟ್ಟಿದ್ದೀರಿ ನೋಡಿ ಅಂತ ಹೇಳಬೇಕಿತ್ತು. ನೀವು ರಾಜೀನಾಮೆ ಕೊಟ್ಟಿದ್ದೀರಿ ಅಂತ ಕೇಳಬಹುದಾಗಿತ್ತು. ಅದುಬಿಟ್ಟು ಆ ಸ್ಥಾನ ಖಾಲಿ ಇದೆ. ಮೊದಲು ಆ ಸ್ಥಾನ ಭರ್ತಿಮಾಡಿ ಅಂತ ಹೇಳಿ. ಆಮೇಲೆ ಉತ್ತರ ಕೊಡುತ್ತೇನೆ ಅವರಿಗೆ. ಶ್ರೀ ವಾಟಾಳ್ ನಾಗರಾಜ್ ಅವರದ್ದು ತಂತ್ರ ಅಂತೆ. ಏನು ತಂತ್ರ ? ತಂತ್ರದ ವಿಚಾರದಲ್ಲಿ ಮುಂದಿನ ಮೀಟಿಂಗ್‌ನಲ್ಲಿ ಅದರ ಬಗ್ಗೆ ಆಲೋಚನೆ ಮಾಡೋಣ. ಶ್ರೀ ಬೈರೇಗೌಡರು ಇದರ ಫಲಶ್ರುತಿ ಏನಾಯಿತು ಎಂದು ಕೇಳಿದರು.

ಶ್ರೀ ವಾಟಾಳ್ ನಾಗರಾಜ್ :- ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದೀರಿ. ಅವರು ಏನು ಭರವಸೆಯನ್ನು ಕೊಟ್ಟಿದ್ದಾರೆ?

ಶ್ರೀ ಎಸ್.ಎಂ.ಕೃಷ್ಣ:- ಮಾನ್ಯ ಚಂದ್ರೇಗೌಡರು ವಿರೋಧ ಪಕ್ಷದ ನಾಯಕರಾಗಿ ಕುಳಿತುಕೊಂಡಿದ್ದಾಗ, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಸಾರಿ ಪ್ರಧಾನಮಂತ್ರಿಗಳ ಜೊತೆಯಲ್ಲಿ ಇಂಟರ್‍ಯಾಕ್ಷನ್ ನಡೆಯಿತು. ಅದರ ಫಲಶ್ರುತಿ ಏನು ಎಂದು ನಾನು ನೋಡಿದೆವು. ನಂತರ ಎರಡನೇ ಸಲ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ನೀವೇ ವಿರೋಧ ಪಕ್ಷದ ನಾಯಕರಾಗಿದ್ದೀರಿ. ಆಗ ಎರಡನೇ ಸಾರಿ ಮುಖಾಮುಖಿಯಾಗಿ ನಡೆಯಿತು. ಅದರ ಫಲಶ್ರುತಿ ಏನು ನಡೆಯಿತು ಎಂಬುದು ತಮಗೇ ಗೊತ್ತು. ಈಗ ಮೂರನೇ ಭಾರಿ ನಾವು, ಸಂಸತ್ ಸದಸ್ಯರು ಪ್ರಧಾನಮಂತ್ರಿಗಳ ಹತ್ತಿರ ಹೋಗಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಮೊರೆ ಇಟ್ಟರು. ಇದನ್ನು ಸರಿಪಡಿಸಿ ಅಂತ ಹೇಳಿದ್ದಕ್ಕೆ ಇದನ್ನು ಗಮನಿಸುತ್ತೇನೆ ಎಂದು ಹೇಳಿದ್ದಾರೆ. ಆದ್ದರಿಂದ ರಾಜ್ಯ

ಸರ್ಕಾರ, ಸಂಸತ್ ಸದಸ್ಯರು ಎಲ್ಲರೂ ಕೂಡ ಪಕ್ಷಬೇಧ ಮರೆತು ರಾಜ್ಯಸರ್ಕಾರದ ಜೊತೆಯಲ್ಲಿ ಸಹಕರಿಸಿ ಮಾನ್ಯ ಪ್ರಧಾನಮಂತ್ರಿಗಳಿಗೆ, ಮತ್ತಿತರರಿಗೆ ನಮ್ಮ ರಾಜ್ಯದ ನೈಜ ಚಿತ್ರವನ್ನು ಅವರು ರೂಪಿಸಿದ್ದಾರೆ. ಅದಕ್ಕೆ ನಾವು ಅಭಾರಿಯಾಗಿದ್ದೇವೆ. ಆದ್ದರಿಂದ ಈ ನಿಲುವಳಿ ಸೂಚನೆಗೆ ತಾವು ಪರವಾನಗಿ ಕೊಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ :- ನೀರಾವರಿ ಮಂತ್ರಿಗಳು ಇವತ್ತು ಮೈತುಂಬಾ ಎಣ್ಣೆ ಹಚ್ಚಿಕೊಂಡು ಬಂದಿದ್ದಾರೆ. ಆದ್ದರಿಂದ ಯಾವ ಪಟ್ಟಿಗೂ ಸಿಕ್ಕುತ್ತಾ ಇಲ್ಲ ಈವತ್ತು. ನೀವು ತಾಂತ್ರಿಕವಾದ ಕಾರಣಗಳಿಂದ ತಪ್ಪಿಸಿಕೊಳ್ಳಬಹುದು. ಆದರೆ ನಿರ್ಧಿಷ್ಟವಾಗಿ ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎನ್ನುವುದು ಬೇಕು. ಅದಕ್ಕಾಗಿ ತಾವು ಹೇಳಿದ್ದೀರಿ, ನಾವು ಪತ್ರ ಬರೆದಿಲ್ಲ ಅಥವಾ ಮೌಖಿಕವಾಗಿ ಯಾವ ಆಶ್ವಾಸನೆಯನ್ನೂ ಕೊಟ್ಟಿಲ್ಲ ಎನ್ನುವುದು ಒಂದು ಭಾಗ ಆಯಿತು. ಇನ್ನೊಂದು ಬಹಳ ಮುಖ್ಯವಾದ ಭಾಗ ಸಂಸತ್ತಿನ ಕಡತದಲ್ಲಿ ಉಳಿದಿದೆ. ಸಂಸತ್ತಿನಲ್ಲಿ ಕೊಟ್ಟ ಹೇಳಿಕೆ ಸರಿಯೋ, ಇಲ್ಲಿ ಹೇಳಿರುವುದು ಸರಿಯೋ ನಮಗೆ ಗೊತ್ತಿಲ್ಲ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ರಾಜ್ಯದ ಸಂಸತ್ ಸದಸ್ಯರು ಕನಿಷ್ಟ ಸಂಸತ್ತಿನಲ್ಲಿ ಈ ವಿಚಾರವನ್ನು ಎತ್ತಿ ಆ ದಾಖಲೆಯನ್ನು ಇಡಿ ಅಂತಲಾದರೂ ಕೇಳಬಹುದಿತ್ತು. ಕರ್ನಾಟಕ ಸರ್ಕಾರ ಬರೆದಿದೆ ಎನ್ನುವ ದಾಖಲೆ ಇಡಿ ಎಂದು ಹೇಳಬಹುದಿತ್ತು. ನಿಮ್ಮನ್ನು ನಾವು ನಂಬುವುದು, ನಮ್ಮನ್ನು ನೀವು ನಂಬುವುದು ಇಲ್ಲಿಗೇ ಆಯ್ತು. ಆದರೆ ಆ ವ್ಯವಹಾರ ಹಾಗೆಯೇ ಉಳಿಯಿತು. ದಯಮಾಡಿ, ನಿಜವಾದ ವಸ್ತುಸ್ಥಿತಿ ಏನು, ಸಂಸತ್‌ನಲ್ಲಿ ನಡೆದಿರುವುದನ್ನು ತರಿಸಿ, ನಮ್ಮ ಗಮನಕ್ಕೆ ತರತಕ್ಕ ಪ್ರಯತ್ನ ಮಾಡಿ ಎಂದು ನನ್ನ ಪ್ರಾರ್ಥನೆ. ಇಲ್ಲದಿದ್ದರೆ, ಅದು ದಾಖಲೆಗಳಲ್ಲಿ ಹಾಗೆಯೇ ಉಳಿಯುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಅವರು ಈ ನಿಲುವಳಿ ಸೂಚನೆಯನ್ನು ತಳ್ಳಿಹಾಕಿ ಎಂದು ತಮಗೆ ಮನವಿ ಮಾಡಿದರು. ಅವರು ಹೇಳಿದ ತಕ್ಷಣ, ತಾವು ತಳ್ಳಿ ಹಾಕುವುದಾದರೆ, ನಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನೂ ತಾವು ಯೋಚನೆ ಮಾಡಬೇಕು. ದಯಮಾಡಿ, ಈ ನಿಲುವಳಿ ಸೂಚನೆ ಬಗ್ಗೆ ತೀರ್ಪು ಕೊಡುವುದಕ್ಕೆ ಮುಂಚೆ ನನಗೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು :-ತಾವು ಈಗಾಗಲೇ ಸಾಕಷ್ಟು ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ :- ನಾವು ತಮಗೆ ಈ ಸಭೆಯಲ್ಲಿ ಕುಮಾರಿ ಜಯಲಲಿತಾ ಅವರ ಬಗ್ಗೆ ಖಂಡನಾ ನಿರ್ಣಯ ಮಾಡಬೇಕೆಂದು ಹೇಳಿದ್ದೇವೆ; ಅದಕ್ಕೆ ಅವರು ತಯಾರಾಗಿಲ್ಲ, ಕೇಂದ್ರ ಸರ್ಕಾರದ ವಿರುದ್ಧ ಖಂಡನಾ ನಿರ್ಣಯ ಮಾಡಬೇಕೆಂದು ಹೇಳಿದೆವು; ಅದಕ್ಕೂ ಅವರು ತಯಾರಾಗಿಲ್ಲ, ಮಾನ್ಯ ವಿ.ಸಿ.ಶುಕ್ಲಾರವರ ವಿರುದ್ಧ ಖಂಡನೆ ಮಾಡಬೇಕೆಂದೆವು, ಅದಕ್ಕೂ ತಯಾರಿಲ್ಲ. ಅಂದಮೇಲೆ, ಬರೀ ಇವರ ಹರಿಕಥೆ ಕೇಳಿಕೊಂಡು ನಮಗೆ ಸಾಕಾಗಿದೆ. ಇವರು ಕಾವೇರಿ, ಕೃಷ್ಣಾ ಯೋಜನೆಗಳನ್ನು ಸಂಪೂರ್ಣವಾಗಿ ಮುಗಿಸುತ್ತಾರೆಂಬ ಬಗ್ಗೆ ನಮಗೆ ನಂಬಿಕೆ ಇಲ್ಲ. ಆದ್ದರಿಂದ, ಈ ಪಾವಿತ್ರ್ಯತೆ ಬಗ್ಗೆ, ಬರೀ ಮಂತ್ರಿಸಿದರೆ ಮಾವಿನಕಾಯಿ ಕೆಳಗೆ ಬೀಳುವುದಿಲ್ಲ. ನೇರವಾಗಿ, ನಿಷ್ಠೂರವಾಗಿ, ದಿಟ್ಟತನದಿಂದ ಈ ಸರ್ಕಾರ ನಡೆದುಕೊಂಡಿಲ್ಲ. ಈ ಸರ್ಕಾರದ ಬಗ್ಗೆ ನಮಗೆ ನಂಬಿಕೆ ಇಲ್ಲವೆಂದು ನಾನು ಸಭಾತ್ಯಾಗ ಮಾಡುತ್ತೇನೆ. ಏಕೆಂದರೆ, ಇದನ್ನು ಲಘುವಾಗಿ ತೆಗೆದುಕೊಳ್ಳುವುದಿಲ್ಲ; ನಮಗೆ ತೀವ್ರ ಅನ್ಯಾಯವಾಗಿದೆ. ಮಾನ್ಯ ನೀರಾವರಿ ಸಚಿವರಾದ ಉಪಮುಖ್ಯಮಂತ್ರಿಗಳಿಂದ ಈ ರೀತಿಯ ಉತ್ತರ ಬರುತ್ತದೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ನನಗೆ ನಿಜವಾಗಿಯೂ ಅತ್ಯಂತ

ನೋವಾಗಿದೆ. ಕರ್ನಾಟಕ ಹಿತ, ಕಾವೇರಿ ಹಿತ, ಹಾಗೂ ಕೃಷ್ಣಾದ ಹಿತವನ್ನು ಕಾಪಾಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ.

( ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಉಪಮುಖ್ಯಮಂತ್ರಿಗಳಿಗೆ, ನೇರವಾಗಿ ಮತ್ತು ಸ್ಪಷ್ಟವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಶುಕ್ಲಾರವರ ಹೇಳಿಕೆಗಳು, ವರ್ತನೆ, ನಮ್ಮ ರಾಜ್ಯದ ವಿರುದ್ಧ ಎಂಬ ವಿಚಾರದಲ್ಲಿ ಯಾವುದೇ ಅನುಮಾನ ಇಲ್ಲ. ಇದನ್ನು ಅವರೂ ಒಪ್ಪಿಕೊಳ್ಳುತ್ತಾರೆ ಇಲ್ಲವೇ ಮನಸ್ಸಿನಲ್ಲಾದರೂ ಒಪ್ಪಿಕೊಳ್ಳುತ್ತಾರೆ. ಹಾಗಾಗಿ ಅವರ ವಿರುದ್ಧ ಒಂದು ಖಂಡನೆ ಮಾಡುವುದಕ್ಕೆ ಏನು ಕಷ್ಟವಾಗುತ್ತಿದೆ, ಒಂದು ನಿರ್ಣಯ ಮಾಡುವುದಕ್ಕೆ ಏನು ಕಷ್ಟವಾಗುತ್ತಾ ಇದೆ. ಇವತ್ತು ಮಾನಿಟರಿಂಗ್ ಕಮಿಟಿ ಮಾಡಬೇಡಿ ಎಂದು ಒಂದು ನಿರ್ಣಯ ಮಾಡುವುದಕ್ಕೆ ಏನು ತೊಂದರೆ ಇದೆ? ಲೋಕಸಭೆಯಲ್ಲಿ ಮಾನ್ಯ ತುಂಗನ್‌ರವರು ಹೇಳಿಕೆ ಕೊಟ್ಟಿದ್ದಾರೆಂದು ಹೇಳಿದರು. ಕೇಂದ್ರಸರ್ಕಾರ ಯಾವಾಗ, ಕರ್ನಾಟಕ ಸರ್ಕಾರದ ಮೇಲೆ ಮಲತಾಯಿಧೋರಣೆ ಮಾಡುತ್ತದೆ, ಆಗ ಸರ್ಕಾರದ ನೀತಿ ಸ್ಪಷ್ಟವಾಗಿರಬೇಕಾಗುತ್ತದೆ. ಹಾಗಾಗಿ ನಾನು ಸ್ಪಷ್ಟವಾಗಿ ಕೇಳುತ್ತೇನೆ. ಖಂಡನಾ ನಿರ್ಣಯ ಮಾಡುವುದಕ್ಕೆ ಏನು ಕಷ್ಟ, ಕೇಂದ್ರಸರ್ಕಾರ ಮಾನಿಟರಿಂಗ್ ಕಮಿಟಿ ಮಾಡಿದರೂ ಸಹ ನಾವು ಒಪ್ಪುವುದಿಲ್ಲ, ಹಾಗೂ ಮಾಡಿದ್ದನ್ನು, physically we will stop it ಎಂದು ಹೇಳುವುದಕ್ಕೆ ಏನು ತೊಂದರೆ, ಕಷ್ಟ ಎಂಬುದನ್ನು ತಮ್ಮನ್ನು ಕೇಳುತ್ತೇನೆ.

ಶ್ರೀ ಸಿ.ಬೈರೇಗೌಡ :- ನಾನು ಗುರುತರವಾದ ಪ್ರಶ್ನೆ ಕೇಳಿದೆ, ಅದಕ್ಕೆ ಉತ್ತರವನ್ನು ಕೊಡಲಿಲ್ಲ. ಅವರು ಉತ್ತರವನ್ನು ಕೊಡುವುದಕ್ಕೆ ಪ್ರಯತ್ನಪಟ್ಟರು; ಅಷ್ಟರೊಳಗೆ ನಮ್ಮ ಸ್ನೇಹಿತರು ಯಾರೋ ಮಾತನಾಡಲು ಎದ್ದರು. ಈ ಸದನದಲ್ಲಿ ಆದ ತೀರ್ಮಾನಕ್ಕೆ ಸರ್ಕಾರ ಬದ್ಧವೇ ಅಲ್ಲವೇ ಎಂಬುದನ್ನು ದಯಮಾಡಿ ಹೇಳಿ. ಇಲ್ಲಿಯೂ ತೀರ್ಮಾನವಾಗಿದೆ, ವಿಧಾನ ಪರಿಷತ್ತಿನಲ್ಲೂ ಕೂಡ ತೀರ್ಮಾನವವಾಗಿದೆ. ಮಧ್ಯಂತರ ಆಜ್ಞೆಯನ್ನು ನಾವು ತಿರಸ್ಕರಿಸಿದ್ದೇವೆ ಎಂದು ಸ್ಪಷ್ಟವಾಗಿ ತೀರ್ಮಾನವಾಗಿರುವುದಕ್ಕೆ ಈಗಲೂ ಸರ್ಕಾರ ಬದ್ಧವೇ ಇಲ್ಲವೇ ಎನ್ನುವುದನ್ನು ಹೇಳಬೇಕು. ಆ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿದ್ದರೆ, ಆ ತೀರ್ಮಾನದ ಆಧಾರದ ಮೇಲೆ, ಕೇಂದ್ರ ಸರ್ಕಾರವಾಗಲೀ, ಯಾವುದೇ ಸರ್ಕಾರವಾಗಲೀ, ಏನೇ ಕ್ರಮ ತೆಗೆದುಕೊಂಡರೂ, ರಾಜ್ಯ ಸರ್ಕಾರ ಅದಕ್ಕೆ ಬದ್ಧವಾಗಿರುವುದಿಲ್ಲ ಎನ್ನತಕ್ಕಂತಾದ್ದನ್ನು ಸ್ಪಷ್ಟ ಪದಗಳಲ್ಲಿ ಹೇಳಿ.

ಶ್ರೀ ಹೆಚ್. ಏಕಾಂತಯ್ಯ :- ಸನ್ಮಾನ್ಯ ಅಧ್ಯಕ್ಷರೇ, ನ್ಯಾಯಾಧಿಕರಣದ ಮಧ್ಯಂತರ ಆಜ್ಞೆಯ ಪ್ರಕಾರ, ನೀರನ್ನು ಬಿಡುವ ವಿಚಾರದಲ್ಲಿ, ಉಸ್ತುವಾರಿ ಸಮಿತಿಯನ್ನು ನೇಮಕ ಮಾಡಲಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದಕ್ಕೆ ನಮ್ಮ ರಾಜ್ಯಸರ್ಕಾರದವರು ನಾವು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಇದು ಕೇವಲ ರಾಜ್ಯಸರ್ಕಾರದ ಹೊಣೆಯಲ್ಲ. ಇಡೀ ಶಾಸನ ಸಭೆ, ಹಿಂದೆ ಇಂತಹ ವಿಚಾರಗಳು ಬಂದಾಗ, ಒಂದು ನಿರ್ಣಯದ ಮುಖಾಂತರ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೇವೆ. ಆದ್ದರಿಂದ, ನಾನು ಉಪಮುಖ್ಯಮಂತ್ರಿಗಳನ್ನು ಕೇಳುವುದು, ಸರ್ಕಾರದ ನಿಲುವಿನ ಬಗ್ಗೆ ತಾವೇನು ಹೇಳುತ್ತೀರಿ, ಅದನ್ನು ಈ ಶಾಸನ ಸಭೆಯ ನಿರ್ಣಯದ ಮುಖಾಂತರ ಏತಕ್ಕೋಸ್ಕರ ದೃಢೀಕರಿಸಬಾರದು, ಏತಕ್ಕೋಸ್ಕರ ಸರ್ಕಾರ ಇದಕ್ಕೆ ವಿರೋಧವಾಗಿದೆ ಎನ್ನುವ ಬಗ್ಗೆ ನನಗೆ ಹೇಳಬೇಕು.

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ಮಾನ್ಯ ಸಭಾಧ್ಯಕ್ಷರೇ, ಅದಕ್ಕೇನು ಕಷ್ಟ ಅಂತ ನನಗೇನೂ ಕಾಣಿಸುತ್ತಿಲ್ಲ. ಕಷ್ಟ ಆಗಬಾರದು. ಏಕೆಂದರೆ ಈಗಾಗಲೇ ಈ ಸದನದಲ್ಲಿ ನಾವು ಮಧ್ಯಂತರ ಆದೇಶವನ್ನು ನಿರಾಕರಿಸಿದ್ದೇವೆ ಎಂದು ಒಂದು ನಿರ್ಣಯ ಇದೆ. ಅದಕ್ಕೆ ಹೊಂದಿಕೊಂಡ ಹಾಗೆ ನಾವು ಈ ಮಾನಿಟರಿಂಗ್ ಕಮಿಟಿಯನ್ನು ನಿರಾಕರಿಸುತ್ತೇವೆ ಎಂದು ಹೇಳಲು ಏನೂ ಕಷ್ಟ ಆಗಬಾರದು ಇದಕ್ಕೆ. It is just a logical step, one step forward. ಆ ಕಾರಣ ಈ ಒಂದು ನಿರ್ಣಯ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ ಅಂತ ನನಗನಿಸುತ್ತದೆ.

ಶ್ರೀ ಎಸ್.ಎಂ. ಕೃಷ್ಣ :- ಈಗಾಗಲೇ ನಾವು ಈ ಎರಡೂ ಸದನಗಳಲ್ಲಿ ನಿರ್ಣಯಗಳನ್ನು ಮಾಡಿದ್ದೇವೆ. ಅದಕ್ಕೆ ನಾವು ಬದ್ಧರಾಗಿರುವಾಗ ಬೇರೆ ಯಾವ ಪ್ರಶ್ನೆಗಳೂ ಉದ್ಭವವಾಗುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ :-ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದರಲ್ಲಿ ಸರ್ಕಾರದ ನೀತಿ ಸ್ಪಷ್ಟವಿಲ್ಲ. ಅದೇ ಪ್ರಕಾರ ಕಾರ್ಯಕ್ರಮಗಳು ನಮಗೆ ಸ್ಪಷ್ಟವಾಗಿ ಕಾಣಿಸುತ್ತಾ ಇಲ್ಲ. ಕೇಂದ್ರ ಸರ್ಕಾರ ಇಷ್ಟೊಂದು ಮಲತಾಯಿಧೋರಣೆಯಿಂದ ಕ್ರಮ ತೆಗೆದುಕೊಳ್ಳುವಾಗ ಅದರ ವಿರುದ್ಧ ಹೋರಾಟಮಾಡುವ ಶಕ್ತಿ ಇವರಲ್ಲಿ ಇಲ್ಲ. ಕಾವೇರಿ ಬೇಸಿನ್ ಫಾರ್ಮರ್ಸ್ ಇಂಟ್ರೆಸ್ಟ್ ಪ್ರೊಟೆಕ್ಟ್ ಮಾಡುವ ಶಕ್ತಿ ಇವರಲ್ಲಿ ಇಲ್ಲ. ಇವತ್ತು ನಿಮ್ಮ ಸರ್ಕಾರಕ್ಕೆ ನಿಜವಾಗಿ ಕಾವೇರಿ ಬೇಸಿನ್ ಫಾಮರ್ಸ್ ಬಗ್ಗೆ ಮತ್ತು ಈ ರಾಜ್ಯದ ಹಿತವನ್ನು ಕಾಯ್ದುಕೊಳ್ಳುವ ಶಕ್ತಿ ಇದ್ದರೆ ತಾವು ಇವತ್ತು ಮಾನಿಟರಿಂಗ್ ಕಮಿಟಿ ಅಪಾಯಿಂಟ್ ಮಾಡಬಾರದು ಎಂದು ನಾವು ಏನು ಸಲಹೆ ಕೊಟ್ಟಿದ್ದೇವೆ ಅದಕ್ಕೆ ತಾವು ಒಪ್ಪಿಕೊಳ್ಳುತ್ತಿದ್ದಿರಿ. ಒಂದು ರೆಸಲ್ಯೂಷನ್‌ಮೂವ್ ಮಾಡುತ್ತಿದ್ದಿರಿ: ಅಷ್ಟೇ ಅಲ್ಲ ಶುಕ್ಲಾರವರ ನಡವಳಿಕೆ ಏನು ಇದೆ ಅದನ್ನೂ ಸಹ ತಾವು ಖಂಡನೆ ಮಾಡುತ್ತಿದ್ದಿರಿ. ಆ ಕೆಲಸವನ್ನು ತಾವು ಮಾಡಿಲ್ಲ; ಹಾಗಾಗಿ ತಮ್ಮ ಸರ್ಕಾರಕ್ಕೆ ಯಾವ ಸಮಸ್ಯೆಯನ್ನೂ ಸಹ ಬಗೆಹರಿಸುವ ಆಸಕ್ತಿ ಇಲ್ಲ; ಕೇವಲ ಕಚ್ಚಾಟದಿಂದ ತಾವು ಮುಖ್ಯಮಂತ್ರಿ ಆಗಬೇಕು ಎಂದು ಏನೆಲ್ಲಾ ಮಾಡುತ್ತಿದ್ದೀರೇ ಹೊರತು ಈ ಒಂದು ಸಮಸ್ಯೆ ಬಗೆಹರಿಸುವ ಚಿಂತನೆ ನಿಮಗೆ ಇಲ್ಲ; ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡುವ ಶಕ್ತಿ ನಿಮಗೆ ಇಲ್ಲ. ಹಾಗಾಗಿ ಅಧಿಕಾರದಲ್ಲಿರುವ ಶಕ್ತಿಯನ್ನೂ ಸಹ ತಾವು ಕಳೆದುಕೊಂಡಿದ್ದೀರಿ. ನೈತಿಕವಾಗಿ ಆಗಲಿ ಕಾಯ್ದೆ ಬದ್ಧವಾಗಿ ಆಗಲಿ, ಆದ್ದರಿಂದ ತಾವು ತಮ್ಮ ನೀತಿಯನ್ನು ವಿರೋಧಿಸಿ ಇವತ್ತು ವಾಕಾಟ್ ಮಾಡುತ್ತೇವೆ.

( ಈ ಸಂದರ್ಭದಲ್ಲಿ ಜನತಾ ದಳದ ಎಲ್ಲಾ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್.ಈಶ್ವರಪ್ಪಾ:- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಬಗ್ಗೆ ಭಯ ಈ ಸರ್ಕಾರಕ್ಕೆ. ಎಲ್ಲಿ ನಮ್ಮನ್ನು ಕಿತ್ತು ಹಾಕಿಬಿಡುತ್ತಾರೋ ಎನ್ನುವ ಧೋರಣೆಯಿಂದ ಈ ನಾಟಕ ಮಾಡುತ್ತಿದ್ದಾರೆ. ಸರ್ಕಾರದ ಈ ಧೋರಣೆಯನ್ನು ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

( ಈ ಸಂದರ್ಭದಲ್ಲಿ ಮಾನ್ಯ ಬಿ.ಜೆ.ಪಿ. ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು) .

ಪ್ರೊ. ಎಂ.ಡಿ.ನಂಜುಂಡಸ್ವಾಮಿ :- ಸನ್ಮಾನ್ಯ ಸಭಾಧ್ಯಕ್ಷರೇ, ನನ್ನದು ಕೊನೆ ಸರದಿ. ನಾನು ಒಂದು ಮಾತು ಹೇಳಿ ನಾನು ಹೊರಹೋಗಬೇಕಾಗುತ್ತದೆ. ಏಕೆಂದರೆ ನಾನು ಈ ಸರ್ಕಾರವನ್ನು ಒಂದೇ ಒಂದು ವಿಷಯ ಕೇಳಿದೆ. ನೀರಿನ ಕಾನೂನು ಸಂಬಂಧಪಟ್ಟ ಹಾಗೆ ರೈತನ ಹಕ್ಕನ್ನು ಯಾರೋ ಮೊಟಕು

ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ಒಂದು ಹೇಳಿಕೆಯನ್ನು ಕೊಡಿ ಅಂತ ನಾನು ಕೇಳಿದೆ; ನಡುವೆ no right is absolute ಎನ್ನುವ ಮಾತೆಲ್ಲಾ ಬಂತು. I wanted to ask our Professor-friend, how do you explain or how do you describe the Right to Breathe?

ಆದುಬೇಡ ಅಂತ ಹೇಳಿ; ಆದರೆ ತಮ್ಮನ್ನು ಕೇಳುತ್ತಿದ್ದೇನೆ. ತಾವು ನಾನು ಕೇಳಿದಂತಹ ಕನಿಷ್ಟ ಒಂದು ಘೋಷಣೆಯನ್ನು ಮಾಡದೇಹೋದರೆ ನಾನೂ ಕೂಡ ಸಭಾತ್ಯಾಗ ಮಾಡಬೇಕಾಗುತ್ತದೆ. ನೀರಿನ ಕಾನೂನಿನ ಚೌಕಟ್ಟಿನಲ್ಲಿ ರೈತನ ನೀರಿನ ಹಕ್ಕನ್ನು ಯಾರೂ ಈ ಜಗತ್ತಿನಲ್ಲಿ ಮೊಟಕು ಮಾಡುವುದಕ್ಕೆ ಅಧಿಕಾರ ಹೊಂದಿಲ್ಲ ಎನ್ನುವ ಘೋಷಣೆಯನ್ನು ಈ ಸರ್ಕಾರ ಮಾಡಿದರೆ ನಾನು ಸದನದಲ್ಲಿ ಉಳಿಯುತ್ತೇನೆ; ಮಾಡಿಲ್ಲ ಅಂದರೆ ನಾನೂ ಹೋಗಬೇಕಾಗುತ್ತದೆ. ನಾನು ತಮ್ಮ ಉತ್ತರಕ್ಕೆ ಕಾಯುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ :- ಮಾನ್ಯ ಪ್ರೊ.ನಂಜುಂಡಸ್ವಾಮಿಯವರು ಏನು ಥೀಸಿಸ್‌ಅನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಅದರ ಬಹು ಭಾಗವನ್ನು ನಾನು ಒಪ್ಪಿದೆ ಆಗ ತಾವು ಇರಲಿಲ್ಲ, ಬಹು ಭಾಗವನ್ನು ನಾನು ಉದಹರಿಸಿದೆ. ಆದ್ದರಿಂದ ನಮಗೂ ನಿಮಗೂ ಹೆಚ್ಚು ಬಿನ್ನಾಭಿಪ್ರಾಯಗಳು ಕಾಣುತ್ತಿಲ್ಲ ಈ ವಿಚಾರದಲ್ಲಿ; ಕೊಂಚ ಏನೆಂದರೆ There is absolute right or could it be a regulated right ಹಾಗೆ ಅಂತ; ಆ ವಿಚಾರದಲ್ಲಿ ಸ್ವಲ್ಪ ನನ್ನ ಮನಸ್ಸಿನಲ್ಲಿ ಶಂಕೆ ಇರುವುದರಿಂದ ತಮ್ಮ ಜೊತೆಯಲ್ಲಿ ಚರ್ಚೆಮಾಡುತ್ತೇನೆ.

Prof. M.D.Nanjundaswamy :- That is why I said what is right to breath? Is it an absolute right or is it a restricted right? What is the right to breath? Because right to water, right to air are similar rights. What is right to breath? Is it not an absolute right?

ಇದರಲ್ಲಿ ಅನುಮಾನ ಬರಬಾರದು, ತಾವು ಕೂಡ ಕಾನೂನು ಪಂಡಿತರು. ಆ ಕಾರಣ ಆ ಒಂದು ಘೋಷಣೆ ಮಾಡಿದರೆ ಸಾಕು. ನೀವು ಬಚಾವತ್‌ಗೂ ರೆಫರ್ ಮಾಡಬೇಕಾಗಿಲ್ಲ. ಈ ಕಾವೇರಿಗೂ ರೆಫರ್‌ಮಾಡಬೇಕಾಗಿಲ್ಲ. Right to breath is absolute right. Right to water is absolute right. I would be very much satisfied if you just say that the right to water of the Karnataka farmers is an absolute right. That is enough.

ಅಧ್ಯಕ್ಷರು :- ಕಳೆದ ಎರಡು ದಿವಸದಿಂದ ಕಾವೇರಿ ನದಿ ನೀರಿನ ಹಂಚಿಕೆ ವಿಷಯದಲ್ಲಿ ಎತ್ತಿದ ವಿಷಯ ನಿಲುವಳಿ ಸೂಚನೆಯಲ್ಲಿ ಪೂರ್ವಾನುಮತಿ ಚರ್ಚೆಗೆ ಸರ್ಕಾರವು ಸೂಕ್ತ ರೀತಿಯ ಉತ್ತರ ನೀಡಿರುವ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ತಡೆ ಹಿಡಿದಿದ್ದೇನೆ. ಈಗ ಸಭೆಯ ಕಾರ್ಯಕಲಾಪಗಳನ್ನು 3 ಗಂಟೆವರೆಗೂ ಮುಂದೂಡಲಾಗಿದೆ.

(ಸದನವು 1-49 ನಿಮಿಷಗಳಿಗೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

ಸದನವು ಪುನಃ 3-05 ಘಂಟೆಗೆ ಪ್ರಾರಂಭವಾಯಿತು

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

ಪ್ರಶ್ನೋತ್ತರಗಳು